بِسْمِ اللهِ الرَّحْمٰنِ الرَّحِيْمِ نَحْمَدُهٗ وَنُصَلِّی عَلٰی رَسُوْلِہِ الْکَرِیْمِ وَعَلٰی عَبْدِہِ الْمَسِیْحِ الْمَوْعُوْدِ

وَلَقَدْ نَصَرَكُمُ اللّٰهُ بِبَدْرٍ وَّاَنْتُمْ اَذِلَّةٌ

ವರ್ಷ: 02

ಕನ್ನಡ **ಬದರ್** ವಾರ ಪತ್ರಿಕೆ

WEEKLY BADAR QADIAN KANNADA

ಸಂಚಿಕೆ: 36

ವಾರ್ಷಿಕ ಶುಲ್ಕ ರೂ.575/-

ಸಂಪಾದಕರು: ತಾರಿಖ್ ಅಹ್ಮದ್ ಇದ್ರೀಸ್.

09 ಸೆಪ್ಟೆಂಬರ್ 2021, 09 ತಬೂಕ್ 1400 ತಬ್‌ಲೀಗ್ ಹಿಜರಿ ಶಮ್ಸಿ, 01 ಸಫರ್ 1443 ಹಿಜರಿ ಖಮರಿ.


## ಅಹ್ಮದಿಯಾ ವಾರ್ತೆ

ಅಲ್‌ಹಮ್ದುಲಿಲ್ಲಾಹ್! ಹುಝೂರ್ ಅನ್ವರ್ ಅಯ್ಯದಹುಲ್ಲಾಹುತಆಲ ಬಿನಸ್ರಿಹಿಲ್ ಅಝೀಝ್‌ರವರು ಆರೋಗ್ಯವಾಗಿದ್ದಾರೆ. ಹುಝೂರ್ ರವರ ಯೋಗಕ್ಷೇಮಕ್ಕಾಗಿ, ಶುಭಕಾರ್ಯಗಳಲ್ಲಿ ಯಶಸ್ಸುಗಳಿಸಲಿಕ್ಕಾಗಿ ದುಆ ಮಾಡುತ್ತಾ ಇರಿ, ಅಲ್ಲಾಹನು ಹುಝೂರ್ ರವರನ್ನು ಪ್ರತಿಕ್ಷಣ ಸಂರಕ್ಷಿಸಲಿ– ಆಮೀನ್

اَللّٰهُمَّ اَيِّدْ اِمَامَنَا بِرُوْحِ الْقُدُسِ وَبَارِكْ لَنَا فِيْ عُمُرِهٖ وَاَمْرِهٖ

## ಅಲ್ಲಾಹನ ಉಪದೇಶ

قُلْ اَتَعْبُدُوْنَ مِنْ دُوْنِ اللّٰهِ مَا لَا يَمْلِكُ لَكُمْ ضَرًّا وَّلَا نَفْعًا ؕ وَاللّٰهُ هُوَ السَّمِيْعُ الْعَلِيْمُ ○

(ಅಲ್‌ಮಾಇದ: 77)

ಅಂದರೆ: ಹೇಳು: 'ಅಲ್ಲಾಹನ ಹೊರತು, ನಿಮಗೇನಾದರೂ ಕೆಡುಕು ಒಳಿತು ಮಾಡಲು ಅಶಕ್ತವಾಗಿರುವಂಥದ್ದನ್ನು ನೀವು ಆರಾಧಿಸುತ್ತೀರೇನು?' ಎಲ್ಲ ಕೇಳುವವನೂ ಎಲ್ಲ ಬಲ್ಲವನೂ ಅಲ್ಲಾಹನೇ ಆಗಿದ್ದಾನೆ.

## ಪ್ರವಾದಿ ಮುಹಮ್ಮದ್(ಸ)ರವರ ಉಪದೇಶ

**ಏಳು ಜನರಿದ್ದಾರೆ. ಅವರನ್ನು ಅಲ್ಲಾಹನು ಆ ದಿನದಂದು ತನ್ನ ನೆರಳಿನಲ್ಲಿ ಸ್ಥಾನ ಕೊಡುವನು.**

(1423) ಹಝ್ರತ್ ಅಬೂ ಹುರೈರ(ರ) ವರದಿ ಮಾಡುತ್ತಾರೆ. ಹಝುರತ್ ರಸೂಲುಲ್ಲಾಹ್(ಸ) ನುಡಿದರು. ಏಳು ಜನರಿದ್ದಾರೆ. ಅವರನ್ನು ಅಲ್ಲಾಹನು ಆ ದಿನದಂದು ತನ್ನ ನೆರಳಿನಲ್ಲಿ ಸ್ಥಾನ ಕೊಡುವನು. ಆ ದಿನ ಅವನ ನೆರಳು ಹೊರತು ಯಾವ ನೆರಳು ಇರದು. ನ್ಯಾಯವಂತ ಬಾದಶಾಹ, ಅಲ್ಲಾಹನ ಆರಾಧನೆಯಲ್ಲಿ ತೊಡಗಿಯೇ ಯೌವನ ಅವಸ್ಥೆಗೆ ಬಂದಿರುವವನು, ಯಾರ ಹೃದಯ ಸಾಷ್ಟಾಂಗ ಪ್ರಣಾಮದಲ್ಲಿಯೇ ಮಗ್ನನಾಗಿಸುವನು, ಮತ್ತು ಯಾವ ವ್ಯಕ್ತಿ ಅಲ್ಲಾಹನೊಂದಿಗೆ ಪ್ರೀತಿಯಿರಿಸಿ ಅದರ ಮೇಲೆ ಸ್ಥಿರತೆ ತೋರಿಸುವನೋ ಮತ್ತು ಅವನಿಗಾಗಿಯೇ ಬೇರ್ಪಡುತ್ತಾನೋ, ಆ ವ್ಯಕ್ತಿಯನ್ನು ಸುಂದರವಾದ ಯುವತಿ ಕರೆ ಕೊಟ್ಟರು ಅವನು ಹೇಳಬೇಕು. ನಾನು ಅಲ್ಲಾಹನಿಗೆ ಭಯಪಡುವೆನು, ಮತ್ತು ಆ ವ್ಯಕ್ತಿ ದಾನ ಮಾಡುವವನಾದರೆ ಆ ದಾನದ ಸುದ್ಧಿ ಅವನ ಬಲಗೈಗೂ ಸಹ ತಿಳಿದುರುವುದಿಲ್ಲ ಅವನು ಏನು ಎಷ್ಟು ಖರ್ಚನ್ನು ಮಾಡಿರುವನು ಎಂದು, ಮತ್ತು ಆ ವ್ಯಕ್ತಿ ಏಕಾಂತದಲ್ಲಿ ಅಲ್ಲಾಹನನ್ನು ಸ್ಮರಿಸಿ ಕಣ್ಣೀರು ಸುರಿಸಿರಬೇಕು.

(1424) ಹಝ್ರತ್ ಹಾರ್ಸ್ ಬಿನ್ ವಹಬ್ ಖುಝಾಯಿ ವರದಿ ಮಾಡುತ್ತಾರೆ. ನಾನು ನಬಿ(ಸ) ಅವರಿಂದ ಆಲಿಸಿರುತ್ತೇನೆ. ಅವರು ನುಡಿಯುತ್ತಿದ್ದರು. ದಾನ (ಸದಖಾ) ಮಾಡಿರಿ. ಸದ್ಭವಿಷ್ಯದಲ್ಲಿ ಇಂತಹ ಕಾಲವೊಂದು ಬರಲಿದೆ, ಮನುಷ್ಯನು ಸದಖಾ (ದಾನ) ಮಾಡಲು ತಿರುಗಾಡುವನು. ಬೇರೊಬ್ಬ ಮನುಷ್ಯ ಅವನಿಗೆ ಹೇಳುವನು. ನೀನು ನಿನ್ನೆ ತರುತ್ತಿದ್ದರೆ ಅವಶ್ಯವಾಗಿ ಸ್ವೀಕರಿಸುತ್ತಿದ್ದೆ. ಆದರೆ ಇಂದು ನನಗೆ ಅದರ ಅಗತ್ಯವಿಲ್ಲ.

**(ಸಹೀ ಬುಖಾರಿ ಸಂಪುಟ-3, ಕಿತಾಬುಝ್ಝಕಾತ್ ಮುದ್ರಣ 2008 ಖಾದಿಯಾನ್)**

**ನೋಡಿರಿ ಮಗು ಅಳಲು ಪ್ರಾರಂಭಿಸಿದರೆ ಮತ್ತು ದು:ಖಿತನಾದರೆ ತಾಯಿಯು ಎಷ್ಟೊಂದು ವಿಚಲಿತಗೊಂಡು ಮಗುವನ್ನು ಹಾಲು ನೀಡುತ್ತಾಳೆ.**

**ಅಲ್ಲಾಹನ ಕಾರುಣ್ಯ ಹಾಗೂ ಅನುಗ್ರಹದ ಹಾಲು ಸಹ ಅಳಲು ದು:ಖವನ್ನು ಬಯಸುತ್ತದೆ, ಆದುದರಿಂದ ಅವನ ಮುಂದೆ ಅಳು ತುಂಬಿದ ನಯನಗಳನ್ನು ಪ್ರಸ್ತುತಪಡಿಸಬೇಕಾಗಿದೆ.**

**ಸಯ್ಯದುನಾ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಅವರ ಅಧ್ಯಾಪನೆಗಳು**

### ನಮಾಝಿನ ನಿಜವಾದ ಉದ್ದೇಶ ಮತ್ತು ತಿರುಳು ದುಆ ಆಗಿದೆ.

ನಮಾಝಿನ ನಿಜವಾದ ಉದ್ದೇಶ ಮತ್ತು ತಿರುಳು ದುಆ ಆಗಿದೆ. ದುಆ ಅಲ್ಲಾಹನ ಶಕ್ತಿ ಸಾಮರ್ಥ್ಯ ಕಾನೂನು ನಿಯಮದಂತೆಯೇ ದುಆ ಆಗಿದೆ. ಸಾಮಾನ್ಯವಾಗಿ ನೋಡುತ್ತೇವೆ. ಮಗು ಅಳಲು ಪ್ರಾರಂಭಿಸಿದರೆ ಮತ್ತು ದು:ಖಿತನಾದರೆ ತಾಯಿಯು ಎಷ್ಟೊಂದು ವಿಚಲಿತಗೊಂಡು ಮಗುವನ್ನು ಹಾಲು ನೀಡುತ್ತಾಳೆ. ದೈವತ್ವ ಮತ್ತು ದಾಸತ್ವದಲ್ಲಿ ಅದೇ ತರಹದ ಒಂದು ಸಂಬಂಧವಿದೆ. ಅದನ್ನು ಪ್ರತಿಯೊಬ್ಬ ವ್ಯಕ್ತಿ ತಿಳಿಯಲಾರನು. ಮನುಷ್ಯನು ಅಲ್ಲಾಹನ ಸನ್ನಿಧಿಯಲ್ಲಿ ಬಿದ್ದು ಅತ್ಯಂತ ವಿನಯದಿಂದ ಮತ್ತು ನಿಷ್ಠೆಯಿಂದ ತನ್ನ ಅವಸ್ಥೆಯನ್ನು ಮುಂದಿಟ್ಟು ಮತ್ತು ತನ್ನ ಬೇಡಿಕೆಗಳನ್ನು ಮುಂದಿಟ್ಟು ಕೇಳಿಕೊಂಡಾಗ ದೈವತ್ವದ ಕರುಣೆ ಉಕ್ಕಿ ಬರುತ್ತದೆ ಮತ್ತು ಅವನ ಮೇಲೆ ದಯೆ ತೋರಲಾಗುತ್ತದೆ.

**ಕಳವಳ**

ಅಲ್ಲಾಹನ ಕಾರುಣ್ಯ ಮತ್ತು ಅನುಗ್ರಹರೂಪಿ ಹಾಲು ಸಹ ಕಳವಳವನ್ನು ಬಯಸುತ್ತದೆ. ಆದುದರಿಂದ ಅವನ ಮುಂದೆ ಅಳಲು ತುಂಬಿದ ನಯನ ಪ್ರಸ್ತುತಪಡಿಸಬೇಕಾಗಿದೆ. ಅಲ್ಲಾಹನ ಮುಂದೆ ಅತ್ತರೆ, ಬಿದ್ದರೆ ಏನೂ ಸಿಗುವುದಿಲ್ಲ ಎಂಬ ವಾದ ತಪ್ಪು ಮತ್ತು ಮಿಥ್ಯವಾಗಿದೆ. ಅಂತಹ ಜನರು ಅಲ್ಲಾಹನ ಅಸ್ತಿತ್ವ ಮತ್ತು ಅವನ ಗುಣ ವಿಶೇಷತೆಗಳ ಮತ್ತು ಶಕ್ತಿ ಸಾಮರ್ಥ್ಯಗಳ ಮೇಲೆ ವಿಶ್ವಾಸ ಹೊಂದಿದವರಾಗಿರುವುದಿಲ್ಲ. ಅವರು ತಮ್ಮಲ್ಲಿ ನಿಜವಾದ ನಂಬಿಕೆಯಿರಿಸಿದವರಾಗುತ್ತಿದ್ದರೆ ಅಂತಹ ಮತು ಎಂದೂ ಹೇಳುತ್ತಿರಲಿಲ್ಲ. ಒಬ್ಬನು ಎಂದೆಂದೂ ನಿಜವಾದ ಪಶ್ಚಾತ್ತಾಪದೊಂದಿಗೆ ಅಲ್ಲಾಹನ ಮುಂದೆ ಹಾಜರಾಗುವನೋ, ಅಲ್ಲಾಹನು ಅವನಿಗೆ ನಿಜವಾಗಿಯೂ ಕರುಣಿಸುತ್ತಾನೆ. ಯಾರೊಬ್ಬನು ಹೇಳಿದ ಈ ಮಾತು ಬಲು ಸತ್ಯವಾಗಿದೆ.

ಆಶಿಕ್ ಶುದ್ದ ಕೆ ಯಾರ್ ಬಹಾಶೂರ್ ನಝ್ಹಾರ್ ನ ಕಿಣೋ

ಅಯೇ ಖಾಜಾ ದರ್ಜೆ ನೀಸ್ತ್ ವಗರ್‌ನ ತಬೀಬ್ ಹತ್ತೆ

ಅನುವಾದ: ಯಾರು ಪ್ರೀತಿಸಿ ತನ್ನ ಪ್ರಿಯತಮೆಯನ್ನು ಮರೆತುಬಿಟ್ಟಿದ್ದಾನೆ. ರೋಗಶಮನ ಬಯಸುವವನೇ ಇಲ್ಲ. ವೈದ್ಯ ಉಪಸ್ಥಿತನಿದ್ದಾನೆ.

ಅಲ್ಲಾಹನು ಪರಿಶುದ್ಧ ಮನಸ್ಸಿನೊಂದಿಗೆ ಬರುವವನಿಗೆ ಬರಮಾಡಿಕೊಳ್ಳಬಯಸುತ್ತಾನೆ. ಶರತ್ತೇನೆಂದರೆ ಅವನು ಬಯಸಿದ ಹಾಗೆ ತಮ್ಮನ್ನು ರೂಪಿಸಿಕೊಳ್ಳಿ ಮತ್ತು ನಿಜವಾದ ಪರಿವರ್ತನೆ

*(ಪುಟ ಸಂಖ್ಯೆ–08 ರಲ್ಲಿ ಮುಂದುವರಿಸಲಾಗಿದೆ)*

**ಸತ್ಯವನ್ನು ಸ್ವೀಕರಿಸಲು ಊಟೋಪಚಾರದಲ್ಲಿ ಸರಳತೆ, ಲೌಕಿಕ ವ್ಯಾಮೋಹದಿಂದ ದೂರವಿರುವುದು ಮತ್ತು ಅಮಲ ಪದಾರ್ಥಗಳಿಂದ (ಮಧ್ಯ ಸೇವನೆ) ದೂರವಿರುವುದು ಅವಶ್ಯವಾಗಿರುತ್ತದೆ. ಯಾರಾದರೂ ಈ ಮೂರು ಮಾತುಗಳಿಂದ ದೂರವಿರಲಿಲ್ಲವಾದರೆ ಅವನು ಸತ್ಯಶೋಧಿಸುವುದು ವ್ಯರ್ಥ, ಅವನಿಗೆ ಸತ್ಯ ಕಂಡುಬಂದರೂ ಸತ್ಯ ಸ್ವೀಕಾರದಿಂದ ವಂಚಿತನಾಗಿರುವನು.**

ಸಯ್ಯದ್‌ನಾ ಹಝ್ರತ್ ಮುಸ್ಲಿಹ್ ಮೌಊದ್(ರ) ಸೂರಃ ಅಲ್‌ಹಿಜರ್ ವಚನ 4 **ಝರ್‌ಹುಮ್ ಯಕುಲೂ ವಯತಮತ್ತೂ ವಯುಲ್‌ಹಿಹಿಮುಲ್ ಅಮಲು ಫಸೌಫ ಯಅಲಮೂನ್** ವ್ಯಾಖ್ಯಾನ ಮಾಡುತ್ತಾ ಹೇಳುತ್ತಾರೆ. ಈ ವಚನದಲ್ಲಿ ತಿಳಿಸಲಾಗಿದೆ. ವಿವಿಧ ಸಮಸ್ಯೆಗಳಲ್ಲಿ ಜನರು ಇಸ್ಲಾಮಿನ ಮಹತ್ವವನ್ನು ಒಪ್ಪಿಕೊಳ್ಳುವವರಾದರೂ ಇಸ್ಲಾಮಿನತ್ತ ಬರಲು ಸಾಧ್ಯವಾಗುವುದಿಲ್ಲ. ಯೂರೋಪಿನ ಜನರು ಇಸ್ಲಾಮಿ ಸಮಸ್ಯೆಗಳ ಉಪಯುಕ್ತತೆಯನ್ನು ಮನ್ನಿಸುತ್ತಾರೆ. ಆದರೆ ಇಸ್ಲಾಮ್ ಸ್ವೀಕರಿಸಲು ಸಿದ್ಧರಿರುವುದಿಲ್ಲ. ಏಕೆಂದರೆ ಸಮಾಜದ ಪ್ರಶ್ನೆ ಮುಂದಿರುತ್ತದೆ.

ಹೇಳಿದರು. ಅವರು ತಮ್ಮ ಮಧ್ಯ ಸೇವನೆ,

*(ಪುಟ ಸಂಖ್ಯೆ–08 ರಲ್ಲಿ ಮುಂದುವರಿಸಲಾಗಿದೆ)*

لَآ اِلٰہَ اِلَّا اللّٰہُ مُحَمَّدٌ رَّسُوۡلُ اللّٰہِ

**ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್**

**ಅವರ ಬಹುಮಾನದ ಪಂಥಾಹ್ವಾನ**

**ಹರ್ ಮುಖಾಲಿಫ್ ಕೊ ಮುಖಾಬಿಲ್ ಪೆ ಬುಲಾಯ ಹಮ್ ನೇ**

ಎಲ್ಲಾ ವಿರೋಧಿಯರನ್ನು ಪ್ರತಿವಾದಿಸಲು ಆಹ್ವಾನಿಸಿದೆವು ನಾವು.

اِنَّ السُّمُوۡمَ لَشَرُّ مَا فِی الۡعَالَمِ ✿ شَرُّ السُّمُوۡمِ عَدَاوَۃُ الصُّلَحَاۗءِ

**ವಿವಾದದ ನಂತರ ಅಬ್ದುಲ್ ಹಕ್ ಅವರಿಗೆ ಅವಮಾನವಾಗಿಲ್ಲ ಎಂದು ನ್ಯಾಯಾಧೀಶರು ಪ್ರಮಾಣ ಮಾಡಿದರೆ ಮೌಲ್ವಿ ಅಬ್ದುಲ್ ಹಕ್ ಘಜ್ನವಿಗೆ ಐದು ನೂರು ರೂಪಾಯಿಗಳ ಬಹುಮಾನ**

**ಅಬ್ದುಲ್ ಹಖ್‌ರಿಂದ ಮುಬಾಹ ನಂತರ ಹಝ್ರತ್ ಮಸೀಹ್ ಮೌಊದ್ (ಅ) ರವರ ಮೇಲೆ ಅವತರಿಸಿದ ಹತ್ತು ಅನುಗ್ರಹಗಳು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಮತ್ತು ಅಬ್ದುಲ್ ಹಖ್ ನಡುವೆ ಆದ ಮುಬಾಹಲದ ಸಂಕ್ಷಿಪ್ತ ವಿವರ ನಾವು ಹಿಂದಿನ ಸಂಚಿಕೆಗಳಲ್ಲಿ ನೀಡಿರುತ್ತೇವೆ. ಅಬ್ದುಲ್ ಹಖ್ ಗಝ್ನವಿ ಮುಬಾಹಲದಲ್ಲಿ ಶಾಪ ಹಾಕಿದ್ದರು. ಎಲ್ಲಾ ರೀತಿಯ ಅಪಮಾನ ಮತ್ತು ಶಾಪ (ನೌಝುಬಿಲ್ಲಾಹ್ ಮಿನ್ ಜಾಲಿಕ್) ಅವರಿಗೆ ದಯಪಾಲಿಸಲಿ ಮತ್ತು ಎಲ್ಲಾ ಅನುಗ್ರಹ ಕಾರುಣ್ಯಗಳಿಂದ ವಂಚಿಸಲಿ ಎಂದು ಪ್ರಾರ್ಥಿಸಿದ್ದರು. ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಗ್ರಂಥ "ಅಂಜಾಮ್ ಆಥಮ್" ಮತ್ತು ಅದೇ ರೀತಿಯ ತನ್ನ ಇತರ ಗ್ರಂಥಗಳಲ್ಲಿ ಅದರ ಉತ್ತರ ನೀಡಿದ್ದಾರೆ. ವಾಸ್ತವದಲ್ಲಿ ಮುಬಾಹಲ ನಂತರ ಎಲ್ಲಾ ರೀತಿಯ ಅನುಗ್ರಹಗಳು ಮತ್ತು ಕಾರುಣ್ಯಗಳು ಅಲ್ಲಾಹನು ಅವರಿಗೆ ದಯಪಾಲಿಸಿದ್ದಾನೆ ಮತ್ತು ಅಬ್ದುಲ್ ಹಖ್ ಗಝ್ನವಿ ಪಾಲಿಗೆ ಅಪಮಾನ ಅಸಫಲತೆ ಹೊರತು ಏನೂ ದಕ್ಕಲಿಲ್ಲ. ಈ ಪೈಕಿ ಅವರ ಕೆಲ ಅಧ್ಯಾಪನೆಗಳು ನಾವು ಮೊದಲೇ ಪ್ರಸ್ತುತಪಡಿಸಿದ್ದೇವೆ. ಇನ್ನು ಕೆಲವು ಅಧ್ಯಾಪನೆಗಳು ಕೆಳಗೆ ನಮೂದಿಸಲಿದ್ದೇವೆ. ಅವರು ನುಡಿದರು. "ಒಂದು ವೇಳೆ ಯಾರದರು ಪ್ರಶ್ನಿಸಿದರೆ–ಅಬ್ದುಲ್ ಹಖ್ "ಮುಬಾಹಲದಲ್ಲಿ ಯಾವುದೇ ಶಾಪ ಬಯಸಲಿಲ್ಲವಾದರೂ, ಸತ್ಯವಂತನ ಮುಂದೆ ಮುಬಾಹಲಕ್ಕಾಗಿ ಎದುರು ಬಂದರೆ, ಏನಾದರೂ ಅವರಿಬ್ಬರ ನಡುವೆ ಅಪಮಾನ ಅಸಫಲತೆ ಮತ್ತು ಗೌರವದ ಸ್ಪಷ್ಟತೆ ಆಗಬೇಕಾಗುತ್ತದೆ. ಆದುದರಿಂದ ಅವೆಲ್ಲ ಪುರಾವೆಗಳನ್ನು ವಿವರವಾಗಿ ಈ ಕೆಳಗೆ "ವಲ್‌ಆಖಿಬತು ಅಲ್‌ಮುತ್ತಖೀನ್' ದೃಷ್ಟಿಯಿಂದ ಯಾವ ರೀತಿ ನಮ್ಮ ಗೌರವಕ್ಕೆ ಕಾರಣವಾಗಿವೆ ಎಂಬುದನ್ನು ನಮೂದಿಸುತ್ತಿದ್ದೇವೆ.

1) ಆಥಮನ ಬಗ್ಗೆ ಮಾಡಲಾದ ಭವಿಷ್ಯವಾಣಿ ಅದು ನಿಖರ ರೂಪದಲ್ಲಿ ಪೂರ್ಣಗೊಂಡಿದೆ. ಮತ್ತು ಬರಾಹೀನ್ ಅಹ್ಮದಿಯಾ ಪುಟ 241 ರಂದು ಆದ ಹದಿನೈದು ವರ್ಷಗಳ ಹಿಂದಿನ ಭವಿಷ್ಯವಾಣಿ ಸಹ ಪೂರ್ಣಗೊಂಡಿದೆ. ಆಥಮನು ಅಸಲು ಭವಿಷ್ಯವಾಣಿಯ ಪ್ರಕಾರ ಸತ್ತು ಹೋದನು. ಎಲ್ಲಾ ವಿರೋಧಿಗಳಿಗೆ ಸೋಲಾಯಿತು ಮತ್ತು ಅವರ ಎಲ್ಲ ಸುಳ್ಳು ಸಂತೋಷಗಳು ಮಣ್ಣುಮುಕ್ಕಿದವು. ಈ ಭವಿಷ್ಯವಾಣಿಯ ಘಟನೆಗಳನ್ನು ಕೇಳಿ ನೂರಾರು ಜನರ ಅವಿಶ್ವಾಸ ದೂರವಾಯಿತು ಮತ್ತು ಸಾವಿರಾರು ಪತ್ರಗಳು ಅದರ ಸತ್ಯತೆ ಕುರಿತು ದೃಢೀಕರಿಸಲಾಯಿತು. ಹೀಗೆ ಎಲ್ಲಾ ವಿರೋಧಿಗಳ ಮೇಲೆ ಸುಳ್ಳುಗಾರರ ಮೇಲೆ ತಲೆ ಎತ್ತುವಂತಹ ಶಾಪದ ಪೆಟ್ಟು ಅವರ ಮೇಲೆ ಬಿದ್ದಿದೆ.

2) ಮುಬಾಹಲದ ನಂತರ ನನ್ನ ಗೌರವಕ್ಕೆ ಪಾತ್ರವಾಗುವಂತಹ ಎರಡನೆಯ ವಿಷಯವೆಂದರೆ, ಆ ಅರಬಿ ಪತ್ರಿಕೆಗಳಾಗಿವೆ. ಅದು ಎಲ್ಲಾ ವಿರೋಧಿ ಮೌಲ್ವಿಗಳಿಗೆ ಮತ್ತು ಪಾದ್ರಿಗಳಿಗೆ ಅಪಮಾನಿಸಲು ಬರೆಯಲಾಗಿತ್ತು. ಅವುಗಳಲ್ಲಿಯೇ ಈ ಅರಬಿ ಪತ್ರವು ಒಂದಾಗಿದೆ. ಅಬ್ದುಲ್ ಹಖ್ ಮತ್ತು ಅವನ ಇತರ ಸಹೋದರರು ಈ ಪತ್ರಿಕೆಗಳ ಎದುರು ಸೋಲಲಿಲ್ಲವೇ, ಏನು ಬರೆಯಲು ಸಾಧ್ಯವಾಗಲಿಲ್ಲ. ಲೋಕವೇ ಈ ನಿರ್ಣಯಕ್ಕೆ ಬಂದಿದೆ. ಅರಬಿ ಸಾಹಿತ್ಯದ ಗೌರವ ಈ ವಿನೀತನಿಗೆ ದೊರೆತಿದೆ, ನನ್ನನ್ನು ಅವಿಶ್ವಾಸಿ (ಕಾಫಿರ್) ಎಂದ ಮೌಲ್ವಿಗಳೆಲ್ಲಾ ಪರಾಜಿತರಾದರು.

3) ಮುಬಾಹಲದ ನಂತರ ನನ್ನ ಗೌರವಕ್ಕೆ ಪಾತ್ರರಾದ ಮೂರನೇ ಕಾರ್ಯವೆಂದರೆ ಮುಬಾಹಲ ನಂತರ ಲೋಕದಾದ್ಯಂತ ನನ್ನ ಹೆಸರು ತಲುಪಿತು. ಮುಬಾಹಲಕ್ಕಿಂತ ಮುಂಚೆ ನನ್ನ ಜೊತೆ ಕೇವಲ ಮೂರು ನಾಲ್ಕು ನೂರು ಜನರಷ್ಟೇ ಇದ್ದರು. ಈಗ ಅದು 8 ಸಾವಿರಕ್ಕಿಂತ ಅಧಿಕವಾಗಿವೆ. ಅವರು ಈ ಮಾರ್ಗದಲ್ಲಿ ತ್ಯಾಗ ಮಾಡುವವರಾಗಿದ್ದಾರೆ. ಯಾವ ರೀತಿ ಫಲವತ್ತಾದ ಭೂಮಿಯಲ್ಲಿ ಬೆಳೆಗಳು ಚೆನ್ನಾಗಿ ಮತ್ತು ವೇಗವಾಗಿ ಬೆಳೆಯುತ್ತದೆಯೋ ಅದೇ ರೀತಿ ಪವಾಡ ಸದೃಶ್ಯವಾಗಿ ಜಮಾಅತ್ ಅಭಿವೃದ್ಧಿ ಹೊಂದುತ್ತಿದೆ. ಸಜ್ಜನ ಆತ್ಮಗಳು ಈ ಕಡೆ ಧಾವಿಸಿ ಬರುತ್ತಿವೆ. ಮತ್ತು ಅಲ್ಲಾಹನು ಭೂಮಿಯನ್ನು ನಮ್ಮತ್ತ ಸೆಳೆಯುತ್ತಿದ್ದಾನೆ. ಮುಬಾಹಲ ನಂತರವೇ ಒಂದು ಅದ್ಭುತ ರೀತಿಯ ಸ್ವೀಕೃತಿ ಭಾವನೆ ಹರಡಿವೆ. ಅದನ್ನು ನೋಡಿ ರೋಮಾಂಚನ ಉಂಟಾಗುತ್ತದೆ. ಒಂದೆರಡು ಇಟ್ಟಿಗೆಗಳಿಂದ ಇದೀಗ ಒಂದು ಅರಮನೆ ಸಿದ್ಧಗೊಂಡಿದೆ. ಒಂದೆರಡು ಹನಿಗಳಿಂದ ಇದೀಗ ಒಂದು ಹೊಳೆ ಹರಿದಂತಾಗಿದೆ. ಈಗಲಾದರೂ ಕಣ್ಣು ತೆರೆಯಿರಿ ಮತ್ತು ಪಂಜಾಬ್ ಹಾಗೂ ಭಾರತದಲ್ಲೆಡೆ ಸಂಚರಿಸಿರಿ. ಈಗ ಹಲವು ಸ್ಥಳಗಳಲ್ಲಿ ನಮ್ಮ ಜಮಾಅತ್ ಕಾಣುವಿರಿ. ದೇವದೂತರು (ಪರೀಕ್ಷೆ) ಕಾರ್ಯ ಎಸಗುತ್ತಿದ್ದಾರೆ ಮತ್ತು ಹೃದಯಗಳಲ್ಲಿ ಪ್ರಕಾಶ ಬೀರುತ್ತಿದ್ದಾರೆ. ಅಂದ ಹಾಗೆ ನೋಡಿರಿ ಮುಬಾಹಲ ನಂತರ ಎಂತಹ ಗೌರವ ನಮಗೆ ದೊರೆತಿದೆ. ಸತ್ಯವಾಗಿ ಹೇಳಿರಿ. ಇದು ಅಲಾಹನ ಕೃಪೆಯೇ ಅಥವ ಮಾನವನ ಕಾರ್ಯವೆ?

4) ನನ್ನ ಗೌರವಕ್ಕೆ ಪಾತ್ರರಾದ ನಾಲ್ಕನೇ ದೃಷ್ಟಾಂತ ರಂಝಾನ್ ತಿಂಗಳಿನಲ್ಲಿ ಉಂಟಾದ ಸೂರ್ಯ, ಚಂದ್ರ, ಗ್ರಹಣವಾಗಿದೆ. ಹದೀಸು ಗ್ರಂಥಗಳಲ್ಲಿ ನೂರಾರು ವರ್ಷ ಹಿಂದಿನಿಂದಲೇ ಬರೆದ ಪುರಾವೆಗಳಿವೆ. ಮಹದಿಯ ಸತ್ಯ ದೃಢೀಕರಿಸಲು ರಂಝಾನಿನಲ್ಲಿ ಸೂರ್ಯ, ಚಂದ್ರ, ಗ್ರಹಣ ಉಂಟಾಗುವುದು ಎಂದು. ಇಂದಿನವರೆಗೆ ಯಾರೂ ಸಹ ಬರೆದಿಲ್ಲ. ಮಹದಿಯ ದಾವೆಯ ಉಪಸ್ಥಿತಿಯಲ್ಲಿ ಈ ದೃಷ್ಟಾಂತ ಉಂಟಾಗಿತ್ತು ಎಂದು. ಅಲ್ಲಾಹನು ಅವನಿಗೆ ಈ ಗೌರವ ನೀಡಿರಬೇಕು. ಅದರಂತೆಯೇ ರಂಝಾನಿನಲ್ಲಿ ಸೂರ್ಯ, ಚಂದ್ರ, ಗ್ರಹಣ ಉಂಟಾಗಿದೆ. ಅಂದ ಹಾಗೆ ಮುಬಾಹಲ ನಂತರ ನನಗೆ ಈ ಗೌರವವೂ ದೊರೆತಿದೆ. ಓ ಮೂಢರೇ! ಈಗಲಾದರೂ ಯೋಚಿಸಿರಿ. ಮುಬಾಹಲ ನಂತರ ಯಾರಿಗೆ ಗೌರವ ದೊರೆತಿದೆ. ಅಬ್ದುಲ್ ಹಖ್ ಅಂತೂ ನನ್ನ ಅಪಮಾನಕ್ಕಾಗಿ ಪ್ರಾರ್ಥಿಸುತ್ತಿದ್ದ. ಇದೇನು ಘಟನೆ ಘಟಿಸಿತು. ಆಕಾಶವು ನನ್ನ ಗೌರವಕ್ಕಾಗಿ ವಾಲಿದೆ. ನಿಮ್ಮಲ್ಲಿ ಒಬ್ಬರಾದರೂ ಯೋಚಿಸುವವರಿಲ್ಲವೆ? ಈ ವಾತನ್ನು ಯೋಚಿಸಬೇಕು. ನಿಮ್ಮಲ್ಲಿ ಒಂದು ಹೃದಯವು ಈ ವಾತನ್ನು ಅರಿಯುವಂತಹದಿಲ್ಲವೆ, ಭೂಮಿಯು ಗೌರವ ನೀಡಿದೆ. ಆಕಾಶವು ಗೌರವ ನೀಡಿದೆ ಮತ್ತು ನನ್ನ ಸ್ವೀಕೃತಿ ಹರಡಿದೆ.

5) ಮುಬಾಹಲ ನಂತರ ನನ್ನ ಗೌರವಕ್ಕೆ ಪಾತ್ರರಾದ ಐದನೆಯ ದೃಷ್ಟಾಂತ ಪವಿತ್ರ ಖುರ್‌ಆನ್ ಜ್ಞಾನದಲ್ಲಿ ನ್ಯಾಯಪೂರ್ತಿಕರಣಗೊಳಿಸಲಾಗಿದೆ. ನಾನು ಈ ಜ್ಞನ ಪಡೆದು ಎಲ್ಲಾ ವಿರೋಧಿಗಳನ್ನು, ಅಬ್ದುಲ್ ಹಖ್‌ರ ಗುಂಪಾಗಲಿ ಅಥವಾ ಬಟಾಲ್ವಿಯರ ಗುಂಪಾಗಲಿ ಎಲ್ಲರಿಗೂ ಉಚ್ಚ ಸ್ವರದಲ್ಲಿ ಆಹ್ವಾನಿಸಿದ್ದೇವೆ. ನಮಗೆ ಖುರ್‌ಆನಿನ ಜ್ಞಾನ ಮತ್ತು ಸಾಕ್ಷ್ಯಗಳನ್ನು ನೀಡಲಾಗಿದೆ. ನಿಮ್ಮಲ್ಲಿ ಯಾರಿಂದಲೂ ಸಾಧ್ಯವಿಲ್ಲ. ನನ್ನ ಎದುರಿನಲ್ಲಿ ಪವಿತ್ರ ಖುರ್‌ಆನ್‌ನ ಜ್ಞನ ಸಾಕ್ಷ್ಯಗಳನ್ನು ಸಾದರಪಡಿಸಬೇಕು. ಅಂದ ಹಾಗೆ ನನ್ನ ಈ ಆಹ್ವಾನದ ನಂತರ ಯಾರೂ ಸಹ ನನ್ನ ಎದುರಿಗೆ ಬರಲಿಲ್ಲ. ಅಜ್ಞಾನತೆಯು ಎಲ್ಲಾ ಅಪಮಾನಗಳಿಗೆ ಕಾರಣವಾಗುತ್ತದೆ. ಅದು ಅವರ ಮೇಲೆ ಮುದ್ರೆ ಹಾಕಿದಂತಾಯಿತು. ಅಂದ ಹಾಗೆ ಇದೆಲ್ಲಾ ಮುಬಾಹಲ ನಂತರ ಆಗಿದೆ. ಅದೇ ಕಾಲದಲ್ಲಿ "ಕರಾಮತುಸ್ಸಾದಿಖೀನ್" ಗ್ರಂಥ ಬರೆಯಲಾಯಿತು. ಈ ಕರಾಮತ್ (ಪವಾಡ) ಮುಂದೆ ಯಾವ ವ್ಯಕ್ತಿಯು ಒಂದು ಅಕ್ಷರವು ಬರೆಯಲು ಸಾಧ್ಯವಾಗಿಲ್ಲ. ಆದರೂ ಇಲ್ಲಿಯವರೆಗೆ ಅಬ್ದುಲ್ ಹಖ್ ಮತ್ತು ಅವರ ಜಮಾಅತಿಗೆ ಅಪಮಾನ ಉಂಟಾಗಲಿಲ್ಲವೆ, ಮತ್ತು ಇಲ್ಲಿಯವರೆಗೂ ಅಲ್ಲಾಹನು ನನಗೆ ಗೌರವ ನೀಡಿದ ವಿಷಯ ಸಾಬೀತಾಗಿಲ್ಲವೆ.

6) ಮುಬಾಹಲ ನಂತರ ಗೌರವ ದೊರೆತ ಆರನೆಯ ದೃಷ್ಟಾಂತವೆಂದರೆ ಅದು ನನ್ನ ಗೌರವ ಮತ್ತು ಅಬ್ದುಲ್ ಹಖ್ ಅವರ ಅಗೌರವಕ್ಕೆ ಕಾರಣವಾಯಿತು. ಅಬ್ದುಲ್ ಹಖ್ ಮುಬಾಹಲ ನಂತರ ಪತ್ರಿಕೆ ಹೊರಡಿಸಿದ್ದನು. ಒಂದು ಗಂಡು ಮಗು ಅವನ ಮನೆಯಲ್ಲಿ ಜನ್ಮ ತಾಳುವನು, ನಾನು ಸಹ ಅಲ್ಲಾಹನಿಂದ ದೇವ ವಾಣಿ ಪಡೆದು ಅದನ್ನು ಅನ್ವರುಲ್ ಇಸ್ಲಾಂನಲ್ಲಿ ಪ್ರಕಟಿಸಿದ್ದೆ. ಅಲ್ಲಾಹನು ನನಗೆ ಗಂಡು ಮಗುವನ್ನು ನೀಡುವನು. ಅಂದ ಹಾಗೆ ಅಲ್ಲಾಹನ ಅಪಾರವಾದ ಅನುಗ್ರಹದಿಂದ ನನ್ನ ಮನೆಯಲ್ಲಿ ಗಂಡು ಮಗು ಹುಟ್ಟಿದನು. ಅವನ ಹೆಸರು ಶರೀಫ್ ಅಹ್ಮದ್ ಎಂದಾಗಿದೆ. ಅವನಿಗೆ ಎರಡು ವರ್ಷ ವಯಸ್ಸಾಗಿದೆ. ಇದೀಗ ಅಬ್ದುಲ್ ಹಖ್‌ನೊಂದಿಗೆ ಅವಶ್ಯವಾಗಿ ಕೇಳಬೇಕಾಗಿದೆ. ಆ ಮುಬಾಹಲದ

*(ಪುಟ 09 ರಲ್ಲಿ ಮುಂದುವರಿಸಲಾಗಿದೆ)*

# ಖುತ್‌ಬ ಜುಮುಅ

**“ನಾನು ಸಹ ಇದನ್ನೇ ಇಷ್ಟಪಡುವುದು, ಯಾವುದೇ ತೋರಿಕೆಯಿಂದ ಅಥವಾ ಸಂಕೀರ್ಣತೆಯಿಂದಲ್ಲ, ಬದಲಿಗೆ ನನ್ನ ಸ್ವಭಾವದಿಂದಾಗಿ, ಅಂದರೆ ನಾವು ಏನು ಮಾಡಿದರೂ ಅದು ಅಲ್ಲಾಹನಗಾಗಿರಬೇಕು ಮತ್ತು ಏನೇ ವಿಷಯವಿದ್ದರೂ ಅದು ಸಹ ಅಲ್ಲಾಹನ ಸಲುವಾಗಿರಬೇಕು.” (ಹಝ್ರತ್ ಮಸೀಹ್ ಮೌಊದ್(ಅ))**

**ಜಲ್ಸ ಸಾಲಾನ ಬ್ರಿಟನ್ 2021ರ ಸಂದರ್ಭದಲ್ಲಿ ಅತಿಥಿಗಳು ಹಾಗೂ ಅತಿಥಿ ಸತ್ಕಾರ ಮಾಡುವವರಿಗೆ ತಮ್ಮ ಹೊಣೆಗಾರಿಕೆಗಳನ್ನು ನಿಭಾಯಿಸುವುದಕ್ಕೆ ಮತ್ತು ವ್ಯವಸ್ಥೆಯ ಬಗ್ಗೆ ಕೆಲವು ಮಹತ್ವ ನಿರ್ದೇಶನಗಳ ಪ್ರಸ್ತಾವನೆ**

**ಇಸ್ಲಾಮಿನ ಸುಂದರವಾದ ಚಿತ್ರ ನಮ್ಮ ಮುಂದೆ ಬರಲು ಮತ್ತು ನಾವು ಲೋಕದ ಮುಂದೆ ಇರಿಸಲಿಕ್ಕಾಗಿ ಈ ಕಾಲದಲ್ಲಿ ಹಝ್ರ.ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೇ ಈ ಉನ್ನತ ನೈತಿಕಗುಣಗಳನ್ನು ಸ್ಥಾಪಿಸಬೇಕಾಗಿತ್ತು.**

**ಅತಿಥಿಯನ್ನು ಗೌರವಿಸುವುದು ಒಬ್ಬ ಸತ್ಯವಿಶ್ವಾಸಿಯ ಲಕ್ಷಣವಾಗಿದೆ ಎಂದು ಹಝ್ರ.ರತ್ ಪೈಗಂಬರ್(ಸ) ಹೇಳಿರುವರು.**

**ಅತಿಥಿ ಸತ್ಕಾರ ಮಾಡುವವರೊಡನೆ ಅವರ ಜವಾಬ್ದಾರಿಗಳ ಕುರಿತು ಹೇಳಿದ ಹಾಗೆಯೇ ಇಸ್ಲಾಂ ಅತಿಥಿಗಳಿಗೂ ಅವರ ಜವಾಬ್ದಾರಿಗಳ ಕಡೆಗೆ ಗಮನ ಸೆಳೆದಿದೆ ಎಂದು ಅತಿಥಿಗಳು ಯಾವಾಗಲೂ ನೆನಪಿಡಬೇಕು.**

**ಯಾರಿಗೆ ಆಮಂತ್ರಣ ಪತ್ರ ಮತ್ತು ಅನುಮತಿ ಸಿಕ್ಕಿದೆಯೋ ಅವರು ಖಂಡಿತ ಜಲ್ಸದಲ್ಲಿ ಭಾಗವಹಿಸಬೇಕು. ಇಲ್ಲದಿದ್ದರೆ ಅನುಮತಿ ಸಿಗದವರಿಗೆ ಅನ್ಯಾಯ ಮಾಡಿದಂತೆ ಆಗುವುದು.**

**ದೀರ್ಘ ಕಾಲದ ನಂತರ ಪರಸ್ಪರ ಭೇಟಿಯಾಗುವವರು, ಅಲ್ಲಿಲ್ಲಿ ಕುಳಿತುಕೊಂಡು ಸಂಬಂಧಿಕರೊಡನೆ ಅಥವಾ ಸ್ನೇಹಿತರೊಡನೆ ಮಾತುಗಳಲ್ಲಿ ನಿರತರಾಗದಿರಿ. ಜಲ್ಸಕ್ಕಾಗಿ ಬಂದಿರುವಿರಿ. ಆದ್ದರಿಂದ ಜಲ್ಸವನ್ನು ಆಲಿಸಿರಿ.**

**ಈ ದಿನಗಳಲ್ಲಿ ದೇವಸ್ಮರಣೆಯು ಅಲ್ಲಾಹನ ಅನುಗ್ರಹಗಳಿಗೆ ಕಾರಣವಾಗುವುದು. ಆದ್ದರಿಂದ ಈ ದಿನಗಳಲ್ಲಿ ವಿಶೇಷವಾಗಿ ದೇವಸ್ಮರಣೆಯ ಕಡೆಗೆ ಒತ್ತು ನೀಡಿರಿ. ಲೋಕದೆಲ್ಲಡೆ ಹರಡಿರುವ ಅಹ್ಮದಿಯರು, ತಮ್ಮ ದೇಶಗಳಲ್ಲಿ ಅಥವಾ ಮನೆಗಳಲ್ಲಿ ಒಟ್ಟಾಗಿ ಜಲ್ಸವನ್ನು ಕೇಳುವ ಎಲ್ಲ ಅಹ್ಮದಿಯರು ಸಹ ಧಿಕ್ರೇ ಇಲಾಹಿ ಎಂದರೆ ದೇವಸ್ಮರಣೆ ಮಾಡಬೇಕು. ಆಗ ಹೆಚ್ಚು ಹೆಚ್ಚು ಅಲ್ಲಾಹನ ವರದಾನವನ್ನು ಪಡೆಯುವವರಾಗುವಿರಿ. ತಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಉತ್ತಮಗೊಳಿಸುವವರಾಗುವಿರಿ, ಲೋಕದ ಆಪತ್ತುಗಳಿಂದ ಅಲ್ಲಾಹನ ಅನುಗ್ರಹದಿಂದ ರಕ್ಷಣೆ ಪಡೆಯುವವರಾಗುವಿರಿ.**

ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **‘ಮಸ್ಜಿದ್ ಮುಬಾರಕ್’** ನಿಂದ **06–08–2021** ರಂದು ನೀಡಿದ **ಖುತ್‌ಬ ಜುಮುಅ**

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيكَ لَهُ وَأَشْهَدُ أَنَّ مُحَمَّدًا عَبْدُهُ وَرَسُولُهُ

أَمَّا بَعْدُ فَأَعُوذُ بِاللّٰهِ مِنَ الشَّيْطٰنِ الرَّجِيمِ - بِسْمِ اللّٰهِ الرَّحْمٰنِ الرَّحِيمِ

اَلْحَمْدُ لِلّٰهِ رَبِّ الْعَالَمِيْنَ ۔ اَلرَّحْمٰنِ الرَّحِيْمِ ۔ مٰلِكِ يَوْمِ الدِّيْنِ ۔

اِيَّاكَ نَعْبُدُ وَاِيَّاكَ نَسْتَعِيْنُ ۔ اِهْدِنَا الصِّرَاطَ الْمُسْتَقِيْمَ ۔

صِرَاطَ الَّذِيْنَ اَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ ۔

ಇಂದು ಜಲ್ಸ ಸಾಲಾನ ಬ್ರಿಟನ್ ಶುರುವಾಗುತ್ತಿದೆ. ಇನ್‌ಶಾ ಅಲ್ಲಾಹ್. ಮೊತ್ತಮೊದಲಾಗಿ ನಾನು ಹೇಳಬಯಸುವುದೇನೆಂದರೆ, ಜಲ್ಸ ಅನುಗ್ರಹಪೂರ್ಣವಾಗಿ ಜರುಗಲು ಬಹಳ ದುಆ ಮಾಡಿರಿ. ಅಲ್ಲಾಹನು ಈ ದಿನಗಳಲ್ಲಿ ಪೂರ್ಣವಾಗಿ ದೀನಿ ವಾತಾವರಣವನ್ನು ಉಂಟುಮಾಡಲಿ ಹಾಗೂ ಭಾಗವಹಿಸುವವರನ್ನು ಒಳಿತು ಮತ್ತು ದೇವಭಕ್ತಿಯಲ್ಲಿ ಹೆಚ್ಚು ಮುಂದಾಗಿಸಲಿ. ಮಹಾಮಾರಿಯ ಕಾರಣದಿಂದ ಭಾಗವಹಿಸುವವರ ಸಂಖ್ಯೆ ಬಹಳ ಪರಿಮಿತವಾಗಿದೆ. ಆದರೆ ಮನೆಗಳಲ್ಲಿ ಮತ್ತು ಜಮಾಅತಿನ ವ್ಯವಸ್ಥೆಯಡಿಯಲ್ಲಿ ಜಲ್ಸ ಆಲಿಸಲಾಗುವುದು ಎಂದು ನನ್ನೊಡನೆ ಹೇಳಲಾಗಿದೆ. ಹೇಗಿದ್ದರೂ ಜಲ್ಸದಲ್ಲಿ ಪಾಲ್ಗೊಳ್ಳುವವರೆಲ್ಲ ಜಲ್ಸ ಮೈದಾನದಲ್ಲಿ ಇದ್ದೇವೆ ಎಂಬ ಯೋಚನೆಯೊಂದಿಗೆ ಪಾಲ್ಗೊಳ್ಳಿರಿ ಮತ್ತು ಆ ಸಮಯವನ್ನು ದುಆಗಳಲ್ಲಿ ಕಳೆಯಿರಿ.

ಈ ವರ್ಷ ಜಲ್ಸದ ವ್ಯವಸ್ಥಾಪಕರಿಗೆ ಮತ್ತು ಭಾಗವಹಿಸುವವರಿಗೆ ಸ್ಥಿತಿಗತಿಗಳು ಸಹ ಬೇರೆಯಾಗಿ ಅನುಭವವಾಗುವುದು. ಅತಿಥಿಗಳ ಸೌಕರ್ಯಕ್ಕಾಗಿ ಮಾಡಲಾಗುವ ಕೆಲವು ಸೌಲಭ್ಯಗಳು ಈ ವರ್ಷ ಲಭ್ಯವಾಗಿರುವುದಿಲ್ಲ. ಆದ್ದರಿಂದ ಭಾಗವಹಿಸುವವರು ಈ ಅವಸ್ಥೆಗಳನ್ನು ಮುಂದಿರಿಸಿ ಅವುಗಳನ್ನು ಕಡೆಗಣಿಸಬೇಕು ಮತ್ತು ಅಲ್ಲಾಹನು ಬೇಗನೇ ಸ್ಥಿತಿಗತಿಗಳನ್ನು ಉತ್ತಮಗೊಳಿಸಲಿ ಎಂದು ದುಆ ಮಾಡಬೇಕು. ಜಲ್ಸದಲ್ಲಿ ಕೆಲವು ಶರತ್ತುಗಳ ಕಾರಣದಿಂದ ಭಾಗವಹಿಸಲು ಅನುಮತಿ ಸಿಗದ ಕಾರಣದಿಂದ ಕೆಲವರಿಗೆ ದೂರು ಇದೆ. ಹೇಗಿದ್ದರೂ ವ್ಯವಸ್ಥಾಪಕರು ಈ ವಿಷಯದಲ್ಲಿ ತಮ್ಮ ಕಾರಣವನ್ನು ಮುಂದಿರಿಸಿರುವರು.

ಈ ಸಂಗತಿಯ ನಂತರ ಜಲ್ಸ ಮತ್ತು ಅತಿಥಿ ಸತ್ಕಾರಕ್ಕೆ ಸಂಬಂಧಿಸಿ ಕೆಲವು ಮಾತುಗಳನ್ನು ಹೇಳುತ್ತೇನೆ. ಜಲ್ಸಕ್ಕೆ ಮುಂಚೆ ಬರುವ ಖುತ್‌ಬದಲ್ಲಿ ನಾನು ಸಾಮಾನ್ಯವಾಗಿ ಅತಿಥಿಗಳಿಗೆ ಮತ್ತು ಡ್ಯೂಟಿ ನೀಡುವವರಿಗೆ ಅವರ ಕರ್ತವ್ಯಗಳ ಕುರಿತು ಹೇಳಿ ಕೊಡುತ್ತೇನೆ. ಆದರೆ ಈ ವರ್ಷ ಡ್ಯೂಟಿ ನೀಡುವವರ ಜವಾಬ್ದರಿಗಳ ಬಗ್ಗೆ ಏನೂ ಹೇಳಿಲ್ಲ. ಆದ್ದರಿಂದ ಇಂದು ಸ್ವಲ್ಪ ಹೇಳುತ್ತೇನೆ.

ಅತಿಥಿ ಸತ್ಕಾರದ ಕುರಿತು ಯಾವುದೇ ದೂರು ಇರಬಾರದು. ವಿದೇಶಗಳಿಂದ ಬರುತ್ತಿದ್ದ ಆರೇಳು ಸಾವಿರ ಅತಿಥಿಗಳು ಈ ವರ್ಷ ಬರುವುದಿಲ್ಲ. ದೇಶದ ಒಳಗಿನಿಂದಲೇ ಹಲವು ಪಟ್ಟಣಗಳಿಂದ ಬರುವ ಅತಿಥಿಗಳೇ ಇರುವುವು. ಅದು ಸಹ ಬಹಳ ಕಡಿಮೆ ಸಂಖ್ಯೆಯಲ್ಲಿ. ಆದ್ದರಿಂದ ಈ ಸಂಗತಿಯನ್ನು ಸುಲಭವೆಂದು ಭಾವಿಸಿ ರಿಲೇಕ್ಸ್ ಆಗಬೇಡಿರಿ. ಏನಾದರೂ ಕೊರತೆಯುಂಟಾದರೆ ಸಮೀಪದ ಅತಿಥಿಗಳಿಗೆ ಹೆಚ್ಚಿನ ದೂರು ಇರುತ್ತದೆ. ಆದ್ದರಿಂದ ಬಹಳ ಎಚ್ಚರಿಕೆಯಿಂದ ಮತ್ತು ಬಹಳ ಶ್ರದ್ಧೆಯಿಂದ ಪ್ರತಿಯೊಬ್ಬರ ಅತಿಥಿ ಸತ್ಕಾರ ಮಾಡಬೇಕು. ಯಾವುದೇ ಕೊರತೆಯುಂಟಾಗದಂತೆ ನೋಡಬೇಕು. ಪ್ರತಿಯೊಂದು ವಿಭಾಗದ ಸೇವಕರು ಅವರು ನಾಸಿರಾತ್ ಆಗಿದ್ದರೂ ಲಜ್ನ ಆಗಿದ್ದರೂ ಅತ್‌ಫಾಲ್ ಆಗಿದ್ದರೂ ಖುದ್ದಾಮ್ ಆಗಿದ್ದರೂ ಅನ್ಸಾರ್ ಆಗಿದ್ದರೂ ಎಲ್ಲರೂ ತಮ್ಮ ಡ್ಯೂಟಿಗಳಲ್ಲಿ ಮತ್ತು ತಮ್ಮ ಕೆಲಸಗಳಲ್ಲಿ ನುರಿತರಾಗಿದ್ದಾರೆ ಮತ್ತು ಬಹಳ ಉತ್ತಮವಾಗಿ ಕೆಲಸವನ್ನು ನೆರವೇರಿಸುವ ಸಾಮರ್ಥ್ಯವನ್ನು ಹೊಂದಿರುವರು. ಹೊಸದಾಗಿ ಡ್ಯೂಟಿಗೆ ಸೇರುವವರಿಗೆ ಅವರು ಕಲಿಸುಕೊಡಲೂ ಬಲ್ಲರು. ಆದ್ದರಿಂದ ಕೆಲಸದ ಬಗ್ಗೆ ಗೊತ್ತಿಲ್ಲ ಎಂಬ ಚಿಂತೆಯಿಲ್ಲ. ಜಲ್ಸದ ಪ್ರತಿಯೊಂದು ವಿಭಾಗದಲ್ಲಿ ಬಹಳ ಆಳವಾಗಿ ನೋಡಿ ಕೆಲಸ ಮಾಡುವ ಸೇವಕರು ಇರುವರು. ಆದರೆ ಸತ್ಯವಿಶ್ವಾಸಿಗಳಿಗೆ ನೆನಪಿಸಿಕೊಡಬೇಕು, ಅದು ಅವರಿಗೆ ಪ್ರಯೋಜನಕಾರಿಯಾಗಿದೆ ಎಂಬುದು ಅಲ್ಲಾಹನ ಆಜ್ಞೆಯಾಗಿರುವುದರಿಂದ ನಾನು ಹೇಳುತ್ತಿದ್ದೇನೆ. ಅದಲ್ಲದೇ ನಾನು ಹೇಳಿದಂತೆ ಈ ವರ್ಷದ ಜಲ್ಸದ ಏರ್ಪಾಡು ಪರಿಮಿತವಾದುದಾಗಿದೆ. ಆದ್ದರಿಂದ ಕೆಲವು ವಿಷಯಗಳಲ್ಲಿ ಅಸಡ್ಡೆಯ ಕಾರಣದಿಂದ ಕೊರತೆಯಿರಬಹುದು. ಕೆಟ್ಟ

ಹವಾಮಾನದ ಕಾರಣದಿಂದ ಕೆಲವು ವಿಭಾಗಗಳಲ್ಲಿ ವಿಶೇಷವಾದ ಗಮನದ ಆವಶ್ಯಕತೆಯಿದೆ.

ಅತಿಥಿಗಳು ಹೆಚ್ಚಿರಲಿ ಅಥವಾ ಕಡಿಮೆಯಿರಲಿ, ಜಲ್ಸದಲ್ಲಿ ಬರುವ ಅತಿಥಿಗಳು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಾಗಿದ್ದಾರೆ. ಆದ್ದರಿಂದ ನಾವು ಸಾಧ್ಯವಾದಷ್ಟು ಅವರ ಅತಿಥಿ ಸತ್ಕಾರ ಮಾಡಬೇಕು. ಅತಿಥಿ ಸತ್ಕಾರವೆಂಬ ನೈತಿಕ ಗುಣ ಪ್ರವಾದಿಗಳ ಮತ್ತು ಅವರ ಜಮಾಅತಿನ ಒಂದು ವಿಶೇಷವಾದ ಸ್ವಭಾವವಾಗಿದೆ. ಆದ್ದರಿಂದ ಧಾರ್ಮಿಕವಾದ ಒಂದು ಜಮಾಅತ್ ಎಂಬ ನೆಲೆಯಲ್ಲಿ ನಮ್ಮೊಳಗೆ ಈ ಸ್ವಭಾವಗುಣ ಕಡ್ಡಾಯವಾಗಿ ಪ್ರಕಟವಾಗಿರಬೇಕು. ಹಝ್ರತ್ ಪೈಗಂಬರರ(ಸ) ಕಾಲಘಟ್ಟದಲ್ಲೂ ಅತಿಥಿಗಳು ಹೆಚ್ಚು ಬರಲು ಶುರುವಾದಾಗ, ಹಝ್ರತ್ ಪೈಗಂಬರ್(ಸ) ಅತಿಥಿಗಳನ್ನು ಸಹಾಬರಿಗೆ ಹಂಚಿಕೊಡುತ್ತಿದ್ದರು. ಸಹಾಬರು ಸಹ ಸಂತೋಷದಿಂದ ಅತಿಥಿಗಳನ್ನು ಜೊತೆಗೆ ಕೊಂಡುಹೋಗುತ್ತಿದ್ದರು. ಬೆಳಿಗ್ಗೆ ಅತಿಥಿಗಳೊಡನೆ, ಅವರಿಗೆ ಲಭಿಸಿದ ಸೇವೆಯ ಬಗ್ಗೆ ಕೇಳಲಾಗುವಾಗ ಪ್ರತಿಯೊಬ್ಬ ಅತಿಥಿಯ ಉತ್ತರ ಹೀಗೆಯೇ ಇರುತ್ತದೆ: ಅತಿಥಿ ಸತ್ಕಾರದ ಹಕ್ಕನ್ನು ಈಡೇರಿಸುವ ಇಂತಹ ಸತ್ಕಾರ ಮಾಡುವವರನ್ನು ನಾವು ಮುಂಚೆ ಕಂಡಿಲ್ಲ. (ಮಸ್ನದ್ ಅಹ್ಮದ್ ಬಿನ್ ಹಂಬಲ್, ಸಂಪುಟ–5, ಪುಟ–357, ಹದೀಸ್–15644, ಆಲಿಮುಲ್ ಕುತುಬ್ ಬೈರೂತ್ 1998)

ಆದ್ದರಿಂದ ನಮ್ಮ ಮುಂದೆ ಈ ಮಾದರಿಯಿದೆ. ಈ ಕಾಲದಲ್ಲಿ ನಾವು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರನ್ನು ನಂಬಿದ್ದೇವೆ. ಅವರು ಸಹ ನಮಗೆ ಈ ಕುರಿತು ಉಪದೇಶ ನೀಡಿರುವರು.

ಒಂದು ಸಂದರ್ಭದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತನ್ನ ಜಮಾಅತಿನ ವ್ಯಕ್ತಿಗಳನ್ನು ಉಪದೇಶಿಸುತ್ತಾ ಹೇಳಿದರು: ಅತಿಥಿಯು ಕಠಿಣವಾದ ಪದಗಳನ್ನು ಹೇಳಿದರೂ ಕಠಿಣವಾಗಿ ವರ್ತಿಸಿದರೂ ಅದನ್ನು ಸಹಿಸಬೇಕು. ಅತಿಥಿಯು ಅಹ್ಮದಿಯಾಗಿದ್ದರು ಕೂಡ ಕಠಿಣ ವರ್ತನೆಯ ಬದಲಾಗಿ ಕಠಿಣವಾಗಿ ವರ್ತಿಸಬೇಡಿರಿ ಮತ್ತು ಉತ್ತಮ ಸ್ವಭಾವದೊಂದಿಗೆ ವರ್ತಿಸಬೇಕು. (ಮಲ್‌ಫೂಝಾತ್, ಸಂಪುಟ–5, ಪುಟ–91)

ನಮ್ಮವರಾಗಿರಲಿ ಅನ್ಯರಾಗಿರಲಿ, ಅವರೊಂದಿಗೆ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ತೋರಿಸಿದ ಅಸಾಮಾನ್ಯವಾದ ಮಾದರಿಯನ್ನು ನಾವು ಕಾಣುತ್ತೇವೆ. ಏಕೆಂದರೆ ಇಸ್ಲಾಮಿನ ಸುಂದರವಾದ ಚಿತ್ರ ನಮ್ಮ ಮುಂದೆ ಬರಲು ಮತ್ತು ನಾವು ಲೋಕದ ಮುಂದೆ ಇರಿಸಲಿಕ್ಕಾಗಿ ಈ ಕಾಲದಲ್ಲಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರೇ ಈ ಉನ್ನತ ನೈತಿಕಗುಣಗಳನ್ನು ಸ್ಥಾಪಿಸಬೇಕಾಗಿತ್ತು.

ಹಝ್ರತ್ ಮುಫ್ತಿ ಮುಹಮ್ಮದ್ ಸಾದಿಖ್ ಸಾಹಿಬ್(ರ) ಹೇಳುತ್ತಾರೆ: ನಾನು ಒಂದು ಬಾರಿ ಲಾಹೋರಿನಿಂದ ಖಾದಿಯಾನಿಗೆ ಬಂದೆನು. ನನ್ನನ್ನು ಹಝ್ರತ್ ಮಸೀಹ್ ಮೌಊದ್(ಅ) ಮಸ್ಜಿದ್ ಮುಬಾರಕಿನಲ್ಲಿ ಕುಳ್ಳಿರಿಸಿದರು. ಆಗ ಅದು ಸಣ್ಣದಾದ ಜಾಗವಾಗಿತ್ತು. ಈಗಲೂ ಅದು ಸಣ್ಣದಾದ ಒಂದು ಮಸೀದಿಯಾಗಿದೆ. ಆದರೆ ಆಗ ಅದು ಬಹಳ ಸಣ್ಣದಾಗಿತ್ತು. ಒಂದು ಕೊಠಡಿಯಷ್ಟು. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ನೀವು ಕುಳಿತುಕೊಳ್ಳಿರಿ, ನಾನು ನಿಮಗಾಗಿ ಊಟ ತರುವೆನು. ಹೀಗೆ ಹೇಳಿಕೊಂಡು ಅವರು ಒಳಗೆ ಹೋದರು. ಮುಫ್ತಿ ಸಾಹಿಬ್ ಹೇಳುತ್ತಾರೆ: ಯಾವನಾದರೂ ಸೇವಕನ ಕೈಯಲ್ಲಿ ಊಟವನ್ನು ಕಳುಹಿಸುವರು ಎಂದು ನಾನು ಭಾವಿಸಿದ್ದೆ. ಆದರೆ ಕೆಲವು ನಿಮಿಷಗಳ ನಂತರ ಕಿಟಕಿ ತೆರೆದಾಗ ನಾನು ನೋಡುವುದೇನೆಂದರೆ, ಅವರು ಸ್ವತಃ ತನ್ನ ಕೈಯಿಂದ ಒಂದು ಟ್ರೇಯಲ್ಲಿ ಊಟವನ್ನು ತಂದಿದ್ದರು. ನನ್ನನ್ನು ನೋಡಿ ಹೇಳಿದರು: ನೀವು ಊಟ ಮಾಡಿರಿ, ನಾನು ನೀರು ತರುತ್ತೇನೆ. ಮುಫ್ತಿ ಸಾಹಿಬ್‌ರು ಹೇಳುತ್ತಾರೆ: ನನ್ನ ಕಣ್ಣುಗಳು ಅನಿಯಂತ್ರಿತವಾಗಿ ತೇವಗೊಂಡವು. ಹಝ್ರತ್ ಮಸೀಹ್ ಮೌಊದ್(ಅ) ನಮ್ಮ ಮಾರ್ಗದರ್ಶಿ ಮತ್ತು ನೇತಾರರಾಗಿಕೊಂಡು ನಮ್ಮ ಇಷ್ಟೆಲ್ಲ ಸೇವೆ ಮಾಡುವಾಗ ನಾವು ಅಹ್ಮದಿಯರು ಪರಸ್ಪರ ಎಷ್ಟು ಪ್ರೀತಿಯಿಂದ ವರ್ತಿಸಬೇಕು. (ಝಿಕ್ರೆ ಹಬೀಬ್, ಪುಟ–327, ಹಝ್ರತ್ ಮುಫ್ತಿ ಮುಹಮ್ಮದ್ ಸಾದುಖ್ ಸಾಹಿಬ್, ರಬ್ವಾಹ್)

ಒಂದು ಬಾರಿ ಹಾಸಿಗೆಗಳ ಕೊರತೆಯುಂಟಾಯಿತು. ಆಗ ಹಝ್ರತ್ ಮಸೀಹ್ ಮೌಊದ್(ಅ) ತನ್ನ ಮತ್ತು ಮನೆಯ ಎಲ್ಲ ಹಾಸಿಗೆಗಳನ್ನು ಅತಿಥಿಗಳಿಗೆ ಕೊಟ್ಟರು. ಸ್ವತಃ ಹಾಸಿಗೆಯಿಲ್ಲದೇ ಕಷ್ಟದಿಂದ ರಾತ್ರಿ ಪೂರ್ತಿ ಕಳೆದರು. ಆದರೆ ಯಾರಿಗೂ ಅದು ಗೊತ್ತಾಗದಂತೆ ನೋಡಿದರು. (ಅಸ್ಹಾಬೆ ಅಹ್ಮದ್, ಸಂಪುಟ–4, ಪುಟ–180, ವರದಿ ಸಂಖ್ಯೆ–76)

ಇದು ಅತಿಥಿ ಸತ್ಕಾರದ ಯಥಾರ್ಥ ತ್ಯಾಗವಾಗಿದೆ. ಕೆಲವೊಮ್ಮೆ ಕೆಲವರು ತ್ಯಾಗಗಳನ್ನು ಮಾಡುತ್ತಾರೆ ಆದರೆ ಅದರ ಕುರಿತು ಹಂಗಿಸಿಕೊಳ್ಳುತ್ತಾರೆ.

ಹಝ್ರತ್ ಮಸೀಹ್ ಮೌಊದ್(ಅ) ಒಂದು ಸಂದರ್ಭದಲ್ಲಿ ಹೇಳಿದರು: ಅತಿಥಿಗಳಿಗೆ ಯಾವುದೇ ತೊಂದರೆಯಾಗಬಾರದು ಎಂಬ ಚಿಂತೆ ನನಗೆ ಇರುತ್ತದೆ. ಆದ್ದರಿಂದ ಸಾಧ್ಯವಾದಷ್ಟು ಅತಿಥಿಗೆ ಆರಾಮ ಕೊಡಲು ನಾನು ಯಾವಾಗಲೂ ತಾಕೀತು ಮಾಡುತ್ತಿರುತ್ತೇನೆ. ಅತಿಥಿಯ ಹೃದಯ ಕನ್ನಡಿಯಂತೆ ಆಗಿರುತ್ತದೆ. ಸ್ವಲ್ಪ ಅಡ್ಡಿಯಾದರೂ ಒಡೆದು ಹೋಗುವುದು. ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ: ಆರಂಭದಲ್ಲಿ ನಾನು ಸ್ವತಃ ಅತಿಥಿಗಳೊಂದಿಗೆ ಕುಳಿತುಕೊಂಡು ಊಟ ಮಾಡುತ್ತಿದ್ದೆ. ಇದರಿಂದ ಅತಿಥಿ ಸತ್ಕಾರ ಯಾವ ರೀತಿಯಲ್ಲಿ ನಡೆಯುತ್ತಿದೆ ಎಂದು ಗೊತ್ತಾಗುತ್ತಿತ್ತು. ಆದರೆ ನಂತರ ರೋಗದ ಕಾರಣದಿಂದ ಊಟದಲ್ಲಿ ಪಥ್ಯ ಮತ್ತು ಅತಿಥಿಗಳ ಸಂಖ್ಯೆ ವರ್ಧನೆಗೊಂಡು ಕಾರಣದಿಂದ ಈ ರೂಢಿಯನ್ನು ಜಾರಿಯಲ್ಲಿರಿಸಲು ಸಾಧ್ಯವಾಗಲಿಲ್ಲ. (ಮಲ್‌ಫೂಝಾತ್, ಸಂಪುಟ–5, ಪುಟ–406)

ಒಂದು ಬಾರಿ ಬಹಳಷ್ಟು ಅತಿಥಿಗಳು ಬಂದಿದ್ದಾಗ ಲಂಗರ್‌ಖಾನದ ಇಂಚಾರ್ಜ್‌ನನ್ನು ಹಝ್ರತ್ ಮಸೀಹ್ ಮೌಊದ್(ಅ) ಹೀಗೆ ಉಪದೇಶಿಸಿದರು: ಬಹಳಷ್ಟು ಅತಿಥಿಗಳು ಬಂದಿರುವರು. ಇವರಲ್ಲಿ ಕೆಲವರು ನಿನಗೆ ಪರಿಚಿತರು ಕೆಲವು ಪರಿಚಿತರಲ್ಲ. ಆದ್ದರಿಂದ ಎಲ್ಲರನ್ನು ಆದರಣೀಯರೆಂದು ಅರಿತುಕೊಂಡು ಅವರ ಸೇವೆ ಮಾಡಬೇಕು. ಒಟ್ಟಿನಲ್ಲಿ ಸತ್ಕಾರ ಮಾಡುವವನಿಗೆ ಎಲ್ಲ ಅತಿಥಿಗಳು ಅತಿಥಿಗಳೇ ಆಗಿರುವರು. ಎಲ್ಲರನ್ನು ಅತಿಥಿಗಳೆಂದು ಅರಿತುಕೊಂಡು ಸಮಾನವಾಗಿ ಸೇವೆ ಮಾಡಬೇಕು. ಪ್ರತಿಯೊಬ್ಬರೊಂದಿಗೆ ಗೌರವ ಮತ್ತು ಆದರಭಾವದಿಂದ ವರ್ತಿಸಬೇಕು. ಇದೇ ಅತಿಥಿ ಸತ್ಕಾರದ ಬೇರಾಗಿದೆ. ಹಝ್ರತ್ ಮಸೀಹ್ ಮೌಊದ್(ಅ) ಹೇಳಿದರು: ನಿಮ್ಮ ಬಗ್ಗೆ ನನಗೆ ಸದ್ಭಾವನೆಯಿದೆ. ಆದ್ದರಿಂದ ಅತಿಥಿಗಳನ್ನು ಬಹಳ ಉತ್ತಮವಾಗಿ ಸೇವೆ ಮಾಡಿರಿ. (ಮಲ್‌ಫೂಝಾತ್, ಸಂಪುಟ–6, ಪುಟ–226)

ಇದೇ ಸದ್ಭಾವನೆ ಈಗಲೂ ಇದೆ. ಅಲ್ಲಾಹನ ಅನುಗ್ರಹದಿಂದ ಸೇವಕರಲ್ಲಿ ಹೆಚ್ಚಿನವರು ಈ ಸದ್ಭಾವನೆಯಂತೆ ಇರುವವರಾಗಿದ್ದಾರೆ. ಯಾರಲ್ಲಾದರೂ ಏನಾದರೂ ಕೊರತೆಯಿದ್ದರೆ ಅವರು ಸ್ವತಃ ನೋಡಲಿ. ಯಾವ ರೀತಿಯಲ್ಲಿ ತಮ್ಮ ಕೊರತೆಯನ್ನು ದೂರಮಾಡಬಹುದೆಂದು ನೋಡಲಿ. ಆ ಕೊರತೆಯನ್ನು ದೂರಮಾಡಿ ಅತಿಥಿ ಸತ್ಕಾರದ ಮಟ್ಟವನ್ನು ಹೇಗೆ ಮೇಲೇರಿಸುವುದು ಎಂದು ನೋಡಲಿ. ಕೆಲವು ವಿಭಾಗಗಳ ಸೇವಕರಿಗೆ ಕೆಲವು ಕಷ್ಟತೆಗಳನ್ನು ಎದುರಿಸಬೇಕಾಗಿ ಬರುತ್ತದೆ ಎಂದು ನನಗೆ ಗೊತ್ತಿದೆ. ಹೇಗಿದ್ದರೂ ಅತಿಥಿಗಳೊಂದಿಗೆ ಉತ್ತಮವಾಗಿ ವರ್ತಿಸಬೇಕು. ಅತಿಥಿ ಏನು ಬೇಕಾದರೂ ಹೇಳಲಿ ಆದರೆ ಪ್ರತಿಯೊಬ್ಬ ಸೇವಕ ತನ್ನ ಉನ್ನತ ಸ್ವಭಾವಗುಣವನ್ನು ತೋರಿಸಬೇಕು ಎಂದು ತನ್ನ ಮೇಲೆ ಕಡ್ಡಾಯಗೊಳಿಸಬೇಕು. ಈ ಬಾರಿ ಭಾಗಿಯಾಗುವವರ ಸಂಖ್ಯೆ ಕಡಿಮೆಯಿರುವ ಕಾರಣ ಕೆಲವು ತೊಂದರೆಗಳನ್ನು ಎದುರಿಸಬೇಕಾಗಿ ಬರುವುದಿಲ್ಲ ಅಥವಾ ಎದುರಿಸಬೇಕಾಗಿ ಬರಲಿಕ್ಕಿಲ್ಲವೆಂದು ಸೇವಕರು ಭಾವಿಸುತ್ತಿರಬಹುದು. ಆದರೂ ಸೇವಕರು ಯಾವುದಾದರೂ ವಿಷಯದ ಕುರಿತು ಅತಿಥಿಗಳೊಡನೆ ಹೇಳುವಾಗ ಕೆಲವು ಅತಿಥಿಗಳಿಗೆ ಅದು ಇಷ್ಟವಾಗದಿರಬಹುದು. ಉದಾಹರಣೆಗೆ ಮಾಸ್ಕ್ ಧರಿಸಬೇಕೆಂದು ಹೇಳುವಾಗ, ದೂರವನ್ನು ಕಾಪಾಡಬೇಕು ಎಂದು ಹೇಳುವಾಗ, ಕೆಲವರಿಗೆ ಇಷ್ಟವಾಗದಿರಬಹುದು. ಎಲ್ಲವನ್ನು ಕೇಳಿದ ನಂತರವೂ ಯಾರಾದರೂ ಕಠಿಣವಾಗಿ ವರ್ತಿಸಿದರೆ ಮತ್ತು ಮಾತನ್ನು ಪಾಲಿಸುವುದಿಲ್ಲವಾದರೂ ಪ್ರೀತಿಯಿಂದ ಅತಿಥಿಗಳಿಗೆ ತಿಳಿಸಿರಿ. ಈ ನಿರ್ಬಂಧಗಳನ್ನು ಪಾಲಿಸಬೇಕು ಎಂದು ಹೆಚ್ಚಿನ ಅತಿಥಿಗಳಿಗೆ ಗೊತ್ತಿದೆ. ಆದರೆ ಕೆಲವು ಜನರು ಕೆಲವು ಮಾತುಗಳನ್ನು ಬೇಗನೇ ತಪ್ಪಾಗಿ ತಿಳಿದುಕೊಳ್ಳುತ್ತಾರೆ. ಸಮಸ್ಯೆಗಳನ್ನು ಉಂಟುಮಾಡುವವರು ಕೆಲವೇ ಕೆಲವರು ಆಗಿರುತ್ತಾರೆ. ಆದರೆ ಸೇವಕರ ವರ್ತನೆ ಸರಿಯಿಲ್ಲದಿದ್ದರೆ ಹೆಚ್ಚಿನ ತೊಂದರೆ ಉಂಟಾಗಬಹುದು. ಆದ್ದರಿಂದ ಯಾರಾದರೂ ಯಾರಿಗಾದರೂ ಏನಾದರೂ ತಿಳಿಸಲು ಇದ್ದರೆ, ವಿನಂತಿ ಮಾಡಲು ಇದ್ದರೆ, ಏನಾದರೂ ಹೇಳಲು ಇದ್ದರೆ ಬಹಳ ಸಹನೆ ಮತ್ತು ಸೌಮ್ಯವಾಗಿ ತಿಳಿಸಿರಿ. ಅತಿಥಿಯನ್ನು ಗೌರವಿಸುವುದು ಒಬ್ಬ ಸತ್ಯವಿಶ್ವಾಸಿಯ ಲಕ್ಷಣವಾಗಿದೆ ಎಂದು ಹಝ್ರತ್ ಪೈಗಂಬರ್(ಸ) ಹೇಳಿರುವರು. (ಸಹೀಹ್ ಮುಸ್ಲಿಮ್, ಕಿತಾಬುಲ್ ಈಮಾನ್, ಹದೀಸ್–173)

ಈ ಸತ್ಯವಿಶ್ವಾಸದ ವೈಶಿಷ್ಟ್ಯ ಪ್ರತಿಯೊಬ್ಬರಲ್ಲಿ ಇರಬೇಕು. ಮಳೆಯ ಕಾರಣದಿಂದ ಹದೀಖತುಲ್ ಮಹ್‌ದಿಯಲ್ಲಿ ಪರಿಮಿತವಾದ ಸಂಖ್ಯೆಯಲ್ಲಿ ಪಾರ್ಕಿಂಗ್ ವ್ಯವಸ್ಥೆಯಿರುವುದು. ಗ್ರೌಂಡ್ ಇದ್ದರೂ ಮಳೆಯ ಕಾರಣದಿಂದ

ಒದ್ದೆಯಾಗಿದೆ. ಕಾರುಗಳು ಅಲ್ಲಿ ಸ್ಲಿಪ್ ಆಗಲು ಅಥವಾ ಹೂತು ಹೋಗುವ ಸಾಧ್ಯತೆಯಿದೆ. ಆದ್ದರಿಂದ ಬೇರೊಂದು ಕಡೆ ಪಾರ್ಕಿಂಗ್ ವ್ಯವಸ್ಥೆ ಮಾಡಲಾಗಿದೆ. ಅಲ್ಲಿಂದ ಬಸ್ಸುಗಳ ಮೂಲಕ ಅತಿಥಿಗಳನ್ನು ತರಲಾಗುವುದು. ಅಲ್ಲಿ ಡ್ಯೂಟಿ ಮಾಡುವವರು ಬಹಳ ಆರಾಮದಿಂದ ಮತ್ತು ಪ್ರೀತಿಯಿಂದ ಕಾರುಗಳಲ್ಲಿ ಬರುವವರಿಗೆ ತಿಳಿಸಿಕೊಡಬೇಕು. ಕೆಲವರು ನೇರವಾಗಿ ಬರುತ್ತಾರೆ ಮತ್ತು ನಾವು ಬಂದೇ ಬಿಟ್ಟಿದ್ದೇವೆ ಆದ್ದರಿಂದ ಒಳಗೆ ಬಿಡಿರಿ ಎಂದು ಒತ್ತಾಯ ಮಾಡುತ್ತಾರೆ. ಅವರನ್ನು ಬಹಳ ಪ್ರೀತಿಯಿಂದ ಮನವರಿಕೆ ಮಾಡಿಸಿರಿ. ಅತಿಥಿಗಳು ಸಹ ಡ್ಯೂಟಿ ನೀಡುವವರ ಮಾತುಗಳನ್ನು ಮನವರಿಕೆ ಮಾಡಬೇಕು. ಪರಸ್ಪರದ ಸಹಕಾರದಿಂದಲೇ ಕೆಲಸ ಸುಲಭ ಮತ್ತು ಸರಾಗವಾಗಿ ನಡೆಯಲು ಸಾಧ್ಯ.

ಆದ್ದರಿಂದ ಎರಡೂ ಕಡೆಯಿಂದಲೂ ಸಹಕಾರವಿರಬೇಕು. ಮಾಡಿರುವ ನಿಯಮಗಳನ್ನು ಅತಿಥಿಗಳು ಸಹ ಪಾಲಿಸಬೇಕು. ಆಗಲೇ ಕೆಲಸ ಸರಿಯಾದ ರೀತಿಯಲ್ಲಿ ಮತ್ತು ಸರಾಗವಾಗಿ ಆಗುವುದು. ಅತಿಥಿ ಸತ್ಕಾರ ಮಾಡುವವರೊಡನೆ ಅವರ ಜವಾಬ್ದಾರಿಗಳ ಕುರಿತು ಹೇಳಿದ ಹಾಗೆಯೇ ಇಸ್ಲಾಂ ಅತಿಥಿಗಳಿಗೂ ಅವರ ಜವಾಬ್ದಾರಿಗಳ ಕಡೆಗೆ ಗಮನ ಸೆಳೆದಿದೆ ಎಂದು ಅತಿಥಿಗಳು ಯಾವಾಗಲೂ ನೆನಪಿಡಬೇಕು. ಅತಿಥಿ ಸತ್ಕಾರ ಮಾಡುವವರ ತೊಂದರೆಗಳ ಕುರಿತು ಕೂಡ ಗಮನವಹಿಸಬೇಕು. ಅತಿಥಿ ಸತ್ಕಾರ ಮಾಡುವವರೊಡನೆ ಅತಿಥಿಗಳೊಂದಿಗೆ ಉತ್ತಮವಾಗಿ ವರ್ತಿಸಬೇಕು ಎಂದು ಹೇಳಿದ ರೀತಿಯಲ್ಲಿ ಅತಿಥಿಗಳೊಡನೆ ಇಸ್ಲಾಂ ಹೀಗೆ ಹೇಳುತ್ತದೆ: ಮನೆಯವನು ಬರಲು ಬಿಡದಿದ್ದರೆ ಹೋಗಬಾರದು. ಜಲ್ಸದ ಅತಿಥಿಗಳಿಗೆ ಸಾಮಾನ್ಯವಾಗಿ ಈ ಸಂಗತಿ ಅನ್ವಯಿಸುವುದಿಲ್ಲ. ಆದರೆ ಈ ವರ್ಷ ನಾನು ಹೇಳಿದಂತೆ ವಿಶೇಷವಾದ ಸ್ಥಿತಿಗತಿಗಳ ಕಾರಣದಿಂದ ಪ್ರಾಯದ ಒಂದು ಪರಿಮಿತಿಯನ್ನು ಇರಿಸಲಾಗಿದೆ. ಅದೇ ರೀತಿಯಲ್ಲಿ ಆರೋಗ್ಯದ ಕುರಿತು ಕೆಲವು ನಿಬಂಧನೆಗಳನ್ನು ಇರಿಸಲಾಗಿವೆ. ಈ ರೀತಿಯಲ್ಲಿ ಆಯ್ಕೆ ಮಾಡಿಕೊಂಡು ಜನರನ್ನು ಕಳುಹಿಸಬೇಕೆಂದು ಜಮಾಅತುಗಳಿಗೆ ನಿರ್ದೇಶನ ಕೊಡಲಾಗಿದೆ. ಕೆಲವು ಜಾಗಗಳಲ್ಲಿ ಆಯ್ಕೆ ಮಾಡುವುದರಲ್ಲಿ ಹೆಚ್ಚು ಕಮ್ಮಿ ಆಗಿರಬಹುದು ಮತ್ತು ಕೆಲವು ಜನರಿಗೆ ಅದರ ಬಗ್ಗೆ ದೂರು ಇರಬಹುದು. ಅದೇ ರೀತಿಯಲ್ಲಿ ಹೊಸದಾಗಿ ಈ ದೇಶಕ್ಕೆ ಬಂದವರು ಸಹ ನಿಬಂಧನೆಗಳನ್ನು ಈಡೇರಿಸಿರುವುದಿಲ್ಲ. ಆದರೆ ನಮ್ಮನ್ನು ಖಂಡಿತ ಜಲ್ಸದಲ್ಲಿ ಭಾಗವಹಿಸಲು ಬಿಡಬೇಕೆಂದು ಒತ್ತಾಯಪಡಿಸುತ್ತಾರೆ.

ಅಲ್ಲಾಹನು ಒಬ್ಬ ಸತ್ಯವಿಶ್ವಾಸಿಗೆ ಮೂಲಭೂತವಾದ ನಿರ್ದೇಶನವನ್ನು ಮತ್ತು ಮೂಲಭೂತ ನೈತಿಕ ಗುಣದ ಬಗ್ಗೆ ಮಾರ್ಗದರ್ಶನ ಮಾಡಿರುವನು. ಅಲ್ಲಾಹನು ಪವಿತ್ರ ಖುರ್‌ಆನಿನಲ್ಲಿ ಹೀಗೆ ಉಪದೇಶಿಸಿದ್ದಾನದೆ: **ವಿನ್ ಖೀಲ ಲಕುಮುರ್‌ಜಿಊ ಹುವಾ ಅರ್ಝ್ಕಾಲಕುಮ್** (ಅನ್ನೂರ್:29) ಮರಳಿ ಹೋಗಬೇಕೆಂದು ನಿಮ್ಮೊಡನೆ ಹೇಳಿದರೆ ಮರಳಿ ಹೋಗಬೇಕು. ಇದು ಬಹಳ ಹೆಚ್ಚಿನ ಪರಿಶುದ್ಧತೆಗೆ ಕಾರಣವಾಗುವುದು. ಜಲ್ಸ ಸಾಲಾನದಲ್ಲಿ ಪಾಲ್ಗೊಳ್ಳುವುದರ ಒಂದು ದೊಡ್ಡ ಉದ್ದೇಶ ತಮ್ಮ ಸುಧಾರಣೆ ಮತ್ತು ತಮ್ಮನ್ನು ಪರಿಶುದ್ಧಗೊಳಿಸುವುದಾಗಿದೆ. ಒತ್ತಾಯಪೂರ್ವಕವಾಗಿ ಭಾಗವಹಿಸುವುದಕ್ಕೆ ಬದಲಾಗಿ ನಿಶ್ಚಯಿಸಲಾದ ಮಾರ್ಗವನ್ನು ಪಾಲಿಸುವುದು ಹೆಚ್ಚು ಪರಿಶುದ್ಧವಾದ ಸಂಗತಿಯಾಗಿದೆ. ಒಟ್ಟಿನಲ್ಲಿ ಕೆಲವರು ಜಲ್ಸದಲ್ಲಿ ಭಾಗವಹಿಸಲು ಅನುಮತಿಗಾಗಿ ಕೆಲವರು ನನಗೆ ಪತ್ರ ಬರೆದಿರುವರು. ಅವರು ವ್ಯವಸ್ಥೆಯನ್ನು ಪಾಲಿಸಬೇಕು. ಅನುಮತಿ ಸಿಗದ ಕಾರಣ ಬೇಸರಗೊಳ್ಳಬಾರದು. ದೂರಲೂ ಬಾರದು. ಇಂತಹ ಸ್ಥಿತಿಯಲ್ಲಿ ದುಆ ಮಾಡಿರಿ. ಇಂತಹ ಸ್ಥಿತಿಯಲ್ಲಿ ಹೆಚ್ಚಿನ ತಳಮಳದಿಂದ ದುಆ ಮಾಡಬಹುದಾಗಿದೆ. ಅಲ್ಲಾಹನು ಸ್ಥಿತಿಗತಿಗಳನ್ನು ಸರಿಪಡಿಸಲಿ. ತಮ್ಮ ಇಷ್ಟ ಪ್ರಕಾರ ಜಲ್ಸದಲ್ಲಿ ಸ್ವತಂತ್ರವಾಗಿ ಭಾಗವಹಿಸುವಂತಾಗಲಿ. ಪವಿತ್ರ ಖುರ್‌ಆನ್ ಪ್ರಕಾರ ನಡೆಯುವುದಕ್ಕೆ ಸಂಬಂಧಿಸಿ ಸಹಾಬರ ಮಾದರಿ ವಿಸ್ಮಯಕರವಾದುದಾಗಿದೆ. ಮನೆಯವನು ಮನೆಗೆ ಪ್ರವೇಶಿಸಲು ಅನುಮತಿ ಕೊಡದಿದ್ದರೆ ಪ್ರವೇಶಿಸಬೇಡ ಎಂಬ ಪವಿತ್ರ ಖುರ್‌ಆನಿನ ಆಜ್ಞೆಯನ್ನು ಪಾಲಿಸುವ ಸಲುವಾಗಿ ಒಬ್ಬ ಸಹಾಬಿ ಇತರ ಸಹಾಬಿಯರ ಮನೆಗಳಿಗೆ ಪದೇ ಪದೇ ಹೋಗುತ್ತಿರುತ್ತಾರೆ. ಆದರೆ ಇತರ ಸಹಾಬಿಯರು ಪವಿತ್ರ ಖುರ್‌ಆನಿನ ಆಜ್ಞೆ ಪ್ರಕಾರವೇ ಆ ಸಹಾಬಿಯನ್ನು ಮನೆಗೆ ಪ್ರವೇಶಿಸಲು ಅನುಮತಿ ಕೊಡುತ್ತಿರುತ್ತಾರೆ. (ತಫ್ಸೀರ್ ಅದ್ದುರ್ರೆ ಮನ್ಸೂರ್, ಸಂಪುಟ–6, ಪುಟ–175–176, ದಾರುಲ್ ಫಿಕರ್ ಬೈರೂತ್ 2011)

ಇಬ್ಬರೂ ಅಲ್ಲಾಹನ ಸಂಪ್ರೀತಿಯನ್ನು ಗಳಿಸಲಿಕ್ಕಾಗಿ ಪವಿತ್ರ ಖುರ್‌ಆನಿನ ಪ್ರಕಾರ ನಡೆಯುತ್ತಿರುತ್ತಾರೆ. ಹಝ್ರತ್ ಮಸೀಹ್ ಮೌಊದ್(ಅ) ಪವಿತ್ರ ಖುರ್‌ಆನಿನ ಅಧ್ಯಾಪನೆಗಳ ಪ್ರಕಾರ ನಡೆಯಲು ನಮ್ಮ ಗಮನ ಸೆಳೆದರು ಮತ್ತು ತಮ್ಮ ಮಾದರಿಯಿಂದ ಅವುಗಳ ಪ್ರಕಾರ ನಡೆದು ತೋರಿಸಿದರು. ಆದ್ದರಿಂದ ಪಾಲ್ಗೊಳ್ಳಲು ಅನುಮತಿ ಸಿಗದವರು ಪಾಲ್ಗೊಳ್ಳಲು ಪ್ರಯತ್ನಿಸಬಾರದು. ಇದರ ಬಗ್ಗೆ ಯಾವುದೇ ರೀತಿಯಲ್ಲಿ ದೂರಬಾರದು. ಯಾರಿಗೆ ಆಮಂತ್ರಣ ಪತ್ರ ಮತ್ತು ಅನುಮತಿ ಸಿಕ್ಕಿದೆಯೋ ಅವರು ಖಂಡಿತ ಜಲ್ಸದಲ್ಲಿ ಭಾಗವಹಿಸಬೇಕು. ಇಲ್ಲದಿದ್ದರೆ ಅನುಮತಿ ಸಿಗದವರಿಗೆ ಅನ್ಯಾಯ ಮಾಡಿದಂತೆ ಆಗುವುದು. ಹವಾಮಾನದ ಕೇಡನ್ನು ನೆಪವನ್ನಾಗಿ ಮಾಡಬೇಡಿರಿ.

ಹವಾಮಾನದ ಕೇಡದ ಬಗ್ಗೆ ಹೇಳಬೇಕಾದರೆ ಜಲ್ಸದಲ್ಲಿ ಭಾಗವಹೀಸುವವರು ನೆನಪಿಡಬೇಕು ರಬ್ವ ಮತ್ತು ಖಾದಿಯಾನಿನಲ್ಲಿ ತೆರೆದ ಆಕಾಶದ ಕೆಳಗೆ ಸಹ ಜಲ್ಸಗಳು ನಡೆಯುತ್ತಿದ್ದುವು. ರಬ್ವದಲ್ಲಿ ಈಗ ಕಾನೂನಿನ ನಿರ್ಬಂಧಗಳ ಕಾರಣ ಜಲ್ಸ ನಡೆಯುತ್ತಿಲ್ಲ. ಹಲವು ವರ್ಷಗಳಿಂದ ನಡೆಯುತ್ತಿಲ್ಲ. ಆದರೆ ಮೊದಲು ನಡೆಯುತ್ತಿತ್ತು. ಚಳಿಗಾಲದಲ್ಲಿ ಜಲ್ಸಗಳು ನಡೆಯುತ್ತಿದ್ದುವು. ಮಳೆ ಬಂದರೆ ಜನರು ಆರಾಮದಿಂದ ಯಾವುದಾದರೂ ರೀತಿಯಲ್ಲಿ ತಮ್ಮನ್ನು ಮಳೆಯಿಂದ ರಕ್ಷಣೆ ಪಡೆದು ಜಲ್ಸ ಕೇಳುತ್ತಿದ್ದರು. ಇಸ್ಲಾಮಾಬಾದ್, ಯು.ಕೆ.ಯಲ್ಲೂ ಆರಂಭದ ಜಲ್ಸಗಳಲ್ಲಿ ನೀರು ಜಲ್ಸದ ಮೈದಾನದ ಒಳಗೆ ಬರುತ್ತಿತ್ತು. ನನಗೆ ನೆನಪಿದೆ, ಇಸ್ಲಾಮಾಬಾದಿನ ಆರಂಭಿಕ ಜಲ್ಸಗಳಲ್ಲಿ ಭಾಗವಹಿಸುವಾಗ ಮಳೆಯ ಕಾರಣದಿಂದ ಜಲ್ಸ ಮೈದಾನದ ಒಳಗೂ ನೀರು ಬಂತು. ನೆಲ ಒದ್ದೆಯಾಯಿತು. ಬದಿಯಲ್ಲಿ ನೀರು ತಂಗಿತ್ತು. ಬದಿಗಳಲ್ಲಿ ನಿಂತುಕೊಂಡು ನಮಾಝ್ ಮಾಡುವವರು ಸಜ್‌ದ ಮಾಡುವಾಗ ಹಣೆ ಮತ್ತು ಮಂಡಿಗಳಲ್ಲಿ ಕೆಸರಾಗುತ್ತಿತ್ತು. ನನಗೂ ಸಹ ಹೀಗೆ ಆಗಿತ್ತು. ಸಜ್‌ದದಿಂದ ತಲೆಯೆತ್ತಿದ ನಂತರ ಕಣ್ಣುಗಳಿಗೆ ನೀರು ಅಥವಾ ಕೆಸರು ತಗುಲದಿರಲು ಹಣೆಯನ್ನು ಸ್ವಚ್ಛಗೊಳಿಸಬೇಕಾಗುತ್ತಿತ್ತು. ಆದರೆ ವಿಶೇಷವಾದ ಆವೇಶದಿಂದ ಜನರು ಜಲ್ಸಗಳಲ್ಲಿ ಪಾಲ್ಗೊಳ್ಳುತ್ತಿದ್ದರು. ಅಲ್ಲಾಹನ ಅನುಗ್ರಹದಿಂದ ಈಗಲೂ ಆ ಆವೇಶವಿದೆ. ಹೆಚ್ಚಿನ ಅಹ್ಮದಿಯರಲ್ಲಿ ಈ ಆವೇಶವಿದೆ. ಆದರೆ ಕೆಲವರು ಸೂಕ್ಷ್ಮ ಸ್ವಭಾವದವರೂ ಇರುತ್ತಾರೆ. ಅವರಿಗಾಗಿ ನಾನು ಇದನ್ನು ಹೇಳಿದ್ದೇನೆ. ಆದ್ದರಿಂದ ಅನುಮತಿ ಪತ್ರ ಸಿಕ್ಕಿದವರು ಖಂಡಿತ ಬರಬೇಕು. ಯಾವುದೇ ರೀತಿಯ ನೆಪವನ್ನು ಹೇಳಬೇಡಿರಿ. ಕೆಲವು ಜಗಳಗಂಟಿಗಳಾಗಿರುತ್ತಾರೆ. ಕೆಲವರಿಗೆ ದೂರು ಮಾಡುವ ಅಭ್ಯಾಸವಿರುತ್ತದೆ. ವ್ಯವಸ್ಥೆಯ ಬಗ್ಗೆ ಸಹ ತಪ್ಪು ಕಂಡು ಹಿಡಿಯುವರು. ವ್ಯವಸ್ಥೆ ಹೀಗೆ ಏಕೆ ಆಗಿಲ್ಲ. ಹೀಗೆ ಆಗಬೇಕಿತ್ತು ಎಂದೆಲ್ಲ ಹೇಳುತ್ತಾರೆ. ಈ ಕಾರಣದಿಂದ ನಾವು ಬಂದಿಲ್ಲವೆಂದು ನೆಪ ಹೇಳುತ್ತಾರೆ. ಹೇಗಿದ್ದರೂ ಈ ಸಂಗತಿಗಳನ್ನು ಗಮನಿಸಬೇಕು. ಇಂದು, ನಾಳೆ ಮತ್ತು ನಾಳಿದ್ದು ಆಮಂತ್ರಣ ಸಿಕ್ಕಿದವರು ಖಂಡಿತ ಭಾಗವಹಿಸಬೇಕು.

ವ್ಯವಸ್ಥೆಗೆ ಸಂಬಂಧಿಸಿ ಕೆಲವು ಸಂಗತಿಗಳ ಬಗ್ಗೆ ಸಹ ಹೇಳುತ್ತೇನೆ. ಊಟದ ಜಾಗದಲ್ಲಿ ಊಟವನ್ನು ಪಡಯುವಾಗ ಮತ್ತು ಊಟವನ್ನು ಮಾಡುವಾಗ ದೂರವನ್ನು ಪಾಲಿಸಲು ಗಮನವಹಿಸುವಂತೆ ವ್ಯವಸ್ಥೆಯನ್ನು ಮಾಡಲಾಗಿದೆ. ಅದನ್ನು ಪಾಲಿಸಬೇಕು. ದೂರವನ್ನು ಪಾಲಿಸಬೇಕೆಂದು ಎಲ್ಲ ಕಡೆ ಬರೆದು ಅಂಟಿಸಲಾಗಿದೆ. ಆದರೆ ಕೆಲವರಿಗೆ ಏನೇ ಬರೆದರೂ ಅವುಗಳನ್ನು ಓದುವ ಅಭ್ಯಾಸವಿರುವುದಿಲ್ಲ. ಆದ್ದರಿಂದ ಊಟವನ್ನು ಪಡೆಯುವಾಗಲೂ ಊಟವನ್ನು ಮಾಡುವಾಗಲೂ ದೂರವನ್ನು ಪಾಲಿಸಿರಿ. ಊಟವನ್ನು ಮಾಡುವಾಗ ಮಾಸ್ಕನ್ನು ಕಳಚಬೇಕಾಗುತ್ತದೆ. ಆದರೆ ಊಟವನ್ನು ಪಡೆಯುವಾಗ ಮಾಸ್ಕನ್ನು ಧರಿಸಿರಿ. ಡ್ಯೂಟಿ ನೀಡುವವರು ಮಾಸ್ಕ್ ಧರಿಸುವುದನ್ನು ಖಚಿತಪಡಿಸಬೇಕು. ಡ್ಯೂಟಿ ಮಾಡುವವರು ಮಾಸ್ಕನ್ನು ಧರಿಸುವುದರಲ್ಲಿ ಅಸಡ್ಡೆ ತೋರಿಸಿದರೆ ಅತಿಥಿಗಳು ಸಹ ಹಾಗೆಯೇ ಆಗುವರು. ಆದ್ದರಿಂದ ಡ್ಯೂಟಿ ನೀಡುವವವರೂ ಮತ್ತು ಅತಿಥಿಗಳು ಖಂಡಿತ ಮಾಸ್ಕನ್ನು ಧರಿಸಬೇಕು. ಅದು ಪಾರ್ಕಿಂಗ್ ಆಗಿರಲಿ, ರಸ್ತೆಗಳಲ್ಲಿ ಆಗಿರಲಿ, ಜಲ್ಸಗಾಹ್ ಆಗಿರಲಿ, ಊಟದ ಮಾರ್ಕಿಯಾಗಿರಲಿ. ಜಲ್ಸ ಗಾಹ್‌ನಲ್ಲು ಮಾಸ್ಕ್ ಹಾಕಿ ಕುಳಿತುಕೊಳ್ಳಬೇಕು. ವ್ಯವಸ್ಥೆಯಡಿಯಲ್ಲಿ ಘೋಷ ವಾಕ್ಯಗಳು ಹೇಳಲ್ಪಟ್ಟರೆ ಮಾಸ್ಕ್ ಹಾಕಿಕೊಂಡು ಅದಕ್ಕೆ ಜವಾಬು ಕೊಡಬೇಕು, ಮೂಗು ಮತ್ತು ಬಾಯಿ ಎರಡೂ ಕವರ್ ಮಾಡಿರಬೇಕು. ಗೇಟಿನ ಒಳಗೆ ಪ್ರವೇಶಿಸುವಾಗ ಎರಡೂ ರೀತಿಯ ಚೆಕಿಂಗ್ ಇರುವುದು. ಏಮ್ಸ್ ಕಾರ್ಡ್ ಸಹ ಚೆಕ್ ಆಗುವುದು ಮತ್ತು ಬಹುಶಃ ವೇಕ್ಸಿನೇಶನ್ ಕಾರ್ಡ್ ಹಾಗೂ ಇತರ ಅನುಮತಿ ಪತ್ರ ಸಹ ಚೆಕ್ ಮಾಡಲಾಗುವುದು. ಇಷ್ಟೆಲ್ಲ ಚೆಕಿಂಗ್ ಏಕೆ ಎಂದು ತಪ್ಪಾಗಿ ತಿಳಿದುಕೊಳ್ಳಬಾರದು. ಈ ಎಲ್ಲ ಮುನ್ನೆಚ್ಚರಿಕೆಗಳು ಭಾಗವಹಿಸುವವರ ಪ್ರಯೋಜನಕ್ಕಾಗಿಯೇ ಆಗಿದೆ.

ಸೆಕ್ಯೂರಿಟಿ ಬಗ್ಗೆ ಅಸಡ್ಡೆ ಸಲ್ಲದು, ಎಲ್ಲರೂ ಪರಿಪೂರ್ಣವಾಗಿ ಎಚ್ಚರಿಕೆಯಿಂದಿರಬೇಕು.

ಅದೇ ರೀತಿ ಊಟದ ಬಗ್ಗೆ ಹೇಳುತ್ತೇನೆ. ಮಧ್ಯಾಹ್ನದ ಊಟ ಇನ್‌ಶಾ ಅಲ್ಲಾಹ್ ಮಾರ್ಕಿಯಲ್ಲಿ ನೀಡಲಾಗುವುದು. ಅಲ್ಲಿ ನಾನು ಹೇಳಿದ ಸಂಗತಿಯನ್ನು ಗಮನದಲ್ಲಿಡಿರಿ. ಆದರೆ ರಾತ್ರಿಯ ಊಟ ಪ್ಯಾಕ್ ಮಾಡಿ ನೀಡುವ ಏರ್ಪಾಡು ಮಾಡಲಾಗಿದೆ. ಎಷ್ಟು ಬೇಗ ವಿತರಿಸಲು ಸಾಧ್ಯವೋ

ಅಷ್ಟು ಬೇಗನೇ ವಿತರಿಸಲು ಪ್ರಯತ್ನಿಸಲಾಗುವುದು. ಆದರೆ ಸ್ವಲ್ಪ ತಡವಾದರೆ ಚಿಂತೆ ಮಾಡಬೇಡಿರಿ. ಅದೇ ರೀತಿಯಲ್ಲಿ ಜಲ್ಸವನ್ನು ಆಲಿಸುವುದರ ಬಗ್ಗೆ ಸಾಮಾನ್ಯವಾಗಿ ಪ್ರತಿ ವರ್ಷ ನಿರ್ದೇಶನ ನೀಡಲಾಗುತ್ತದೆ. ಅದನ್ನು ಪುನಃ ಹೇಳುತ್ತೇನೆ. ಜಲ್ಸವನ್ನು ಆಲಿಸಿರಿ. ದೀರ್ಘ ಕಾಲದ ನಂತರ ಪರಸ್ಪರ ಭೇಟಿಯಾಗುವವರು, ಅಲ್ಲಿಲ್ಲಿ ಕುಳಿತುಕೊಂಡು ಸಂಬಂಧಿಕರೊಡನೆ ಅಥವಾ ಸ್ನೇಹಿತರೊಡನೆ ಮಾತುಗಳಲ್ಲಿ ನಿರತರಾಗದಿರಿ. ಜಲ್ಸಕ್ಕಾಗಿ ಬಂದಿರುವಿರಿ. ಆದ್ದರಿಂದ ಜಲ್ಸವನ್ನು ಆಲಿಸಿರಿ. ಈ ಮಹಾಮಾರಿಯ ಕಾರಣದಿಂದ ಹಲವರು ದೀರ್ಘಕಾಲದ ನಂತರ ಭೇಟಿಯಾಗಿರುತ್ತಾರೆ. ಏಕೆಂದರೆ ಈ ಕಾಲಾವಧಿಯಲ್ಲಿ ಜಮಾಅತಿನ ಮಟ್ಟದಲ್ಲೂ ಯಾವುದೇ ಫಂಕ್ಷನ್ ನಡೆದಿಲ್ಲ. ಆದ್ದರಿಂದ ಈ ಕಾರಣದಿಂದ ಪ್ರೋಗ್ರಾಮ್‌ಗಳನ್ನು ಕೇಳುವುದನ್ನು ಮತ್ತು ದುಆ ಮಾಡುವುದನ್ನು ಮರೆತು ಬಿಡಬಾರದು. ಅವುಗಳಿಂದ ಬಿಟ್ಟು ನಿಲ್ಲುವವರಾಗದಿರಲಿ. ಜಲ್ಸದಲ್ಲಿ ಬಂದಿರುವಿರಿ. ಅದರಿಂದ ಸಂಪೂರ್ಣವಾಗಿ ಪ್ರಯೋಜನ ಪಡೆಯಿರಿ.

ಜಲ್ಸದ ದಿನಗಳಲ್ಲಿ ದೇವಸ್ಮರಣೆ ಮಾಡುವುದರ ಬಗ್ಗೆ ಗಮನ ಹರಿಸುತ್ತಾ ಹಝ್ರತ್ ಮುಸ್ಲಿಹ್ ಮೌಊದ್(ರ) ಒಂದು ಸಂಗತಿಯನ್ನು ಹೇಳಿರುವರು. ಅವರು ಹೇಳುತ್ತಾರೆ: ಜಲ್ಸದ ದಿನಗಳಲ್ಲಿ ಮತ್ತು ಸಭೆಗಳಲ್ಲಿ ಕುಳಿತುಕೊಂಡಿರುವಾಗ ದೇವಸ್ಮರಣೆ ಮಾಡಬೇಕೆಂದು ಅಲ್ಲಾಹನು ಹೇಳಿದ್ದಾನೆ ಎಂಬ ಸಂಗತಿ ನನಗೆ ನೆನಪಿಗೆ ಬಂತು. ಅದರ ಒಂದು ಪ್ರಯೋಜನ ಅಲ್ಲಾಹನು ಹೇಳಿದ್ದೇನೆಂದರೆ, **ಉಝ್‌ಕುರುಲ್ಲಾಹ ಯಝ್‌ಕುರುಕುಮ್** ಅಂದರೆ ಅಲ್ಲಾಹನನ್ನು ಸ್ಮರಿಸುವ ದಾಸನನ್ನು ಅಲ್ಲಾಹನು ಸ್ಮರಿಸುತ್ತಾನೆ. ಯಾವನನ್ನು ಅಲ್ಲಾಹನು ಸ್ಮರಿಸುತ್ತಾನೋ ಅವನಿಗಿಂತ ಭಾಗ್ಯವಂತ ಬೇರೆ ಯಾರು ಇರಲು ಸಾಧ್ಯ? (ಖುತ್‌ಬಾತೆ ಮಹ್ಮೂದ್, ಸಂಪುಟ-4, ಪುಟ-258)

ಒಟ್ಟಿನಲ್ಲಿ ಈ ದಿನಗಳಲ್ಲಿ ದೇವಸ್ಮರಣೆಯು ಅಲ್ಲಾಹನ ಅನುಗ್ರಹಗಳಿಗೆ ಕಾರಣವಾಗುವುದು. ಆದ್ದರಿಂದ ಈ ದಿನಗಳಲ್ಲಿ ವಿಶೇಷವಾಗಿ ದೇವಸ್ಮರಣೆಯ ಕಡೆಗೆ ಒತ್ತು ನೀಡಿರಿ. ಲೋಕದೆಲ್ಲಡೆ ಹರಡಿರುವ ಅಹ್ಮದಿಯರು, ತಮ್ಮ ದೇಶಗಳಲ್ಲಿ ಅಥವಾ ಮನೆಗಳಲ್ಲಿ ಒಟ್ಟಾಗಿ ಜಲ್ಸವನ್ನು ಕೇಳುವ ಎಲ್ಲ ಅಹ್ಮದಿಯರು ಸಹ ಧಿಕ್ರೇ ಇಲಾಹಿ ಎಂದರೆ ದೇವಸ್ಮರಣೆ ಮಾಡಬೇಕು. ಆಗ ಹೆಚ್ಚು ಹೆಚ್ಚು ಅಲ್ಲಾಹನ ವರದಾನವನ್ನು ಪಡೆಯುವವರಾಗುವಿರಿ. ತಮ್ಮ ಆಧ್ಯಾತ್ಮಿಕ ಸ್ಥಿತಿಯನ್ನು ಉತ್ತಮಗೊಳಿಸುವವರಾಗುವಿರಿ, ಲೋಕದ ಆಪತ್ತುಗಳಿಂದ ಅಲ್ಲಾಹನ ಅನುಗ್ರಹದಿಂದ ರಕ್ಷಣೆ ಪಡೆಯುವವರಾಗುವಿರಿ.

ಜಲ್ಸದ ವಾತಾವರಣದಿಂದ ಸಂಪೂರ್ಣವಾಗಿ ಪ್ರಯೋಜನ ಪಡೆಯಲು ಪ್ರಯತ್ನಿಸಬೇಕು. ಈ ಬಾರಿ ಕಡಿಮೆ ಸಂಖ್ಯೆಯಲ್ಲಿ ಜನರು ಇರುವ ಕಾರಣದಿಂದ ಪ್ರತಿಯೊಬ್ಬರಿಗೂ ಕುರ್ಚಿಯಲ್ಲಿ ಕುಳಿತುಕೊಳ್ಳುವ ಏರ್ಪಾಡು ಇದೆ. ಆದ್ದರಿಂದ ದೀರ್ಘ ಸಮಯ ಕುಳಿತುಕೊಳ್ಳಲು ಯಾವುದೇ ತೊಂದರೆಯಿಲ್ಲ. ಅಲ್ಲದೇ ಜಲ್ಸದ ಒಂದು ಸೇಶನ್ ಅಷ್ಟು ದೀರ್ಘವಾಗಿರುವುದಿಲ್ಲ. ಸಾಮಾನ್ಯವಾಗಿ ಎರಡು ಎರಡುವರೆ ಗಂಟೆದ್ದಾಗಿರುತ್ತದೆ. ಹೆಚ್ಚೆಂದರೆ ಮೂರು ಗಂಟೆದ್ದಾಗಿರುತ್ತದೆ. ಆದ್ದರಿಂದ ನೆಲದಲ್ಲಿ ಕುಳಿತುಕೊಳ್ಳಬೇಕಾಗಿ ಬಂದರೂ ಕುಳಿತುಕೊಳ್ಳುವುದು ಅಷ್ಟೇನೂ ಕಷ್ಟವೂ ಅಲ್ಲ.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಒಂದು ಉಲ್ಲೇಖವನ್ನು ಕೊನೆಯಲ್ಲಿ ಓದಿ ಹೇಳುತ್ತೇನೆ. ಅವರು ಹೇಳುತ್ತಾರೆ: ಎಲ್ಲರೂ ಗಮನವಿಟ್ಟು ಕೇಳಿರಿ. ಬಾಹ್ಯವಾದ ಮಾತುಗಾರಿಕೆ ಮತ್ತು ಭಾಷಣಗಳನ್ನು ಮಾತ್ರ ಇಷ್ಟಪಡಬೇಡಿರಿ. ಎಲ್ಲ ಕೆಲಸವೂ ಅಲ್ಲಾಹನಿಗೆ ಆಗಿರಬೇಕು. ಎಲ್ಲ ಸಂಗತಿ ಅಲ್ಲಾಹನಿಗಾಗಿ ಆಗಿರಬೇಕು.

ಒಂದು ಸಂಗತಿಯೇನೆಂದರೆ, ಎಲ್ಲ ಭಾಷಣಗಳನ್ನು ಕೇಳಬೇಕು. ಉತ್ತಮ ಭಾಷಣಗಾರನೇ ಎಂದು ನೋಡಬಾರದು. ಯಾರದ್ದು ಕೇಳಬೇಕು ಯಾರದ್ದು ಕೇಳಬಾರದು ಎಂದು ನೋಡಬಾರದು. ಎಲ್ಲ ಭಾಷಣವನ್ನು ಕೇಳಬೇಕು. ಜಲ್ಸದಲ್ಲಿ ಕುಳಿತುಕೊಂಡು ಕಾರ್ಯಕ್ರಮಗಳನ್ನು ಪರಿಪೂರ್ಣ ನಿಷ್ಠೆ ಮತ್ತು ಗಮನದಿಂದ ಕೇಳಬೇಕು. ಅಲ್ಲಾಹನ ಸಂಪ್ರೀತಿಯು ತಳಮಳವಿರುವಾಗಲೇ ಈ ನಿಷ್ಠೆ ಲಭಿಸುವುದು. ನಮ್ಮಲ್ಲಿ ಪ್ರತಿಯೊಬ್ಬರು ನಮ್ಮೊಳಗೆ ನಿಷ್ಠೆಯನ್ನು ಉಂಟುಮಾಡುವವರನ್ನಾಗಿ ಅಲ್ಲಾಹನು ಮಾಡಲಿ. ಹವಾಮಾನಕ್ಕಾಗಿಯೂ ದುಆ ಮಾಡಿರಿ. ಈ ದಿನಗಳಲ್ಲಿ ಹವಾಮಾನ ನಮ್ಮ ಯಾವುದೇ ಪ್ರೋಗ್ರಾಮುಗಳಿಗೆ ತಡೆಯಾಗದಿರಲಿ. ಬದಲಾಗಿ ಅಲ್ಲಾಹನು ಅದನ್ನು ನಮ್ಮ ಪರವಾಗಿ ಮಾಡಲಿ.

********

**ಪ್ರೀತಿ ಎಲ್ಲರಲ್ಲು, ದ್ವೇಶವಿಲ್ಲ ಯಾರಲ್ಲು**

**Love for All, Hatred for None**

*(ಪುಟ ಸಂಖ್ಯೆ 11ರ ಉಳಿದ ಭಾಗ)*

ಹಝ್ರತ್ ಅಬ್ಬ ಬಿನ್ ಹಾರಿಸ್(ರ) ವರದಿ ಮಾಡುತ್ತಾರೆ: ಅವರ ವಿವಾಹವು ಅಬೂ ವಹಾಬ್ ಬಿನ್ ಅಝೀಝ್ಝುರ್ ಅವರೊಂದಿಗಾಯಿತು. ಕೆಲವು ಸಮಯದ ನಂತರ ಮಹಿಳೆಯೊಬ್ಬಳು ಬಂದು ಹೇಳಿದಳು. ನಾನು ಅಬ್ಬ ಮತ್ತು ಆ ಮಹಿಳೆಗೆ (ಯಾರನ್ನು ಅಬ್ಬ ವಿವಾಹವಾಗುತ್ತಿದ್ದಾರೆ) ಮೊಲೆಯುಣಿಸಿರುತ್ತೇನೆ. (ಆದುದರಿಂದ ಈ ಇಬ್ಬರು ರಝಾಯಿ ಬೆಹನ್ ಭಾಯಿ) ಅಂದರೆ ಹಾಲುಂಡ ಸಹೋದರ ಸಹೋದರಿಯಾಗಿದ್ದಾರೆ. ಆದುದರಿಂದ ಅವರ ವಿವಾಹ ತರ್ಕಬದ್ಧವಲ್ಲ. ಅಬ್ಬ ಹೇಳಿದರು. ನೀನು ಹಾಲುಣಿಸಿದ್ದು ನನಗೆ ಗೊತ್ತಿಲ್ಲ. ಅಷ್ಟೇಕೆ ಈ ವಿಷಯು ಕುರಿತು ನೀನು ಎಂದೂ ಹೇಳಲಿಲ್ಲ. ಮತ್ತೆ ಅಬ್ಬ ರಸೂಲುಲ್ಲಾಹ್(ಸ) ರವರ ಬಳಿ ಮದೀನಕ್ಕೆ ಹೋದರು. ಅವರೊಂದಿಗೆ ಈ ಸಮಸ್ಯೆ ಕುರಿತು ಹೇಳಿದರು. ನಬಿ(ಸ) ಹೇಳಿದರು. ಈ ಮಾತು ಸ್ಪಷ್ಟವಾದ ನಂತರ ನೀವು ಅವಳಿಗೆ ವಿವಾಹದಲ್ಲಿರಿಸಲು ಹೇಗೆ ಸಾಧ್ಯ. ಹಾಗೆ ಅಬ್ಬ ಅವಳನ್ನು ಬಿಟ್ಟುಬಿಟ್ಟರು. ಮತ್ತು ಅವಳು ಬೇರೆ ವ್ಯಕ್ತಿಯೊಂದಿಗೆ ವಿವಾಹವಾದಳು (ಸಹೀ ಬುಖಾರಿ)

ತಲಾಖ್, ಖುಲಾ ವಿಷಯದಲ್ಲೂ ಯಾವ ವ್ಯತ್ಯಾಸವಿಲ್ಲ. ಬದಲು ಇಸ್ಲಾಮ್ ಧರ್ಮದ ಉಪಕಾರವಿದೆ. ಅದು ಪುರುಷನನ್ನು ತಲಾಖ್ ಕೊಡುವ ಹಕ್ಕು ನೀಡುವ ಜೊತೆಯಲ್ಲಿ ಹೆಣ್ಣಿಗೂ ಖುಲಾ ಬಯಸುವ ಹಕ್ಕು ನೀಡಿದೆ. ಅದರಲ್ಲೂ ಸ್ತ್ರೀ ಪುರುಷರಿಗೆ ಸಮಾನ ಹಕ್ಕು ನೀಡಲಾಗಿದೆ. ಪುರುಷನು ತಲಾಖ್ ಕೊಡುವವನಾದರೆ ಅವನಿಗೆ ಹೆಣ್ಣಿನ ಎಲ್ಲಾ ಸಾಂಪತ್ತಿಕ ಹಕ್ಕುಗಳನ್ನು ನೀಡಬೇಕಾಗುತ್ತದೆ. ಅಲ್ಲದೇ ಈ ಹಿಂದೆ ಹೆಣ್ಣಿಗೆ ನೀಡಲಾದ ಸಾಂಪತ್ತಿಕ ಕೊಡುಗೆ ಹಿಂಪಡೆಯುವಂತಿಲ್ಲ ಅದೇ ರೀತಿ ಹೆಣ್ಣು ತನ್ನ ಮರ್ಜಿಯಿಂದ ಪತಿಯು ಯಾವುದೇ ತಪ್ಪಿಲ್ಲದಿದ್ದರೂ ಖುಲಾ ಬಯಸುವುದಾದರೆ ಅವಳಿಗೂ ಸಹ ಪುರುಷನ ಕೆಲ ಸಾಂಪತ್ತಿಕ ಹಕ್ಕುಗಳನ್ನು, ಉದಾಹರಣೆಗೆ ಮಹರ್ (ವಿವಾಹ ನಿಧಿ) ಹಿಂದಿರುಗಿಸಬೇಕಾಗುತ್ತದೆ. ಆದರೆ ಹೆಣ್ಣು ಖುಲಾ ಪಡೆಯುವಲ್ಲಿ ಪುರುಷನ ದೌರ್ಜನ್ಯವೇನಾದರೂ ಸಾಬೀತಾದರೆ ಆ ಸಂದರ್ಭದಲ್ಲಿ ಹೆಣ್ಣಿಗೆ ಈ ಹೆಚ್ಚಿನ ಅವಕಾಶ ನೀಡಲಾಗಿದೆ. ಅವಳು ಮಹರ್ (ವಿವಾಹ ನಿಧಿ) ಸಹ ಇಟ್ಟುಕೊಳ್ಳಬಹುದಾಗಿದೆ. ಅಂತೂ ಆ ನಿರ್ಣಯದ ಹಕ್ಕು ಖಾಝಿಗೆ ಇರುತ್ತದೆ. ಅವರು ಪರಿಸ್ಥಿತಿಗಳನ್ನು ಅವಲೋಕಿಸಿ ತೀರ್ಪು ನೀಡುತ್ತಾರೆ.

ಗ್ರಂಥದವರಿಂದ ವಿವಾಹವಾಗುವ, ವಲಿ (ಸಾಕ್ಷಿ) ಯ ಅಗತ್ಯವಿದ್ದಲ್ಲಿ ಮತ್ತು ಪುರುಷನು ಒಂದಕ್ಕಿಂತ ಹೆಚ್ಚು ವಿವಾಹ ಬಯಸುವಂತಹ ವ್ಯವಹಾರಗಳಲ್ಲಿ, ವಾಸ್ತವದಲ್ಲಿ ಹೆಣ್ಣಿನ ರಕ್ಷಣೆ, ಗೌರವ ಮತ್ತು ಮಾನವನ್ನು ಪರಿಗಣಿಸಲಾಗಿದೆ. ಹೆಣ್ಣಿಗೆ ಅಲ್ಲಾಹನು ಪುರುಷರಿಗಿಂತ ಸಾಮಾನ್ಯವಾಗಿ ಸೂಕ್ಷ್ಮ ಮತ್ತು ಪ್ರಭಾವದಲ್ಲಿ ಪ್ರಭಾವಕ್ಕೊಳಗಾಗುವ ಪ್ರಕೃತಿ ಇಟ್ಟಿರುತ್ತಾನೆ. ಅಂದ ಹಾಗೆ ಓರ್ವ ಮುಸ್ಲಿಂ ಮಹಿಳೆಯನ್ನು ಗ್ರಂಥದವರ ಪುರುಷರೊಡನೆ ವಿವಾಹದಿಂದ ತಡೆದಿರುವುದು ಅವಳ ಧರ್ಮರಕ್ಷಣೆಯಿಂದಾಗಿದೆ.

ವಿವಾಹ ವಿಷಯದಲ್ಲಿ ಹುಡುಗಿಯ ರಾಜಿ ಕೇಳುವ ಜೊತೆಯಲ್ಲಿ ಅವಳ ವಲಿ ತಂದೆಯು ರಾಜಿ ಕೇಳುವ ಉದ್ದೇಶ, ಹೆಣ್ಣಿಗಿರುವ ಪ್ರಯೋಜನಗಳಲ್ಲಿ ಒಂದು ಪ್ರಯೋಜನವೇನೆಂದರೆ, ಮಹಿಳೆಗೆ ಒಂದು ರೀತಿಯ ನೆರವು ಮತ್ತು ಸುರಕ್ಷತೆ ನೀಡುವುದಾಗಿದೆ. ಮಹಿಳೆಯು ವಿವಾಹವಾದ ನಂತರ ಅವಳ ವಿವಾಹಿತ ಸಂಬಂಧಿಕರಿಗೆ ತಿಳಿದಿರಲಿ. ಮಹಿಳೆಯು ನಿರಾಶ್ರಿತಳಲ್ಲ, ಬದಲು ಅವಳ ಸಂರಕ್ಷಕರು ಇದ್ದಾರೆ ಎಂದು ಜ್ಞಾಪಿಸಲು ಆಗಿದೆ.

ಮಹಿಳೆಗೆ ಒಂದು ಸಮಯದಲ್ಲಿ ಒಂದೇ ವಿವಾಹವಾಗುವ ಅನುಮತಿ ನೀಡಿ ಇಸ್ಲಾಂ ಧರ್ಮವು ಅವಳ ಮಾನ ಕಾಪಾಡಿದೆ ಮತ್ತು ಮನುಷ್ಯನ ಸ್ವಾಭಿಮಾನ ಹಾಗೂ ಮಾನವ ಪ್ರಕೃತಿಗೆ ಅದು ತಕ್ಕುದಾದ ಆಜ್ಞೆ ಆಗಿದೆ.

ಯಾವ ಹದೀಸಿನಲ್ಲಿ ಮಹಿಳೆಯರು ನರಕದಲ್ಲಿ ಹೆಚ್ಚಿರುವ ವಿವರ ಬಂದಿದೆ. ಅಲ್ಲಿ ಜನರಿಗೆ ಆ ಹದೀಸಿನ ಭಾಷಾಂತರ ಅರಿಯುವುದರಲ್ಲಿ ತಪ್ಪಾಗಿದೆ. ಆ ಹದೀಸಿನ ಅರ್ಥ ನರಕದಲ್ಲಿ ಮಹಿಳೆಯರು ಹೆಚ್ಚಾಗಿರುವರು ಎಂದಲ್ಲ. ಬದಲು ಹುಝೂರ್(ಸ) ಹೇಳಿದರು. **ಉರೀತು ನ್ನಾರ ಫಇಝಾ ಅಕ್ಸರು ಅಹ್ಲಿಹನ್ನಿಸಾ ಹಕ್ಫುರೂನ್** ಅಂದರೆ ನನಗೆ ಕೃತಘ್ನರಾದ ಮಹಿಳೆಯರು ಹೆಚ್ಚಿನ ಪ್ರಮಾಣದಲ್ಲಿದ್ದರು. ಅಂದರೆ ಯಾವ ಮಹಿಳೆಯರು ತಮ್ಮ ಕರ್ಮಗಳಿಂದಾಗಿ ನರಕದಲ್ಲಿದ್ದರು ಅವುಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ನರಕದಲ್ಲಿದ್ದವರೆಂದರೆ, ಪತಿಯರಿಗೆ ಕೃತಘ್ನರಾದವರು.

**(ಮುಂದುವರಿಯುವುದು)**

**ಇನ್ಸಾನಿಯತ್ ಝಿಂದಾಬಾದ್**

**ಮಾನವೀಯತೆ ಚಿರಕಾಲ ಬಾಳಲಿ**

## ಈ ಕ್ಲಾಸ್‌ನ ನಂತರ ನನ್ನ ಮಗ ಜಮಾಅತ್ತಿನ ಸೇವೆಗೆ ಮುಂದಾಗುತ್ತಿದ್ದಾನೆ, ಆತನಲ್ಲಿ ಒಂದು ಹೊಸ ಚೈತನ್ಯ ತುಂಬಿದ ಭಾವನೆಯಿಂದ ಇರುತ್ತಾನೆ.

## ಹುಝೂರ್ ಅನ್ವರ್(ಅತಬಿಅ) ರವರೊಂದಿಗೆ ಮಜ್ಲಿಸ್ ಅತ್‌ಫಾಲುಲ್ ಅಹ್ಮದಿಯಾ ಕೆನಡದ ಮೊದಲ ವರ್ಚುವಲ್ ಕ್ಲಾಸ್

ಹಝ್ರತ್ ಖಲೀಫತುಲ್ ಮಸೀಹ್ ಅಲ್ ಖಾಮಿಸ್(ಅತಬಿಅ) ಅವರ ಅನುಗ್ರಹಗಳಿಂದ ಲಾಭ ಪಡೆಯಲು ಮಜ್ಲಿಸ್ ಅತ್‌ಫಾಲುಲ್ ಅಹ್ಮದಿಯಾ ಕೆನಡಾದ ಸದಸ್ಯರನ್ನು ಒಳಗೊಂಡ ತಂಡಗಳು ಕಳೆದ ಮೂರು ವರ್ಷಗಳಿಂದ ಯುನೈಟೆಡ್ ಕಿಂಗ್‌ಡಮ್‌ಗೆ ಬರುತ್ತಿದ್ದರು. ಅಲ್‌ಹಮ್ದುಲಿಲ್ಲಾಹ್

ಆದರೆ ಕಳೆದ ವರ್ಷ 2020ರಲ್ಲಿ, ಕೊವಿಡ್‌ನ ಜಾಗತಿಕ ಸಾಂಕ್ರಾಮಿಕ ರೋಗದಿಂದಾಗಿ, ಈ ಅನುಗ್ರಹದಾಯಕ ಪ್ರಯಾಣವನ್ನು ಮುಂದೂಡಬೇಕಾಯಿತು. ಈ ಕಾರಣದಿಂದಾಗಿ ಮಕ್ಕಳು (ಅತ್‌ಫಾಲ್) ತುಂಬಾ ನಿರಾಶೆಗೊಂಡಿದ್ದರು ಆದರೆ ಸರ್ವಶಕ್ತನಾದ ಅಲ್ಲಾಹನು ಹುಝೂರ್ ಅನ್ವರ್(ಅತಬಿಅ) ಅವರನ್ನು ಆನ್‌ಲೈನ್‌ನಲ್ಲಿ ಭೇಟಿಯಾಗಲು ಅನುವು ಮಾಡಿಕೊಡುವ ಮೂಲಕ ತಮ್ಮ ನಿರಾಶೆಯನ್ನು ಸಂತೋಷವಾಗಿ ಪರಿವರ್ತಿಸಿದರು.

ಶನಿವಾರ, ಆಗಸ್ಟ್ 15, 2020ರಂದು, ಕೆನಡಾದ ಎಲ್ಲೆಡೆಯಿಂದ ಅದೃಷ್ಟಶಾಲಿ ಮಕ್ಕಳು(ಅತ್‌ಫಾಲ್) ತಮ್ಮ ಇಮಾಮರ ಸೇವೆಗೆ ಹಾಜರಾಗಲು Peace Village ಗೆ ಆಗಮಿಸಲಾರಂಭಿಸಿದರು. ಅಲ್‌ಹಮ್ದುಲಿಲ್ಲಾಹ್. ಒಬ್ಬರಿಗೊಬ್ಬರು ದೂರದಲ್ಲಿ ನಿಂತಿರುವ ಈ ಮಕ್ಕಳು ತಮ್ಮ ಪ್ರೀತಿಯನ್ನು ವ್ಯಕ್ತಪಡಿಸಲು ತಮ್ಮ ಸಹೋದರರನ್ನು ಅಪ್ಪಿಕೊಳ್ಳಲು ಸಾಧ್ಯವಾಗದಿದ್ದರೂ, ಅವರು ಹುಝೂರ್ ಅನ್ವರ್ ಅವರನ್ನು ಭೇಟಿಯಾಗಲು ಬಹಳ ಕಾತುರದಿಂದ ಕಾಯುತ್ತಿದ್ದರು.

ಎಲ್ಲಾ ವ್ಯವಸ್ಥೆಗಳು ಪೂರ್ಣಗೊಂಡಿದ್ದವು. ಮಕ್ಕಳು ತಮ್ಮ ತಮ್ಮ ಸ್ಥಳಗಳಲ್ಲಿ ಕುಳಿತು ಪ್ರಾರ್ಥಿಸುತ್ತಿದ್ದರು ಮತ್ತು ಸಾಮಾಜಿಕ ಅಂತರದ ಕಾಳಜಿಯೊಂದಿಗೆ ಅಲ್ಲಾಹನಲ್ಲಿ ದುಆ ಹಾಗೂ ಇಸ್ತಿಗ್‌ಫಾರ್ ಮಾಡುತ್ತಿದ್ದರು. ಇದ್ದಕ್ಕಿದ್ದಂತೆ ಪ್ರಿಯ ಹುಝೂರ್(ಅತಬಿಅ) ರವರ ಕರುಣೆಯ ಧ್ವನಿ ನಮ್ಮ ಕಿವಿಗೆ ಬೀತ್ತು. ತಲೆ ಎತ್ತಿ ನೋಡಿದಾಗ ಹುಝೂರ್ ಅನ್ವರ್(ಅತಬಿಅ) ರವರ ಪ್ರಕಾಶಮಾನವಾದ ಮುಖ ನಮ್ಮ ಮುಂದಿನ ಟಿವಿಯ ಪರದೆ ಮೇಲೆ ಕಾಣಿಸಿತು. ಆ ಕ್ಷಣದಲ್ಲಿ, ಹುಝೂರ್ ಅನ್ವರ್ ಅವರ ಅನುಗ್ರಹದೊಂದಿಗೆ ದೇವದೂತರು ನಮ್ಮ ಮೇಲೆ ಇಳಿಯುತ್ತಿರುವಂತೆ ತೋರುತ್ತಿತ್ತು. ಮತ್ತು ಈ ದೇವದೂತರು ಎಲ್ಲಾ ವ್ಯವಸ್ಥೆಗಳನ್ನು ತಮ್ಮ ಕೈಯಲ್ಲಿ ತೆಗೆದುಕೊಂಡು ಅವುಗಳನ್ನು ಪೂರ್ಣಗೊಳಿಸಲು ಆರಂಭಿಸುತ್ತಿದ್ದಾರೆ ಎಂದು ಭಾಸವಾಗುತ್ತಿತ್ತು.

ಹುಝೂರ್ ಅನ್ವರ್(ಅತಬಿಅ) ಅವರನ್ನು ಟಿವಿಯಲ್ಲಿ ನೋಡುವುದು ಯಾವುದೇ ಅಹ್ಮದಿಗೆ ಹೊಸ ವಿಷಯವಲ್ಲ ಆದರೆ ಇಂದಿನ ಭೇಟಿಯು ಅನನ್ಯವಾಗಿತ್ತು, ಹುಝೂರ್(ಅತಬಿಅ) ರವರು ಕೆನಡಾದಲ್ಲಿ ಕುಳಿತಿರುವ ತಮ್ಮ ಖುದ್ದಾಮರನ್ನು ಟಿವಿಯ ಮುಖಾಂತರ ಮಾತನಾಡುತ್ತಾ ನೋಡುತ್ತಿದ್ದರು. ಇತಿಹಾಸದಲ್ಲಿ ಮೊದಲ ಬಾರಿಗೆ, ಖಲೀಫರು ತಮ್ಮ ಉಪಸ್ಥಿತಿಯೊಂದಿಗೆ Virtual meeting ಅನ್ನು ನಡೆಸುತ್ತಿದ್ದರು. ಈ ಸಭೆಯ ಹಲವು ಕ್ಷಣಗಳು ಸ್ಮರಣೀಯವಾಗಿವೆ. ಮಕ್ಕಳ ಮೇಲೆ ಹುಝೂರ್ ಅನ್ವರ್ ಅವರ ಕರುಣೆ ಮತ್ತು ಅವರ ಪ್ರೀತಿ ಮಕ್ಕಳ ಮೇಲೆ ಸ್ಪಷ್ಟವಾಗಿತ್ತು. ಆ ಕ್ಷಣದಲ್ಲಿ ನಾನು ಇಂದು ಅಹ್ಮದಿಯಾ ಜಮಾತ್‌ಗೆ ಸೇರಿದ್ದಕ್ಕಾಗಿ ಸರ್ವಶಕ್ತನಾದ ಅಲ್ಲಾಹನಿಗೆ ಧನ್ಯವಾದಗಳನ್ನು ಅರ್ಪಿಸಿದೆ. ಅಲ್ಹಮ್ದುಲಿಲ್ಲಾಹ್.

ಈ ಕಾರ್ಯಕ್ರಮದಲ್ಲಿ ನಾವು ನಝುಮ್ (ಕವಿತೆ) ಯನ್ನು ರದ್ದುಗೊಳಿಸಿದ್ದೆವು ಅದರ ಕಾರಣ ಹುಝೂರ್ ಅನ್ವರ್(ಅತಬಿಅ) ರವರಿಂದ ಮಕ್ಕಳಿಗೆ ಸಾಧ್ಯವಾದಷ್ಟು ಮಟ್ಟಿಗೆ ಮಾರ್ಗದರ್ಶನ ಪಡೆಯಲು ಅವಕಾಶ ಸಿಗಬಹುದು ಎಂದು ನಾವು ಭಾವಿಸಿದ್ದೆವು. ಆದರೂ ನಾವು ಓರ್ವ ಮಗುವನ್ನು ನಝುಮ್‌ಗಾಗಿ ಸಿದ್ಧಪಡಿಸಿದ್ದೆವು. ಪವಿತ್ರ ಖುರ್‌ಆನಿನ ಪಠಣ ಹಾಗೂ ಅದರ ಅನುವಾದವನ್ನು ಪ್ರಸ್ತುತಪಡಿಸಿದಾಗ, ಹುಝೂರ್ ಅನ್ವರ್(ಅತಬಿಅ) ಅವರು ನಝುಮ್‌ಗೆ ಯಾವುದೇ ವ್ಯವಸ್ಥೆ ಇಲ್ಲವೇ ಎಂದು ಕೇಳಿದರು. ಯಾರೋ ನನ್ನನ್ನು ಅಲುಗಾಡಿಸಿದಂತೆ ನನಗೆ ಅನಿಸಿತು. ನಾನು ವ್ಯವಸ್ಥೆ ಇದೆ ಎಂದು ಹುಝೂರ್ ಅನ್ವರ್‌ಗೆ ಉತ್ತರಿಸಿದೆ.

ಈ ಕ್ಲಾಸ್‌ಗೆ ಐವಾನ್-ಎ-ತಾಹಿರ್ ನಲ್ಲಿ 162 ಮತ್ತು ಬೈತ್-ಉಲ್-ಇಸ್ಲಾಂನಲ್ಲಿ 62 ಮಕ್ಕಳು ಇದ್ದರು. ಮಕ್ಕಳ ಜೊತೆಗೆ, 20 ಕಾರ್ಯಕರ್ತರು ಕ್ಲಾಸ್‌ನ ಸಮಯದಲ್ಲಿ ಈ ಎರಡು ಸ್ಥಳಗಳಲ್ಲಿ ಕರ್ತವ್ಯದಲ್ಲಿದ್ದರು.

ಸರ್ಕಾರಿ ಆಡಳಿತದಿಂದ ಹೊರಡಿಸಿದ ಎಲ್ಲಾ ಸೂಚನೆಗಳನ್ನು ಗಮನದಲ್ಲಿಟ್ಟುಕೊಂಡು, ಕ್ಲಾಸ್‌ನ ಪ್ರಾರಂಭದಲ್ಲಿ ಮಕ್ಕಳನ್ನು ತಮ್ಮ ತಮ್ಮ ಸ್ಥಳಗಳಲ್ಲಿ ಕೂರಿಸಲಾಯಿತು ಮತ್ತು ದೈಹಿಕ ಅಂತರವಿಡುವ ಸೂಚನೆಗಳನ್ನು ಪ್ರತಿ ಕ್ಷಣವೂ ನೆನಪಿಸಿ ಕೊಡಲಾಯಿತು. ಅದೇ ರೀತಿ ಕ್ಲಾಸ್‌ನ ಮುಕ್ತಾಯದಲ್ಲಿ ಸಭಾಂಗಣಗಳಿಂದ ಮಕ್ಕಳನ್ನು ಒಬ್ಬೊಬ್ಬರಾಗಿ ಹೊರಗೆ ಕಳುಹಿಸಲಾಯಿತು.

ಈ ಕ್ಲಾಸ್ ಹುಝೂರ್ ಅನ್ವರ್ ರವರ ನಗು ಮತ್ತು ಪ್ರೀತಿಯಿಂದ ತುಂಬಿ ತುಳುಕಾಡುತ್ತಿತ್ತು. ನಾವು ಹುಝೂರ್ ಅನ್ವರ್ ಅವರ ಅನುಗ್ರಹದಾಯಕ ಸಂಗತಿಯಲ್ಲಿ ಇಡೀ ಒಂದು ಗಂಟೆ ಕಾಲ ಕಳೆದಿದ್ದೆವು. ಹುಝೂರ್ ಅನ್ವರ್ ನಮಗಾಗಿ ಇಷ್ಟು ಸಮಯವನ್ನು ಅರ್ಪಿಸಿರುವುದು ಮತ್ತು ನಮ್ಮ ನಡುವೆ ಇರುವುದು ನಮಗೆ ಬಹಳ ಸಂತೋಷ ಮತ್ತು ಗೌರವದ ವಿಷಯವಾಗಿತ್ತು. ಕ್ಲಾಸಿನ ಮುಂಚೆ ಕಾಯುವಾಗ ಸಮಯವೇ ಹೋಗುತ್ತಿರಲಿಲ್ಲ. ಆದರೆ ಕ್ಲಾಸ್ ಪ್ರಾರಂಭವಾದಾಗ ಸಮಯ ಹೇಗೆ ಕಳೆದುಹೋಯಿತು ಎಂದು ತಿಳಿಯಲಿಲ್ಲ. ಮತ್ತು ಒಂದು ಗಂಟೆಯ ಸಮಯವೂ ಕ್ಷಣದಲ್ಲಿ ಹಾದುಹೋಯಿತು. ಈ ಕ್ಲಾಸ್ ಇನ್ನೂ ಸ್ವಲ್ಪ ಕಾಲ ಮುಂದುವರಿಯಲಿ ಎಂದು ಎಲ್ಲರು ಆಶಿಸುತ್ತಿದ್ದರು. ಆದರೆ ನಮಗೆ ದೊರಕಿದ ಸಮಯಕ್ಕೆ ನಾವು ಅಲ್ಲಾಹನಿಗೆ ಕೃತಜ್ಞರಾಗಿರುತ್ತೇವೆ.

ಕ್ಲಾಸ್‌ನ ಸಮಯದಲ್ಲಿ ಕುರ್‌ಆನ್ ವಚನ ಮತ್ತು ನಝುಮ್ ಪಠಿಸಿದ ನಂತರ, ಮಕ್ಕಳು ತಮ್ಮ ಪ್ರೀತಿಯ ಹುಝೂರ್(ಅತಬಿಅ) ಅವರೊಂದಿಗೆ ಪ್ರಶ್ನೆಗಳನ್ನು ಕೇಳಿದರು ಮತ್ತು ವಿವಿಧ ವಿಷಯಗಳ ಬಗ್ಗೆ ಮಾರ್ಗದರ್ಶನ ಪಡೆದರು.

ಕ್ಲಾಸ್‌ನ ನಂತರ ಮಕ್ಕಳ ಮುಖದಲ್ಲಿ ಸಂತೋಷವು ಪ್ರತಿಫಲಿಸುತ್ತಿತ್ತು. ಹುಝೂರ್ ಅನ್ವರ್ ನಮ್ಮ ನಡುವೆ ಇದ್ದಾರೆ ಎಂದು ನಾವು ಭಾವಿಸುತ್ತಿದ್ದೇವೆ ಎಂದು ಎಲ್ಲರೂ ಹೇಳುತ್ತಿದ್ದರು. ಪ್ರಪಂಚದ ಪ್ರಸ್ತುತ ಪರಿಸ್ಥಿತಿಯಿಂದಾಗಿ ಪ್ರಯಾಣದ ನಿರ್ಬಂಧಗಳನ್ನು ನೋಡಿ, ನಾವು ಹುಝೂರ್ ಅನ್ವರ್ ಅವರನ್ನು ಭೇಟಿಯಾಗುವ ಅದೃಷ್ಟ ಸಿಕ್ಕಿದ್ದಕ್ಕಾಗಿ ಸರ್ವಶಕ್ತನಾದ ಅಲ್ಲಾಹನಿಗೆ ಧನ್ಯವಾದಗಳನ್ನು ಅರ್ಪಿಸುತ್ತೇವೆ. ಖಿಲಾಫತ್ ನಂತಹ ಮಹಾನ್ ಅನುಗ್ರಹಕ್ಕಾಗಿ ನಾವು ಸರ್ವಶಕ್ತನಾದ ಅಲ್ಲಾಹನಿಗೆ ಎಷ್ಟು ಕೃತಜ್ಞತೆಗಳನ್ನು ಅರ್ಪಿಸಿದರೂ ಅದು ಕಡಿಮೆಯಾಗಿದೆ. ಖಿಲಾಫಾತ್ ನಮಗೆ ಪ್ರತಿ ಕ್ಷಣ ಮತ್ತು ಪ್ರತಿ ಹಂತದಲ್ಲೂ ಒಂದು ಗುರಾಣಿಯ ರೀತಿಯಲ್ಲಿ ನಮಗೆ ರಕ್ಷಣೆ ನೀಡುತ್ತದೆ. ಖಿಲಾಫಾತ್‌ನೊಂದಿಗೆ ಸಂಬಂಧ ಹೊಂದುವ ಮೂಲಕ ಮಾತ್ರ ನೈಜ ಜೀವನವನ್ನು ಸಾಧಿಸಲಾಗುತ್ತದೆ.

### ಭಾಗವಹಿಸುವವರ ಅಭಿಪ್ರಾಯಗಳು

ಈ ಕ್ಲಾಸ್‌ಗೆ ಹಾಜರಾದ ಮಕ್ಕಳು ವ್ಯಕ್ತಪಡಿಸಿದ ಕೆಲವು ಭಾವನೆಗಳು ಹೀಗಿವೆ:

* ನಾನು ಪ್ರಶ್ನೆಯನ್ನು ಕೇಳದಿದ್ದರೂ, ಹುಝೂರ್ ಅನ್ವರ್(ಅತಬಿಅ) ರವರ ಮುಂದೆ ನಾನು ಇರುವುದು ನನ್ನ ಕನಸ್ಸು ನನಸಾದಂತಿದೆ ಎಂದು ಸಲ್ಮಾನ್ ಕಹ್ಲೂನ್ ಹೇಳುತ್ತಾರೆ. ಅಲ್ಲಾಹನು ಹುಝೂರ್ ಅನ್ವರ್‌ಗೆ ದೀರ್ಘ ಮತ್ತು ಆರೋಗ್ಯಕರ ಜೀವನವನ್ನು ನೀಡಲಿ. ಆಮೀನ್.

* "ಹುಝೂರ್ ಅನ್ವರ್‌ರವರು ಈ ಕ್ಲಾಸ್‌ಗೆ ಸಮಯ ನೀಡಿರುವುದು ಮತ್ತು ಮಕ್ಕಳನ್ನು ಉದ್ದೇಶಿಸಿ ಮಾತನಾಡುವುದು ನಂಬಲಾಗದ ವಿಷಯವಾಗಿದೆ ಎಂದು ನಾನು ಭಾವಿಸುತ್ತೇನೆ" ಎಂದು ನಸ್ರುಲ್ಲಾ ಹೇಳಿದರು. "ಹುಝೂರ್ ಅನ್ವರ್ ನಮ್ಮ ನಡುವೆ ಇಲ್ಲದಿದ್ದರೂ, ನಾನು ಕಾಲಘಟ್ಟದ ಇಮಾಮ್‌ರ ಮುಂದೆ ಇದ್ದೇನೆ ಎಂದು ನನಗೆ ಇನ್ನೂ ಅನಿಸುತ್ತಿತ್ತು. ನಾನು ಹುಝೂರ್ ಅನ್ವರ್‌ಗೆ ಒಂದು ಪ್ರಶ್ನೆಯನ್ನು ಕೇಳಲು ಅವಕಾಶ ಪಡೆದಿದ್ದಕ್ಕೆ ನಾನು ಅದೃಷ್ಟಶಾಲಿಯಾಗಿದ್ದೇನೆ. ನನಗೆ ತುಂಬಾ ಸಂತೋಷವಾಯಿತು ಮತ್ತು ಹುಝೂರ್ ಅನ್ವರ್ ಅವರೊಂದಿಗೆ ಮಾತನಾಡುವ ಅವಕಾಶ ಸಿಕ್ಕಿದ್ದು ನನ್ನ ಅದೃಷ್ಟ ಎಂದು ನಾನು ಭಾವಿಸುತ್ತೇನೆ.

* "ನಾನು ಈ ಐತಿಹಾಸಿಕ ಕ್ಲಾಸ್‌ನಲ್ಲಿ ಭಾಗವಹಿಸಿರುವುದು ನನ್ನ ಅದೃಷ್ಟ ಎಂದು ನಾನು ಭಾವಿಸುತ್ತೇನೆ" ಎಂದು ನೂರ್ ಗಾಲಿಬ್ ಅಹ್ಮದ್ ಹೇಳಿದರು. ನಾನು ಹುಝೂರ್ ಅನ್ವರ್ ಅವರನ್ನು ನೋಡಿದಾಗ, ನನ್ನ ಕಣ್ಣುಗಳು ಬೆಳಗಿದವು (ಹುಝೂರ್ ಅನ್ವರ್‌ರವರ ಪ್ರಕಾಶದಿಂದ) ನಾನು ಹುಝೂರ್ ಅನ್ವರ್ ಅವರನ್ನು ಅಪ್ಪಿಕೊಳ್ಳಬೇಕು ಎಂದು ಬಯಸಿದೆ ಆದರೆ ಈ ಸಾಂಕ್ರಮಿಕ ರೋಗದ ಕಾರಣ ಅದು ಸಾಧ್ಯವಾಗಲಿಲ್ಲ. ನಾನು ಅಂತಿಮವಾಗಿ ಹುಝೂರ್ ಅನ್ವರ್ ಅವರನ್ನು ನನ್ನ ಓಪನ್ ಹಾರ್ಟ್ ಸರ್ಜರಿಗಾಗಿ ಪ್ರಾರ್ಥಿಸಲು ಹೇಳಲು ಬಯಸಿದ್ದೆ ಆದರೆ ಸಮಯ ಮೀರಿತ್ತು

ಮತ್ತು ನನಗೆ ಅದನ್ನು ಹೇಳಲು ಸಾಧ್ಯವಾಗಲಿಲ್ಲ.

* ಈ ಕ್ಲಾಸ್‌ನಲ್ಲಿ ಭಾಗವಹಿಸಲು ಅವಕಾಶವನ್ನು ಪಡೆದ ಅದೃಷ್ಟಶಾಲಿ ಮಗು ನಾನಾಗಿದ್ದೇನೆ ಎಂದು ಅತಾಉಲ್ ಹೈ ಹೇಳುತ್ತಾರೆ. ದಯವಿಟ್ಟು ಇಂತಹ ಇನ್ನಷ್ಟು ಕಾರ್ಯಕ್ರಮಗಳನ್ನು ರಚಿಸಿರಿ.

* ಸಫೀರ್ ಅಹ್ಮದ್ ಅಲಿ ಮಿರ್ಜಾ ತಮ್ಮ ಭಾವನೆಗಳನ್ನು ಈ ಕೆಳಗಿನಂತೆ ವ್ಯಕ್ತಪಡಿಸಿದ್ದಾರೆ: ಅಲ್ಹಮ್ದುಲಿಲ್ಲಾಹ್, ನನ್ನ ಕನಸುಗಳಲ್ಲಿ ಒಂದು ಕನಸ್ಸು ನನಸಾದ ಹಾಗಾಗಿದೆ. ನಾನು ಯಾವಾಗಲೂ ಹುಝೂರ್ ಅನ್ವರ್ ಅವರೊಂದಿಗೆ ಈ ತರಗತಿಗಳಿಗೆ ಸೇರಲು ಬಯಸುತ್ತಿದ್ದೆ. ಹುಝೂರ್ ಅನ್ವರ್‌ರವರ ಸಮ್ಮುಖದಲ್ಲಿ ಒಂದು ಕವಿತೆಯನ್ನು ಓದುವ ಅದೃಷ್ಟವನ್ನು ನಾನಗೆ ಸಿಕ್ಕಿದೆ ಎಂದು ಎಂದು ನನಗೆ ಇನ್ನೂ ನಂಬಲು ಸಾಧ್ಯವಾಗುತ್ತಿಲ್ಲ. ಇದನ್ನು ಸಾಧ್ಯವಾಗಿಸಿದ ವ್ಯವಸ್ಥಾಪಕರು, ಸ್ವಯಂಸೇವಕರು ಮತ್ತು ಎಂ.ಟಿ.ಎ ತಂಡವನ್ನು ಅಲ್ಲಾಹನು ಅನುಗ್ರಹಿಸಲಿ. **ಜಝಾಕುಮುಲ್ಲಾಹ್**

ಅದೇ ರೀತಿ ಪೋಷಕರಿಂದ ಕೆಲವು ಸಲಹೆಗಳು ಇಲ್ಲಿವೆ:

* "ಸರ್ವಶಕ್ತನಾದ ಅಲ್ಲಾಹನ ಅನುಗ್ರಹದಿಂದ ಈ ಐತಿಹಾಸಿಕ ಕಾರ್ಯಕ್ರಮಕ್ಕೆ ಸೇರಲು ನನ್ನ ಮಗನಿಗೆ ಅವಕಾಶ ಸಿಕ್ಕಿದ್ದಕ್ಕೆ ನನಗೆ ತುಂಬಾ ಸಂತೋಷವಾಗಿದೆ" ಎಂದು ಫೆಹ್ಮಿಡಾ ಮುಜಾಫರ್ ಹೇಳುತ್ತಾರೆ. ಈ ಕಾರ್ಯಕ್ರಮವನ್ನು ಯಶಸ್ವಿಗೊಳಿಸುವಲ್ಲಿ ಆದ ಆಯೋಜಕರ ಶ್ರಮಕ್ಕೆ ನಾನು ಧನ್ಯವಾದಗಳನ್ನು ಅರ್ಪಿಸುತ್ತೇನೆ. **ಫಜಝಾಹುಮುಲ್ಲಾಹು ಅಹ್ಸನಲ್ ಜಝಾ**

* ಮುಕರ್ರಮ್ ಇಜಾಝ್ ಖಾನ್ ಸಾಹಿಬ್ ಮತ್ತು ಅಮತುಲ್-ಖುದ್ದುಸ್ ಸಾಹಿಬ್ ಹೇಳುವಂತೆ ನಮ್ಮ ಒಂದು ಕನಸು ನನಸಾದಂತೆ ಭಾಸವಾಗುತ್ತಿದೆ. ನಮ್ಮ ಪುತ್ರ ಈ ವರ್ಷ ಯು.ಕೆ ಪ್ರವಾಸಕ್ಕೆ ಹೋಗಲು ಸಾಧ್ಯವಾಗಲಿಲ್ಲ ಆದರೆ ಈ ಕ್ಲಾಸಿನಿಂದಾಗಿ ಹುಝೂರ್ ಅನ್ವರ್ ಅವರ ಸಮ್ಮುಖ ಹಾಜರಾಗಲು ಮತ್ತು ಹುಝೂರ್ ಅನ್ವರ್ ಜೊತೆ ಮಾತನಾಡಲು ಅವರಿಗೆ ಅವಕಾಶ ಸಿಕ್ಕಿತು. **ಅಲ್‌ಹಮ್ದುಲಿಲ್ಲಾಹ್**

* ನನ್ನ ಮಗ ಈ ತರಗತಿಗೆ ಸೇರುವ ಸೌಭಾಗ್ಯ ಹೊಂದಿದ್ದಕ್ಕಾಗಿ ನಾನು ಸರ್ವಶಕ್ತನಾದ ಅಲ್ಲಾಹನಿಗೆ ಕೃತಜ್ಞನಾಗಿದ್ದೇನೆ ಎಂದು ಸನಾ ಅಹ್ಮದ್ ಸಾಹಿಬರವರು ಹೇಳಿದ್ದಾರೆ. ನಾನು ತುಂಬಾ ಸಂತೋಷದಿಂದಿದ್ದೇನೆ ಮತ್ತು ಭಾವನೆಗಳಿಂದ ತುಂಬಿದ್ದೇನೆ. ಈ ಸಾಂಕ್ರಾಮಿಕ ರೋಗವು ಬೇಗನೆ ಕೊನೆಗೊಳ್ಳಲಿ ಮತ್ತು ಮಕ್ಕಳು ಸ್ವತಃ ಹುಝೂರ್ ಅನ್ವರ್(ಅತಬಿಸ) ಅವರ ಸೇವೆಗೆ ಸೇರಲು ಮತ್ತು ಆ ಅನುಗ್ರಹದಿಂದ ಲಾಭ ಪಡೆಯಲು ಅವಕಾಶ ಸಿಗಲಿ ಎಂದು ನಾನು ಪ್ರಾರ್ಥಿಸುತ್ತೇನೆ. ಆಮೀನ್. ಜಝಾಕುಮುಲ್ಲಾಹ್

* ಅತಾ ಅಲ್-ಖುದುಸ್ ಸಾಹಿಬ್ ಈ ತರಗತಿಯ ನಂತರ, ನನ್ನ ಮಗ ಜಮಾಅತ್ತಿನ ಸೇವೆಗೆ ಮುಂದಾಗುತ್ತಿದ್ದಾನೆ ಎಂದು ಹೇಳಿದರು. ಆತನಲ್ಲಿ ಒಂದು ಹೊಸ ಚೈತನ್ಯ ಬಂದಂತೆ ಆತ ಭಾವನೆಯಿಂದ ತುಂಬಿರುತ್ತಾನೆ.

* ಅಮತುಲ್ ಅಝೀಝ್ ಹಿನಾ ಮಿರ್ಜಾ ಹೇಳುತ್ತಾರೆ: "ಅಲ್ಹಮ್ದುಲಿಲ್ಲಾಹ್, ನಾವು ಸರ್ವಶಕ್ತನಾದ ಅಲ್ಲಾಹನಿಗೆ ತುಂಬಾ ಕೃತಜ್ಞರಾಗಿದ್ದೇವೆ, ನಾವು ಬಹಳ ಸಂತೋಷವಾಗಿದ್ದೇವೆ ಮತ್ತು ನನ್ನ ಮಗು ಈ ಅನನ್ಯವಾದ ಕಾರ್ಯಕ್ರಮಕ್ಕೆ ಭಾಗವಹಿಸಿದ್ದರಿಂದ ಈಗಲೂ ನಾವು ಆ ಅನುಗ್ರಹಗಳನ್ನು ಅನುಭವಿಸುತ್ತಿದ್ದೇವೆ.

ಮಜ್ಲಿಸ್ ಅತ್ಫಾಲ್ ಉಲ್ ಅಹ್ಮದಿಯಾ ಮತ್ತು ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಸದಸ್ಯರು ಈ ಕ್ಲಾಸ್‌ನ ವ್ಯವಸ್ಥೆಗಾಗಿ ಕಾರ್ಯ ನಿರ್ವಹಿಸುತ್ತಿರುವ ರಾಷ್ಟ್ರೀಯ ಸಿಬ್ಬಂದಿಗಳು ಹಾಗೂ ಸ್ವಯಂಸೇವಕರಿಂದ ಪ್ರತಿಕ್ರಿಯೆ ಪಡೆಯಲಾಯಿತು ಅವೂ ಹೀಗಿವೆ:

* ನಾನು ಈ ಕ್ಲಾಸಿನಲ್ಲಿ ಭಾಗವಹಿಸಲು ಸಾಧ್ಯವಾಗಿರುವುದು ನನಗೆ ಹೆಮ್ಮೆಯ ವಿಷಯವಾಗಿದೆ ಎಂದು ನಾಸರ್ ಸಿದ್ದಿಕಿ ಹೇಳಿದರು. ಹುಝೂರ್ ಅನ್ವರ್ ಮಕ್ಕಳೊಂದಿಗೆ ಮಾತನಾಡುತ್ತಿರುವುದನ್ನು ನೋಡಿ ನನಗೆ ಸಂತೋಷವಾಯಿತು.

* ನಾವು ಇಂತಹ ಅವಕಾಶಗಳನ್ನು ಇನ್ನು ಹೆಚ್ಚಾಗಿ ಪಡೆಯಲು ಬಯಸುತ್ತೇವೆ ಎಂದು ಸನ್ಮಾನ್ಯ ನವೀದ್-ಉಲ್-ಇಸ್ಲಾಂ ಹೇಳುತ್ತಾರೆ.

* ಸನ್ಮಾನ್ಯ ಫಹದ್ ಚತಾ ಸಾಹಿಬ್ ಹೇಳುತ್ತಾರೆ: ಅಲ್ಹಮ್ದುಲಿಲ್ಲಾಹ್, ನಮಗೆ ಇದು ಇಡೀ ವರ್ಷದ ಮಹತ್ವದ ಸಂದರ್ಭವಾಗಿದೆ. ಹುಝೂರ್ ಅನ್ವರ್ ನಮಗೆ ಒಂದು ಇಡೀ ಗಂಟೆಯನ್ನು ನಿಗದಿಪಡಿಸಿದರು ಮತ್ತು ನಮಗೆ ಅತ್ಯಂತ ಮುಖ್ಯವಾದ ಸೂಚನೆಗಳೊಂದಿಗೆ ಅನುಗ್ರಹಿಸಿದರು.

* ಸನ್ಮಾನ್ಯ ರೂಮಿ ಸಾಹಿ ಸಾಹಿಬ್, ಅಲ್ಹಮ್ದುಲಿಲ್ಲಾಹ್ ನಾನು ಖುದ್ದಾಮುಲ್ ಅಹ್ಮದಿಯಾದ ರಾಷ್ಟ್ರೀಯ ಕಾರ್ಯಕರ್ತನಾಗಿದ್ದೇನೆ. ಮತ್ತು ನಾನು ಈ ಕ್ಲಾಸಿನಲ್ಲಿ ಭಾಗವಹಿಸಿರುವುದು ನನಗೆ ದೊಡ್ಡ ಅನುಗ್ರಹವಾಗಿತ್ತು. ಹುಝೂರ್ ಅನ್ವರ್ ನಮ್ಮ ಮುಂದೆ ಇದ್ದ ಹಾಗೆ ಭಾಸವಾಗುತ್ತಿತ್ತು. ಇದು ನಮಗೆ ಆಧ್ಯಾತ್ಮಿಕ ಬೆಳವಣಿಗೆಯ ಮೂಲವಾಗಿದೆ. ಈ ಕ್ಲಾಸಿನಲ್ಲಿ ಭಾಗಿಯಾಗಿರುವುದಕ್ಕೆ ನಾನು ತುಂಬಾ ಕೃತಜ್ಞನಾಗಿದ್ದೇನೆ.

* ಹುಝೂರ್ ಅನ್ವರ್(ಅತಬಿಅ) ಜೊತೆ ಕ್ಲಾಸಿನಲ್ಲಿ ಭಾಗಿಯಾಗಿರುವುದಕ್ಕೆ ನನಗೆ ತುಂಬಾ ಸಂತೋಷವಾಗಿದೆ ಎಂದು ತೌಸೀಫ್ ರಿಹಾನ್ ಸಾಹಿಬ್ ಹೇಳಿದರು. ಹುಝೂರ್ ಅನ್ವರ್ ಮಕ್ಕಳೊಂದಿಗೆ ಬಹಳ ಕರುಣೆಯಿಂದ ವರ್ತಿಸಿದರು. ಹುಝೂರ್ ಅನ್ವರ್ ಅವರ ಒಡನಾಟ ನಮ್ಮ ಆಧ್ಯಾತ್ಮಿಕತೆಯ ಬೆಳವಣಿಗೆಗೆ ಕಾರಣವಾಗಿದೆ. ಹುಝೂರ್ ಅನ್ವರ ಸೂಚನೆಗಳನ್ನು ಅನುಸರಿಸಲು ಅಲ್ಲಾಹನು ನಮಗೆ ಸಹಾಯ ಮಾಡಲಿ. ಆಮೀನ್

* ಸನ್ಮಾನ್ಯ ಇಫ್ತಿಕಾರ್ ಅಹ್ಮದ್ ಸಾಹಿಬ್ ಅವರು ಕ್ಲಾಸಿನ ವಾತಾವರಣವು ನಾವು ಸ್ವತಃ ಹುಝೂರ್ ಅನ್ವರ್ ಅವರ ಸೇವೆಯಲ್ಲಿ ನೇರವಾಗಿ ಹಾಜರಿವಂತಾಗಿತ್ತು ಎಂದು ಹೇಳಿದರು. ಯು.ಕೆಗೆ ಸಂಬಂಧಿಸಿದ ಎಲ್ಲಾ ಭಾವನೆಗಳು ಮತ್ತೆ ಮರಳಿ ಬರುತ್ತಿವೆ.

**(ವರದಿ: ಜುಬೈರ್ ಅಫ್ಜಲ್, ಅಧ್ಯಕ್ಷ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾ ಕೆನಡಾ)**

**(ಅಖ್ಬಾರ್ ಅಲ್-ಫಝಲ್ ಇಂಟರ್ನ್ಯಾಷನಲ್ 21 ಆಗಸ್ಟ್ 2020 ಕೃಪೆ)**

---

*(ಪುಟ ಸಂಖ್ಯೆ 1ರ ಉಳಿದ ಭಾಗ)*

ಊಟೋಪಚಾರದಿಂದಾಗಿ ತನ್ನ ವ್ಯವಹಾರ ಮತ್ತು ಕಾರ್ಖಾನೆಗಳ ಕಾರಣ ಸಂಬಂಧಿತ ಆಕಾಂಕ್ಷೆಗಳಿಂದಾಗಿ ಮುಸಲ್ಮಾನನಾಗುವುದಿಲ್ಲ ಅದರಲ್ಲಿ ಮೊದಲ ವಚನದ ಸಮಸ್ಯೆಗನುಗುಣವಾಗಿ ಉತ್ತರ ನೀಡಲಾಗಿದೆ. ಅಂದರೆ ಅವರ ಬಯಕೆ ನಾವು ಮುಸಲ್ಮಾನನಾಗುತ್ತಿದ್ದರೆ ಎಷ್ಟು ಚೆನ್ನಾಗಿರುತ್ತಿತ್ತು ಎಂದು, ಆದರೆ ಏಕೆ ಆಗುವುದಿಲ್ಲ? ಅವರ ಅತಿಯಾದ ಐಶ್ವರ್ಯವಂತಿಕೆ, ಲೋಭೆ ಮತ್ತು ಮಧ್ಯಸೇವನೆ ಅವರ ಮಾರ್ಗದಲ್ಲಿ ತೊಡಕಾಗಿವೆ.

ಈ ವಚನದಿಂದ ಪಾಠ ಕಲಿಯುವುದೇನೆಂದರೆ ಸತ್ಯವನ್ನು ಸ್ವೀಕರಿಸಲು ಊಟೋಪಚಾರದಲ್ಲಿ ಸರಳತೆ, ಲೌಕಿಕ ವ್ಯಾಮೋಹದಿಂದ ದೂರವಿರುವುದು ಮತ್ತು ಅಮಲ ಪದಾರ್ಥಗಳಿಂದ (ಮಧ್ಯ ಸೇವನೆ) ದೂರವಿರುವುದು ಅವಶ್ಯವಾಗಿರುತ್ತದೆ.

ಯಾರಾದರೂ ಈ ಮೂರು ವಿಚಾರಗಳಿಂದ ದೂರವಿರಬಯಸುವುದಿಲ್ಲ ಎಂದಾದರೆ ಅವನು ಸತ್ಯಶೋಧಿಸುವುದು ವ್ಯರ್ಥವಾಗಿದೆ. ಅವನಿಗೆ ಸತ್ಯ ಎಂದು ತಿಳಿದು ಬಂದರೂ ಸಹ ಸತ್ಯ ಸ್ವೀಕಾರದಿಂದ ವಂಚಿತನಾಗಿರುವನು. ಈ ವಚನದಿಂದ ಇನ್ನೊಂದು ಸಂಕೇತ ದೊರೆಯುವುದೇನೆಂದರೆ ಅವಿಶ್ವಾಸಿಗಳಾದ ಜನರು ತಮ್ಮ ಪ್ರಭಾವ ತೋರಿಸಲು ತನ್ನ ಊಟದ ವ್ಯವಸ್ಥೆಯನ್ನು ವಿಸ್ತರಿಸುತ್ತಾರೆ. ಸಂಪತ್ತುಗಳಿಸಲು ಮತ್ತು ಮುಹಮ್ಮದ್ ರಸೂಲುಲ್ಲಾಹ್(ಸ) ರವರ ಮೇಲೆ ವಿಜಯ ಸಾಧಿಸಲು ದೀರ್ಘಾಲೋಚನೆಯನ್ನು ಹೊಂದಿರುತ್ತಾರೆ. ಆದರೆ ಮುಹಮ್ಮದ್ ರಸೂಲುಲ್ಲಾಹ್(ಸ) ಇವೆಲ್ಲಾ ಮಾತುಗಳಿಂದ ದೂರವಾಗಿದ್ದರು. ಅದಾಗ್ಯೂ ಅಲ್ಲಾಹನು ಹೇಳುವನು. ಮುಹಮ್ಮದ್ ರಸೂಲುಲ್ಲಾಹ್(ಸ) ಅವರೇ ವಿಜಯ ಸಾಧಿಸುವರು. ಅವಿಶ್ವಾಸದಿಂದ ಹೃದಯಗಳಲ್ಲಿ ಅವರ ವಿಜಯ ನೋಡಿ ಅವರಲ್ಲಿ ಆಶಾಭಾವನೆ ಮೂಡುವುದು.

ಈ ವಚನದಿಂದ ಇನ್ನೊಂದು ಸಂಕೇತ ದೊರೆಯುವುದೇನೆಂದರೆ **ಲೌ ಕಾನು ಮುಸ್ಲಿಮೀನ್,** ಅವಿಶ್ವಾಸಿಗರ ತಾತ್ಕಾಲಿಕ ಭಾವನೆ ಆಗಿರುತ್ತದೆ. ವಾಸ್ತವದಲ್ಲಿ ಅವರು ಊಟೋಪಚಾರದಲ್ಲಿ ಸಂಪತ್ತು ಗಳಿಸುವುದರಲ್ಲಿ ತೊಡಗಿರುತ್ತಾರೆ. ತಾತ್ಕಾಲಿಕ ಭಾವನೆಗಳು ಮನುಷ್ಯನಿಗೆ ಎಂದು ಫಲ ನೀಡುವುದಿಲ್ಲ. ಬದಲು ಸ್ಥಿರವಾದ ಭಾವನೆಗಳು ಫಲದಾಯಕವಾಗುವುದು. ಮುಸಲ್ಮಾನ ಸ್ಥಿರವಾದ ಭಾವನೆಗಳೆಂದರೆ ಮುಸಲ್ಮಾನನಾಗಿರುವುದು ಆಗಿರುತ್ತದೆ. ಆದುದರಿಂದ ಅವರು ತಾತ್ಕಾಲಿಕವಾಗಿ ಊಟೋಪಚಾರ ಮಾಡುತ್ತಾರೆ. ಸಂಪತ್ತು ಗಳಿಸುತ್ತಾರೆ. ಅಂದ ಹಾಗೆ ಇವೆಲ್ಲಾ ಕಾರ್ಯಗಳಿಂದಲೂ ಅವರು ಮಾರ್ಗ ಪಡೆಯುವವರಾಗಿರುತ್ತಾರೆ. ಆದರೆ ಅವಿಶ್ವಾಸಿಗಳು ಮಾರ್ಗದರ್ಶನ ಪಡೆಯುವುದಿಲ್ಲ.

**(ತಫ್ಸೀರ್ ಕಬೀರ್ ಸಂಪುಟ-3, ಪುಟ-7 ಮುದ್ರಣ 2010 ಖಾದಿಯಾನ್)**

---

*(ಪುಟ ಸಂಖ್ಯೆ 01ರ ಉಳಿದ ಭಾಗ)*

ಹೊಂದಿರಿ. ಅಲ್ಲಾಹನಲಿ ಅದ್ಭುತಕರ ಶಕ್ತಿ ಸಾಮರ್ಥ್ಯಗಳಿವೆ ಮತ್ತು ಅವನಲ್ಲಿ ಅಪರಿಮಿತ ಅನುಗ್ರಹಳಗಳಿವೆ. ಆದರೆ ಅವುಗಳನ್ನು ಪಡೆಯಲು ಆ ಸೃಷ್ಟಿಯನ್ನು ಸೃಷ್ಟಿಸಿಕೊಳ್ಳಿ. ಪ್ರೀತಿಯನ್ನು ಜನ್ಮ ನೀಡಿ, ನಿಜವಾದ ಪ್ರೀತಿಯಿದ್ದರೆ ಅಲ್ಲಾಹನು ಬಹಳಷ್ಟು ನಿಮ್ಮ ಪ್ರಾರ್ಥನೆಗಳನ್ನು ಆಲಿಸುವವನಾಗಿದ್ದಾನೆ ಮತ್ತು ನಿಮ್ಮನ್ನು ಪುಷ್ಟಿ ನೀಡುವವನಾಗಿದ್ದಾನೆ. ಆದರೆ ಅವನೊಂದಿಗೆ ಪ್ರೀತಿ ಮತ್ತು ನಿಷ್ಠೆ ಅವಶ್ಯವಾಗಿದೆ.

**(ಮಲ್ಫೂಝಾತ್ ಸಂಪುಟ-1, ಪುಟ-330 ಮುದ್ರಣ 2018 ಖಾದಿಯಾನ್)**

*(ಪುಟ ಸಂಖ್ಯೆ 02ರ ಉಳಿದ ಭಾಗ)*

ಫಲಸ್ವರೂಪಿ ಮಗ ಎಲ್ಲಿ ಹೋದನು. ಅದರ ಒಳಗೇ ಕರಗಿ ಹೋದನೇ. ಅಥವಾ ರುಜ್‌ಅತೆ ಖಹ್‌ಖರಿ (ಸಂಭೋಗದಿಂದ ಪಲಾಯನ) ಆಗಿ ವಿರ್ಯವಾಯಿತೆ. ಇದರ ಹೊರತಾಗಿಯೂ ಏನಾದರೂ ಅಪಮಾನವಿದೆಯೇ, ಅವನು ಹೇಳಿದ್ದೆಲ್ಲ ಪೂರ್ಣವಾಗಲಿಲ್ಲ ಮತ್ತು ಏನೆಲ್ಲಾ ನಾನು ಅಲ್ಲಾಹನಿಂದ ದಿವ್ಯ ವಾಣಿ ಪಡೆದು ಹೇಳಿದ್ದೆನು. ಅಲ್ಲಾಹನು ಪೂರ್ಣಗೊಳಿಸಿದ್ದಾನೆ. ಅಂದ ಹಾಗೆ ಝಿಯಾಉಲ್-ಹಖ್ (ಗ್ರಂಥ) ದಲ್ಲೂ ಅದೇ ಮಗುವಿನ ಕುರಿತು ವಿವರಣೆ ನೀಡಲಾಗಿದೆ.

7) ಮುಬಾಹಲ ನಂತರ ನನ್ನ ಗೌರವಕ್ಕೆ ಕಾರಣವಾದ ಏಳನೆಯ ವಿಷಯವೆಂದರೆ, ಅಲ್ಲಾಹನ ಸಜ್ಜನ ದಾಸರು ನನ್ನ ಬಗ್ಗೆ ತೋರಿದ ನಿಷ್ಠೆ ಆಗಿದೆ, ಅದನ್ನು ಅವರು ನನ್ನ ಸೇವೆಯ ಮೂಲಕ ತೋರ್ಪಡಿಸಿದ್ದಾರೆ. ಅಲ್ಲಾಹನು ಈ ಉಪಕಾರಗಳ ಕೃತಜ್ಞತೆ ಸಲ್ಲಿಸಲು ಎಂದೂ ಸಾಧ್ಯವಾಗಲಿಕ್ಕಿಲ್ಲ. ದೈಹಿಕವಾಗಿಯೂ, ಆಧ್ಯಾತ್ಮಿಕವಾಗಿಯೂ ಮುಬಾಹಲ ನಂತರ ನನಗೆ ದಯಪಾಲಿಸಲಾಗಿದೆ. ಆಧ್ಯಾತ್ಮಿಕ ಅನುಗ್ರಹಗಳ ಬಗ್ಗೆ ನಾನು ಬರೆದಾಗಿದೆ. ಅಂದರೆ ಅಲ್ಲಾಹನು ನನಗೆ ಯಾವ ರೀತಿಯ ಖುರ್‌ಆನ್ ಜ್ಞಾನ ಮತ್ತು ಭಾಷಾಜ್ಞಾನದ ಪವಾಡ ದಯಪಾಲಿಸಿದ್ದಾನೆ. ಅದರ ಮುಂದೆ ಕೇವಲ ಅಬ್ದುಲ್ ಹಖ್ ಅಲ್ಲ ಬದಲು ಎಲ್ಲಾ ವಿರೋಧಿಗಳು ಪರಾಜಿತರಾಗಿದ್ದಾರೆ. ಎಲ್ಲಾ ಜನಸಾಮಾನ್ಯರಿಗೆ ದೃಢವಾಗಿದೆ.

ಈ ಜನರು ಕೇವಲ ನಾಮಧಾರಿ ಮೌಲ್ವಿಗಳಾಗಿದ್ದಾರೆ ಅಂದರೆ ಅವರುಗಳು ಸತ್ತು ಹೋದಂತೆಯೇ ಸರಿ. ಅಬ್ದುಲ್ ಹಖ್ಖಿನ ಮುಬಾಹಲದ ಅಪಶಕುನವು ಅವರ ಮಿತ್ರರನ್ನೂ ಮುಳುಗಿಸಿದೆ.

ಅಂತೆಯೇ ದೈವಿಕ ಅನುಗ್ರಹಗಳು ಮುಬಾಹಲದ ನಂತರ ಆದದ್ದು. ಅದು ಸಾಂಪತ್ತಿಕ ವಿಜಯವಾಗಿದೆ. ಈ ಸಾಧು ಮನುಷ್ಯನಿಗಾಗಿ ಅಲ್ಲಾಹನು ಬಾಗಿಲುಗಳನ್ನು ತೆರೆದಿದ್ದಾನೆ. ಮುಬಾಹಲ ದಿನದಿಂದ ಇಲ್ಲಿಯವರೆಗೆ ಸುಮಾರು 15 ಸಾವಿರ ಅಪ್ರತ್ಯಕ್ಷ ರೂಪದಲ್ಲಿ ಬಂದಿದೆ. ಅದು ಈ ಸಂಘಟನೆಯ ಕಾರ್ಯಗಳಲ್ಲಿ ಖರ್ಚಾಗಿವೆ. ಯಾರಿಗಾದರೂ ಸಂಶಯವಿದ್ದರೆ ಅಂಚೆ ಕಚೇರಿಯ ಖಾತೆಯನ್ನು ನೋಡಿ ದೃಢೀಕರಿಸಿಕೊಳ್ಳಲಿ. ಇನ್ನಿತರ ದೃಢೀಕರಣ ನಮ್ಮಿಂದ ಪಡೆಯಲಿ, ಜನರ ಆಗಮನ ಎಷ್ಟೊಂದು ಹೆಚ್ಚಳಗೊಂಡಿದೆ ಎಂದರೆ ಮೊದಲು ತಿಂಗಳಿಗೆ 60, 70 ರೂಪಾಯಿಗಳ ಖರ್ಚು ಬರುತಿತ್ತು. ಇದೀಗ ಸರಾಸರಿ ಒಮ್ಮೆ ಐದು ನೂರು ಆದರೆ ಒಮ್ಮೆ ಆರು ನೂರು ತಿಂಗಳವಾದರೂ ಖರ್ಚು ಹೆಚ್ಚಾಗಿದೆ. ಅಂತಹ ನಿಷ್ಠಾವಂತ ಮತ್ತು ತ್ಯಾಗಪುರುಷರನ್ನು ಅಲ್ಲಾಹನು ದಯಪಾಲಿಸಿದ್ದಾನೆ. ಅವರು ಈ ಮಾರ್ಗದಲ್ಲಿ ಖರ್ಚು ಮಾಡುವುದು ತಮ್ಮ ಸೌಭಾಗ್ಯ ಎಂದು ಭಾವಿಸುತ್ತಾರೆ.

ಹುರ್ಝೂರ್(ಅ) ಈ ಪೈಕಿ ಹಾಜಿ ಸೇಠ್ ಅಬ್ದುಲ್ ರಹ್ಮಾನ್ ಅಲ್ಲಾಹ್ ಶಿಖಾ ಸಾಹಿಬ್ ಮದರಾಸಿನ ವ್ಯಾಪಾರಿ ಅವರ ಅಸಂಖ್ಯಾತ ಸಾಂಪತ್ತಿಕ ತ್ಯಾಗಗಳ ಬಗ್ಗೆ ತುಂಬ ಪ್ರೀತಿಯಿಂದ ವಿವರಣೆ ನೀಡಿದ್ದಾರೆ ಮತ್ತು ಹೀಗೂ ಹೇಳಿದರು. ಆಥಮನು ಆಣೆ ವಹಿಸಿದ ಸಮಯ ಹಾಗೆ ಸೇಠ ಅಬ್ದುಲ್ ರಹ್ಮಾನ್ ಸಾಹಿಬ್, ಆಥಮನು ಆಣೆ ವಹಿಸಿದ ಹಣ ಕೇಳಿದರೆ ಅವನ ಬಳಿ ಹತ್ತು ಸಾವಿರ ರೂಪಾಯಿಗಳಿಗೆ ಜಮಾ ಮಾಡಲು ಸಿದ್ಧರಾಗಿದ್ದರು. ಹುರ್ಝೂರ್(ಅ) ಈ ಸಂದರ್ಭದಲ್ಲಿ ಹಲವು ತ್ಯಾಗಿಗಳ ಹಾಗೂ ನಿಷ್ಠಾವಂತರ ಸ್ಮರಣೆ ತುಂಬಾ ಆದರ ಪ್ರೀತಿಯಿಂದ ಮಾಡಿದರು. ದಿಟವಾಗಿಯೂ ಈ ಜನರು ಲೋಕವಿರುವವರೆಗೂ ಅವಿಸ್ಮರಣೆಯರಾಗಿದ್ದಾರೆ.

8) ಮುಬಾಹಲ ನಂತರ ಎಂಟನೆ ವಿಷಯ ನನ್ನ ಗೌರವಕ್ಕೆ ಕಾರಣವಾದದ್ದು ಸತ್‌ಬಚನ್ ಗ್ರಂಥ ರಚನೆಯಾಗಿದೆ, ಈ ಗ್ರಂಥ ರಚನೆಯ ಸಮಯ ಅಲ್ಲಾಹನು ನನಗೆ ಮೂರು ನೂರು ವರ್ಷದವರೆಗೆ ಯಾರೂ ದೋಚದಂತಹ ವಿಷಯ ಸಾಮಗ್ರಿಗಳನ್ನು ಒದಗಿಸಿಕೊಟ್ಟನು. ಹದಿನಾರು ಲಕ್ಷ ಸಿಖ್ ಸಾಹಿಬರು ಪ್ರಭಾವಿತಗೊಳ್ಳುವ ರೀತಿಯಲ್ಲಿ ಈ ಗ್ರಂಥ ಬರೆಯಲಾಗಿದೆ. ನಾನು ಈ ಗ್ರಂಥದಲ್ಲಿ ಬಾಬಾ ನಾನಕ್ ಸಾಹಿಬರ ಬಗ್ಗೆ ಸಾಬೀತುಗೊಳಿಸಿರುತ್ತೇನೆ. ಬಾಬಾ ಸಾಹಿಬ್ ವಾಸ್ತವದಲ್ಲಿ ಮುಸಲ್ಮಾನರಾಗಿದ್ದರು. ಮತ್ತು 'ಲಾ ಇಲಾಹ ಇಲ್ಲಲ್ಲಾಹ್ ಮುಹಮ್ಮದುರ್ ರಸೂಲುಲ್ಲಾಹ್" ಅವರ ಚಿಂತನೆಯಾಗಿತ್ತು. ಅವರು ತುಂಬಾ ಸಜ್ಜನ ವ್ಯಕ್ತಿಯಾಗಿದ್ದರು. ಅವರು ಎರಡು ಸಲ ಹಜ್ ಸಹ ನಿರ್ವಹಿಸಿದರು ಮತ್ತು ಇಸ್ಲಾಮಿ ಪೂರ್ವಜರ ಸನ್ನಿಧಿಯಲ್ಲಿ ಇತಿಹಾಸ ನಿರ್ಮಿಸಿದರು. ಜನಮ್ ಸಾಖಿಯಲ್ಲ ಅವರ ಉಪದೇಶಗಳಲ್ಲಿ ಇಸ್ಲಾಮ್ ಮತ್ತು ಏಕದೇವತ್ವ, ನಮಾಝ್, ಉಪವಾಸ ನಿರ್ವಹಿಸಲು ತಾಕೀತು ಮಾಡುತ್ತಿದ್ದರು. ಅವರು ನಮಾಝ್ ತಪ್ಪದೆ ನಿರ್ವಹಿಸುತ್ತಿದ್ದರು. ಕೆಲವೊಮ್ಮೆ ಖುದ್ದಾಗಿ ಅಝಾನ್ ಕೊಡುತ್ತಿದ್ದರು. ಅವರ ಕೊನೆಯ ವಿವಾಹ ಓರ್ವ ಸಜ್ಜನ ಮುಸ್ಲಿಮ್ ಮಗಳೊಂದಿಗೆ ಆಯಿತು. ಇದರ ಮೂಲಕ ನಮಗೆ ತಿಳಿದು ಬರುವವುದೇನಂದರೆ ಅವರು ಮನಸ್ಸಿನಿಂದ ಮುಸ್ಲಿಮರೊಂದಿಗೆ ಸಂಬಂಧವಿರಿಸಿದ್ದರು ಅದೇ ರೀತಿ ಆ ಗ್ರಂಥದಲ್ಲಿ ಬರೆಯಲಾಗಿದೆ. ಅವರ ಅವಿಸ್ಮರಣೀಯ ವಸ್ತು ಎಂದರೆ, ಆ ಜುಬ್ಬಾ (ಚೋಲಾ) ಆಗಿದೆ. ಅದರ ಮೇಲೆ ಕಲಿಮಾ ಶಹಾದತ್ ಮತ್ತು ಪವಿತ್ರ ಖುರ್‌ಆನಿನ ಅನೇಕ ಆಯತ್‌ಗಳು ಬರೆಯಲಾಗಿತ್ತು. ಅದೇ ರೀತಿ ಅವರು ಸ್ಮರಣಕ್ಕಾಗಿ ಯಾವ ಗ್ರಂಥವನ್ನು ಬಿಡಲಿಲ್ಲ ಮತ್ತು ಅದನ್ನು ಸಂಗ್ರಹಿಸಲು ಯಾವ ವಸೀಅತ್ (ಉಪದೇಶ) ಸಹ ಮಾಡಲಿಲ್ಲ, ಕೇವಲ ಪವಿತ್ರ ಖುರ್‌ಆನಿನ ಆಯತ್‌ಗಳನ್ನು ಬರೆಯಲಾಗಿದ್ದ ಆ ಜುಬ್ಬವನ್ನು ಮಾತ್ರ ಬಿಟ್ಟಿದ್ದಾರೆ. ಅದರ ಮೇಲೆ ಬಿಡಿ ಅಕ್ಷರಗಳಲ್ಲಿ ಹೀಗೆ ಬರೆಯಲಾಗಿದೆ. **"ಇನ್ನದ್ದೀನ ಇಂದಲ್ಲಾಹಿಲ್ ಇಸ್ಲಾಂ"** ಅಂದರೆ ಎಲ್ಲಾ ಧರ್ಮಗಳು ಮಿಥ್ಯವಾಗಿವೆ. ಆದರೆ ಇಸ್ಲಾಮ್ ಸತ್ಯವಾಗಿದೆ. ಅಂದ ಹಾಗೆ ಈ ಗ್ರಂಥ ಮುಬಾಹಲ ನಂತರ ರಚನೆಗೊಂಡಿದೆ. ಇದು ದೈವಿಕ ಕೊಡುಗೆಯಾಗಿದೆ. ಅದನ್ನು ನನಗೆ ನೀಡಲಾಯಿತು. ಮತ್ತು ಈ ಪ್ರಚಾರದ ಪುಣ್ಯವು ನನಗೆಯೇ ದಯಪಾಲಿಸಿದೆ.

9) ಮುಬಾಹಲ ನಂತರ ಗೌರವಕ್ಕೆ ಪಾರವಾದ ಒಂಭತ್ತನೆಯ ವಿಷಯವೆಂದರೆ ಈ ಅವಧಿಯಲ್ಲಿ 8 ಸಾವಿರ ಸಮೀಪ ಜನರು ನನ್ನ ಕೈ ಮೇಲೆ ಬೈಅತ್ ಪಡೆದರು. ಕೆಲವರು ಖಾದಿಯಾನನಿಗೆ ಬಂದು ಮತ್ತು ಕೆಲವರು ಪತ್ರಗಳ ಮುಖಾಂತರ ಪಶ್ಚಾತ್ತಾಪ (ತೌಬ) ಕೋರಿದರು. ಆದುದರಿಂದ ನಾನು ದಿಟವಾಗಿ ಹೇಳುವೆನು. ಅಷ್ಟೊಂದು ಸಂಖ್ಯೆಯಲ್ಲಿ ಮಾನವ ಕುಲದ ಪಶ್ಚಾತ್ತಾಪ ನನ್ನ ದೆಸೆಯಿಂದಾಗಿ ಪ್ರಾಪ್ತವಾಯಿತು. ಇದು ಅಲ್ಲಾಹನು ಸಂತೃಪ್ತಗೊಂಡ ನಂತರ ಜಾಹೀರಾಗುವ ದೃಷ್ಟಾಂತವಾಗಿರುತ್ತದೆ. ನಾನು ನೋಡುತ್ತಿದ್ದೇನೆ. ನನ್ನ ಬೈಅತ್ ಪಡೆದವರು ದಿನೇ ದಿನೇ ಸಾಮರ್ಥ್ಯಗಳಲ್ಲಿ ಮತ್ತು ಭಯಭಕ್ತಿಯಲ್ಲಿ ಅಭಿವೃದ್ಧಿ ಸಾಧಿಸುತ್ತಿದ್ದಾರೆ. ಮತ್ತು ಮುಬಾಹಲ ದಿನಗಳ ನಂತರ ಒಂದು ರೀತಿಯಲ್ಲಿ ನಮ್ಮ ಜಮಾಅತ್ ಬೇರೆಯೇ ಲೋಕ ಕಂಡಂತಾಗಿದೆ. ನಾನು ಹೆಚ್ಚಿನವರು ಸಾಷ್ಟಾಂಗಗಳಲ್ಲಿ ಅಳುತಿರುವುದನ್ನು ಮತ್ತು ತಹಜ್ಜುದಿನಲ್ಲಿ ಅಲಾಪಿಸುವುದನ್ನು ಕಂಡಿದ್ದೇನೆ. ಅಶುದ್ಧ ಮನಸ್ಸಿನ ಜನರು ಅಂತಹವರನ್ನು ಅವಿಶ್ವಾಸಿ (ಕಾಫಿರ್) ಎಂದು ಕರೆಯುತ್ತಾರೆ. ಅವರುಗಳು ಇಸ್ಲಾಮಿನ ಯಕೃತ್ ಹಾಗೂ ಹೃದಯಗಳಾಗಿವೆ.

ಈಗ ನಮ್ಮ ವಿರೋಧಿಗಳು ಯೋಚಿಸಬೇಕಾಗಿದೆ. ಈ ನಂದನವನ ಅಭಿವೃದ್ಧಿಯಲ್ಲಿ ಮತ್ತು ಹಸುರಿನಲ್ಲಿ ಮುಬಾಹಲ ನಂತರ ಎಷ್ಟೊಂದು ಬೆಳವಣಿಗೆ ಆಗಿದೆ. ಇದೆಲ್ಲ ಅಲ್ಲಾಹನ ವಿಧಿಯಾಗಿದೆ. ಯಾರ ಕಣ್ಣುಗಳಿವೆಯೋ ಅವರು ನೋಡಬಹುದು. ನಮ್ಮ ಅಮೃತ್ಸರದ ನಿಷ್ಠಾವಂತ ಜಮಾಅತ್, ಲಾಹೋರಿನ ನಿಷ್ಠಾವಂತ ಜಮಾಅತ್, ನಮ್ಮ ಸಿಯಾಲ್ಕೋಟಿನ ನಿಷ್ಠಾವಂತ ಜಮಾಅತ್, ನಮ್ಮ ಕೂಫರ್‌ಥಡ ನಿಷ್ಠಾವಂತ ಜಮಾಅತ್, ನಮ್ಮ ಭಾರತದ ನಗರಗಳ ನಿಷ್ಠಾವಂತ ಜಮಾಅತುಗಳು ಎಂತಹ ಪ್ರಕಾಶ, ನಿಷ್ಠೆ ಮತ್ತು ಪ್ರೀತಿ ಹೊಂದಿವೆ ಎಂದರೆ, ಒಬ್ಬ ವಿವೇಕವಂತನೂ ಜನಸಂದಣಿಯಲ್ಲೂ ಅವರ ಮುಖ ನೋಡಿದರೆ ದಿಟವಾಗಿಯೂ ಅವನು ತಿಳಿದುಕೊಳ್ಳುವನು. ಇವರು ಅಲ್ಲಾಹನ ಒಂದು ಪವಾಡ ಆಗಿದ್ದಾರೆ, ಅಂತಹದೊಂದು ಸತ್ಯದಿಂದ ಅವರ ಹೃದಯಗಳು ತುಂಬಿವೆ. ಅವರ ಮುಖಗಳಲ್ಲಿ ಅವರ ಪ್ರೀತಿಯ ಪ್ರಕಾಶ ಬೆಳಗುತ್ತಿದೆ. ಅದು ಅಲ್ಲಾಹನ ಮೊದಲ ಜಮಾಅತ್ ಆಗಿದೆ. ಸತ್ಯಸಂಧತೆಯ ಮಾದರಿ ತೋರಿಸಲು ಅಲ್ಲಾಹನು ಅದನ್ನು ಸಿದ್ಧಗೊಳಿಸಿದೆ.

10) ನನ್ನ ಗೌರವಕ್ಕೆ ಮುಬಾಹಲ ನಂತರ ಕಾರಣವಾದ ಹತ್ತನೆಯ ವಿಷಯ ಲಾಹೋರಿನ ಸರ್ವಧರ್ಮ ಸಮ್ಮೇಳನವಾಗಿದೆ. ಈ ಸಮ್ಮೇಳನ ಕುರಿತು ನನಗೆ ಹೆಚ್ಚು ಬರೆಯುವ ಅವಶ್ಯತೆ ಇಲ್ಲ. ನನ್ನ ಈ ವಿಷಯ ಮಂಡನೆಯಿಂದ ಯಾವ ಪ್ರಕಾಶ ಮತ್ತು ಪ್ರಸಿದ್ಧಿ ದೊರೆಯಿತು ಮತ್ತು ಜನರು ಯಾವ ರೀತಿ ತುಂಬು ರೀತಿಯ ಉತ್ಸಾಹದಿಂದ ನನಗೆ ಮತ್ತು ನನ್ನ ವಿಷಯವನ್ನು ಗೌರವದ ದೃಷ್ಟಿಯಿಂದ ಕಂಡಿದ್ದಾರೆ. ಅದು ವಿವರಿಸುವ ಅಗತ್ಯವಿಲ್ಲ. ಹಲವು ಸಾಕ್ಷಿಗಳನ್ನು ನೀವು ಕೇಳಿರುತ್ತೀರಿ. ಸರ್ವ ಧರ್ಮ ಸಮ್ಮೇಳನದಲ್ಲಿ ಈ ವಿಷಯ ಮಂಡನೆಯಿಂದ ಎಷ್ಟೊಂದು ಅದ್ಭುತ ರೀತಿಯ ಪ್ರಭಾವ ಬೀರಿದೆ ಎಂದರೆ ಆಕಾಶದಿಂದ ದೇವದೂತರು ಪ್ರಕಾಶದ ಪಾತ್ರೆಗಳನ್ನು ಹಿಡಿದು ಹಾಜರಾಗುವಂತಿತ್ತು. ಪ್ರತಿಯೊಂದು ಹೃದಯವು ಇತ್ತ ಯಾವ ರೀತಿ ಸೆಳೆಯಲ್ಪಟ್ಟಿತ್ತೆಂದರೆ, ಒಂದು ಅಗೋಚರ ಹಸ್ತ ತಂತಾನೆ ಆಯಸ್ಕಾಂತದಂತೆ ಸೆಳೆಯಲ್ಪಡುವಂತಿತ್ತು. ಎಲ್ಲಾ ಜನರು ಸರ್ವಸಮ್ಮತಿಯಿಂದ ಏಕಕಂಠದಿಂದ ಹೇಳಿದರು. ಈ ವಿಷಯವಿಲ್ಲದಿರುತ್ತಿದ್ದರೆ, ಇಂದು ಮುಹಮ್ಮದ್ ಹುಸೇನ್ ಇತ್ಯಾದಿಯರ ಕಳಪೆ ಪ್ರದರ್ಶನದಿಂದಾಗಿ ಇಸ್ಲಾಮ್ ಧರ್ಮಕ್ಕೆ ಕುತ್ತು ಹಿಡಿದಂತಾಗುತಿತ್ತು. ಪ್ರತಿಯೊಬ್ಬರೂ ಹೇಳಿದರು. ಇದು ಇಸ್ಲಾಮ್ ಧರ್ಮದ ವಿಜಯವಾಗಿದೆ. ಆದರೆ ತುಸು ಯೋಚಿಸಿರಿ. ಈ ವಿಜಯ ದಜ್ಜಾಲೊಬ್ಬನ ವಿಷಯದಿಂದ ದೊರೆಯಿತೆ, ಮತ್ತೆ ನಾನು ಹೇಳುವೆನು. ಒಬ್ಬ ಅವಿಶ್ವಾಸಿಯ (ಕಾಫಿರನ) ವಿಷಯದಲ್ಲಿ ಅಷ್ಟೊಂದು ರಸ ಮತ್ತು ಕಾರುಣ್ಯ ಮತ್ತು ಈ ಆಕರ್ಷಣೆ

ನೀಡಲಾಯಿತೇ. ಮೂಮಿನ್ (ವಿಶ್ವಾಸಿಗಳು) ಹೇಳಿಕೊಳ್ಳುವವರಿಗೆ ಮತ್ತು ಅವರು 8 ಸಾವಿರ ಮುಸಲ್ಮಾನರಿಗೆ ಕಾಫಿರ್ (ಅವಿಶ್ವಾಸಿ) ಎನ್ನುತ್ತಿದ್ದರು. ಉದಾಹರಣೆಗೆ ಮುಹಮ್ಮದ್ ಹುಸೇನ್ ಬಟಾಲ್ವಿ ಅಲ್ಲಾಹನು ಈ ಸಮ್ಮೇಳನದಲ್ಲಿ ಏಕೆ ಅವರಿಗೆ ಅವಮಾನಿಸಿದನು. ಇದು ಅದೇ ದಿವ್ಯವಾಣಿ ಅಲ್ಲವೇ. "ನಾನು ನಿನ್ನನ್ನು ಅವಮಾನಿಸುವವರಿಗೆ ಅವಮಾನಿಸುವೆನು" ಹಾಗಾದರೆ ಈ ಮಹೋನ್ನತವಾದ ಸಮ್ಮೇಳನದಲ್ಲಿ ಮೌಲ್ವಿಯರ ದೃಷ್ಟಿಯಲ್ಲಿ ಕಾಫಿರ್ (ಅವಿಶ್ವಾಸಿ) ಆದ ಒಬ್ಬ ವ್ಯಕ್ತಿಗೆ ಏಕೆ ಗೌರವ ನೀಡಲಾಯಿತು. ಯರಾದರೊಬ್ಬ ಮೌಲ್ವಿ ಅದಕ್ಕೆ ಉತ್ತರ ನೀಡಬಹುದೇ.

ಅಂದ ಹಾಗೆ ಈ ಆದರ ಗೌರವಗಳು ಮತ್ತು ಪ್ರಸಿದ್ಧಿ ನಮಗೆ ಮುಬಾಹಲ ನಂತರ ದೊರೆತಿವೆ. ಈಗ ಯಾವನೇ ಒಬ್ಬ ಮೌಲ್ವಿ ನಮಗೆ ತಿಳಿಸಿರಿ. ಅಬ್ದುಲ್ ಹಖ್‌ನಿಗೆ ಮುಬಾಹಲ ನಂತರ ಯಾವ ಗೌರವ ಲೋಕದಲ್ಲಿ ದೊರೆತಿದೆ. ಜನರಲ್ಲಿ ಯಾವ ರೀತಿಯ ಪ್ರಸಿದ್ಧಿ ದೊರೆತಿದೆ. ಯಾವ ಸಾಂಪತ್ತಿಕ ವಿಜಯಗಳ ಬಾಗಿಲುಗಳು ಅವರ ಮೇಲೆ ತೆರೆದಿದೆ. ಯಾವ ಜ್ಞಾನದ ಕಿರೀಟ ಅವರಿಗೆ ಧರಿಸಲಾಗಿದೆ. ಕೇವಲ ವ್ಯರ್ಥ ಆರೋಪನೆಯಿಂದ ನನಗೆ ಒಂದು ಮಗು ನೀಡಲಾಗುವುದು ಎಂಬ ದಾವೆ ಹೂಡಿದ್ದನು. ಅದೇ ಮುಬಾಹಲದ ಪರಿಣಾಮ ಎಂದು ತಿಳಿದುಕೊಳ್ಳಿರಿ ಎಂದು. ಆದರೆ ದುರಾದೃಷ್ಟದಿಂದ ಅದು ಸಹ ಮಿತ್ಯವಾಯಿತು. ಇಲ್ಲಿಯವರೆಗೂ ಅವನ ಹೆಂಡತಿಯ ಉದರದಿಂದ ಒಂದು ಇಲಿಯು ಸಹ ಜನ್ಮ ತಾಳಲಿಲ್ಲ.

ಆದರೆ ಅದರ ಎದುರಾಗಿ ಅಲ್ಲಾಹನು ನನ್ನ ದಿವ್ಯವಾಣಿಯನ್ನು ಪೂರ್ಣಗೊಳಿಸಿ ನನಗೆ ಪುತ್ರನನ್ನು ದಯಪಾಲಿಸಿದ್ದಾನೆ.

ಈ ಹತ್ತು ಅನುಗ್ರಹಗಳು ಮುಬಾಹಲ ನಿಮಿತವಾಗಿವೆ. ಅದನ್ನೂ ನಾನು ಬರೆದಿದ್ದೇನೆ. ಅಂತಹ ಮುಬಾಹಲದ ಪರಿಣಾಮವನ್ನು ನಿರಾಕರಿಸುವವರು ಎಷ್ಟೊಂದು ಪಾಪಿಗಳಾಗಿರಬಹುದು. **ಫಲಿಲೈಹಿಂ ಅಂಯ್ಯತದಬ್ಬರು ವಯುಫಕ್ಕಿರು ಫೀ ಹಾಝಿಹಿಲ್ ಅಶರತಿಲ್ ಕಾಮಿಲತಿ** (ಝುಮೀಮ ರಿಸಾಲ ಅನ್ಜಾಮ್ ಆಥಮ್, ರೂಹಾನಿ ಖಝಾಇನ್, ಸಂಪುಟ–11, ಪುಟ–309 ಅಡಿಟಿಪ್ಪಣಿ)

**ಎಲ್ಲಾ ಮುಸ್ಲಿಂ ಮತಪಂಡಿತರಿಗೆ ಮುಬಾಹಲಕ್ಕಾಗಿ ವೈಭವಯುತ ಪಂಥ್ವಾನ.**

**ಅವರೆಲ್ಲ ಮುಬಾಹಲಕ್ಕೆ ಸಿದ್ಧಗೊಂಡರೆ ಅಬ್ದುಲ್ ಹಖ್ ಗಝ್ನವಿಗಿಂತ ಹೆಚ್ಚು ಅವಮಾನಕ್ಕೆ ಗುರಿಯಾಗುವರು.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅಂತಿಮವಾಗಿ ನಾವು ಮತ್ತೊಮ್ಮೆ ಪ್ರತಿಯೊಬ್ಬ ಕಾಫಿರ್ ಎಂದಿರುವ, ಸುಳ್ಳುಗಾರ ಎಂದಿರುವ ಎಲ್ಲಾ ಮೌಲ್ವಿಗಳಿಗೆ ಸ್ಪಷ್ಟಪಡಿಸುತ್ತೇವೆ. ಅವರುಗಳು ಮುಬಾಹಲಕ್ಕೆ ಮೈದಾನಕ್ಕೆ ಬರಲಿ ಮತ್ತು ದಿಟವಾಗಿ ತಿಳಿದುಕೊಳ್ಳಲಿ. ಯಾವ ರೀತಿ ಅಲ್ಲಾಹನು ಅಬ್ದುಲ್ ಹಖ್‌ನಿಗೆ ಮುಬಾಹಲ ನಂತರ ಈ ಹತ್ತು ರೀತಿಯ ಅನುಗ್ರಹಗಳನ್ನು ನಮಗೆ ದಯಪಾಲಿಸಿದ್ದಾನೆ ಮತ್ತು ಅವನಿಗೆ ಅವಮಾನಿಸಿದ್ದಾನೆ, ಅವನು ಮಾಡಿದ ಮಗನಾಗುವ ದಾವೆ ಸಹ ಸುಳ್ಳಾಯಿತು ಮತ್ತು ಯಾವ ಗೌರವು ಅವನಿಗೆ ಲಭಿಸಿಲ್ಲ. ಅಲ್ಲಾಹನು ಅವನ ಎಲ್ಲಾ ದಾವೆಗಳನ್ನು ರದ್ದುಪಡಿಸಿದ್ದಾನೆ. ಅದಕ್ಕಿಂತ ಹೆಚ್ಚು ಈ ಮುಬಾಹಲದಲ್ಲಾಗುವುದು. ನಾನು ಆ ದಿನ ಶಾಪ ಹಾಕಲಿಲ್ಲ. ಏಕೆಂದರೆ ಅವರು ಮೂಢರು ಮತ್ತು ದಡ್ಡರಾಗಿದ್ದರು. ಅವರ ಅಜ್ಞಾನತೆ ಕರುಣೆ ಬರುವಂತೆ ಮಾಡಿತು. ಆದರೆ ಈ ನಾನು ಶಾಪ ಹಾಕುವೆನು. ಆದುದರಿಂದ ಮುಬಾಹಲ ಬಯಸುವ ಪ್ರತಿಯೊಬ್ಬನು ತನ್ನ ಕಡೆಯಿಂದ ಪ್ರಕಟಣೆ ನೀಡಲಿ, ಮುಬಾಹಲ ಮಾಡುವವನು ಒಬ್ಬನೆ ಇರದೆ ಕನಿಷ್ಠ ಹತ್ತು ಜನರಾದರೂ ಇರಲಿ. ಏಕೆಂದರೆ ಮುಬಾಹಲಕ್ಕಾಗಿ ಪ್ರತಿಯೊಬ್ಬರಿಗೂ ಕರೆ ನೀಡಲಾಗಿದೆ. ಅವರು ಪಂಜಾಬಿನವರಾಗಿರಲಿ, ಅಥವಾ ಭಾರತದವರಾಗಿರಲಿ, ಅಥವಾ ಅರಬ್ ದೇಶದವರಾಗಿರಲಿ ಅಥವಾ ಪ್ಯಾರಿಸ್‌ದವರಾಗಿರಲಿ, ಅದಕ್ಕಾಗಿಯೇ ವಿರೋಧಿಗಳಿಗೆ ಪ್ರಯಾಣದ ಪ್ರವಾಸದ ಕಠಿಣತೆಯಿಂದ ವಿನಾಯಿತಿ ನೀಡಲಾಗಿದೆ. ಕೇವಲ ಈ ವಾದದಂತೆ, ವಮಾ ಜಅಲ ಅಲೈಕುಮ್ ಫಿದ್ದೀನಿ ಮಿನ್ ಹರಜಿನ್, ಯುರೀದುಲ್ಲಾಹು ಬಿಕುಮುಲ್ ಯುಸ್ರ ವಲಾ ಯುರೀದು ಬಿಕುಮುಲ್ ಉಸ್ರ. ಪ್ರತಿಯೊಬ್ಬ ವ್ಯಕ್ತಿಯು ಪತ್ರಿಕೆಗಳ ಮೂಲಕ ಮುಬಾಹಲಕ್ಕೆ ಸೇರುವ ಪ್ರಕಟಣೆ ನೀಡಿದರೆ ಸಾಕು. (ಅದೇ ಪುಟ 317 ಟಿಪ್ಪಣಿ)

**ಲಕ್ಷಾಂತರ ಜನರು ನನ್ನ ಪಾದದ ಮೇಲೆ ಬೀಳುತ್ತಿದ್ದಾರೆ.**

ಸಯ್ಯದ್‌ನಾ ಹಝ್ರತ್ ಮಸೀಹ್ ಮೌಊದ್(ಅ) ಅಲ್ಲಾಹನಿಂದ ದೊರೆಯುವ ಗೌರವ ಮತ್ತು ಪ್ರಸಿದ್ಧಿಯ ವಿವರ ನೀಡುತ್ತಾ ಹೇಳುತ್ತಾರೆ. ಈ ಮುಬಾಹಲ ಆಗಿ 11 ವರ್ಷಗಳು ಕಳೆದಿವೆ. ಈ ಮುಬಾಹಲ ಆದ ನಂತರ ಅಲ್ಲಾಹನು ತೋರಿದ ದಯೆ, ಪುಷ್ಟಿ ಸಹಾಯ ಅಷ್ಟಿಷ್ಟಲ್ಲ. ಅದನ್ನು ಈ ಸಂಕ್ಷಿಪ್ತ ಪತ್ರಿಕೆಯಲ್ಲಿ ವಿವರಿಸಲು ಸಾಧ್ಯವಿಲ್ಲ. ಈ ಮಾತು ಯಾರಿಂದಲೂ ಗೌಪ್ಯವಾಗಿಲ್ಲ. ಮುಬಾಹಲ ಆಗುವಾಗ ನನ್ನ ಜೊತೆಯಲ್ಲಿ ಕೇವಲ ಕೆಲವೇ ಜನರಿದ್ದರು. ಅವರನ್ನು ಬೆರಳೆಣಿಕೆಯಲ್ಲಿ ಎಣಿಸಬಹುದಾಗಿತ್ತು. ಇದೀಗ ಮೂರು ಕಲ್ಷಕ್ಕಿಂತ ಅಧಿಕ ಜನರು ನನ್ನ ಬೈಅತ್ ಮಾಡಿ ಆಗಿದೆ. ಸಾಂಪತ್ತಿಕ ಮುಗ್ಗಟ್ಟು ಎಷ್ಟಿತ್ತೆಂದರೆ ಇಪ್ಪತ್ತು ರೂಪಾಯಿ ತಿಂಗಳು ಸಹ ಬರುತ್ತಿರಲಿಲ್ಲ. ಸಾಲ ಮಾಡಬೇಕಾಗುತ್ತಿತ್ತು. ಇದೀಗ ನನ್ನ ಸಂಘಟನೆಯಲ್ಲಿ ಎಲ್ಲಾ ಶಾಕೆಗಳಿಂದ ಸುಮಾರು ಮೂರು ಸಾವಿರ ರೂಪಾಯಿ ತಿಂಗಳವಾರು ಆದಾಯ ಬರುತ್ತಿದೆ. ಅಲ್ಲಾಹನು ಅದಾದ ನಂತರ ದೊಡ್ಡ ದೊಡ್ಡ ಸಾಮುದಾಯಿಕ ದೃಷ್ಟಾಂತಗಳು ತೋರಿಸಿಕೊಟ್ಟಿದೆ. ಎದುರಿಗೆ ಬಂದವರೆಲ್ಲರೂ ನಾಶವಾಗಿ ಹೋದರು. ಅಂತಹ ಸಾವಿರಾರು ದೈವಿಕ ನೆರವಿನ ದೃಷ್ಟಾಂತಗಳು ಜಾಹಿರಾಗಿವೆ. ಅವುಗಳಲ್ಲಿ ಕೆಲವು ಮಾತ್ರ ನಮೂನೆಯ ರೂಪದಲ್ಲಿ ಇಲ್ಲಿ ಬರೆಯಲಾಗುವುದು. ಯಾವೊಬ್ಬ ವ್ಯಕ್ತಿಯಲ್ಲಿ ಲಜ್ಜೆ ಇದ್ದರೆ ಹಾಗೂ ನ್ಯಾಯವಂತನಾಗಿದ್ದರೆ ಅವನಿಗೆ ಈ ದೃಷ್ಟಾಂತಗಳು ನನ್ನ ಸತ್ಯತೆಗೆ ಸಾಕ್ಷಿಯಾಗುವುವು. (ಹಖೀ ಖತುಲ್ ವಹಿ, ರೂಹಾನಿ ಖಝಾಇನದ, ಸಂಪುಟ–22, ಪುಟ–252).

ಅಬ್ದುಲ್ ಹಖ್ ಜೊತೆ ಮುಬಾಹಲ ನಂತರ ಎಷ್ಟೆಲ್ಲಾ ದೈವಿಕ ನೆರವು ಪುಷ್ಟಿ ಮತ್ತು ದಿವ್ಯವಾಣಿಗಳು ಲಭಿಸಿವೆ ಮತ್ತು ಯಾವ ವೈಭವ ಗೌರವದಿಂದ ಪೂರ್ಣಗೊಂಡಿವೆ. ಅವುಗಳಿಂದ ನನ್ನ ಗ್ರಂಥಗಳೆಲ್ಲ ತುಂಬಿ ಹೋಗಿವೆ. ಅವೆಲ್ಲ ಮುಬಾಹಲ ನಂತರ ಬರೆದದ್ದಾಗಿವೆ. ನಾನು ಕೇವಲ ಸಂಕ್ಷಿಪ್ತ ರೀತಿಯಲ್ಲಿ ಹೇಳಬಯಸುತ್ತೇನೆ. ನಾನೊಬ್ಬನೆ ಸ್ವತಃ ಮುಬಾಹಲ ಮಾಡಿ ತನ್ನ ಮನೆಗೆ ಬಂದೆ, ಅದೇ ಸಮಯ ದೈವಿಕ ನೆರವು ಪುಷ್ಟಿ ದೊರೆಯಲಾರಂಭವಾಯಿತು. ಅಲ್ಲಾಹನು ನಿರಂತರವಾಗಿ ನನಗೆ ಸುವಾರ್ತೆಗಳು ನೀಡಿದನು ಮತ್ತು ನನಗೆ ಸಂಬೋಧಿಸಿ ಹೇಳಿದನು. ನಾನು ಲೋಕದಲ್ಲಿ ನಿನಗೆ ಬಹುಮಾನದ ಗೌರವ ನೀಡುವೆನು. ನಿನಗೆ ಒಂದು ದೊಡ್ಡ ಜಮಾಅತ್ ಒದಗಿಸುವೆನು. ದೊಡ್ಡ ದೊಡ್ಡ ದೃಷ್ಟಾಂತಗಳು ನನಗಾಗಿ ಆರಿಸಿಕೊಡುವೆನು. ಮತ್ತು ಎಲ್ಲಾ ರೀತಿ ಅನುಗ್ರಹಗಳ ಬಾಗಿಲುಗಳು ನಿನಗಾಗಿ ತೆರೆಯುವೆನು. ಅಂದ ಹಾಗೆ ಭವಿಷ್ಯವಾಣಿಗಳ ಪ್ರಕಾರ ಲಕ್ಷಾಂತರ ಜನರು ನನ್ನ ಜಮಾಅತಿಗೆ ಸೇರಿದರು. ಅವರು ಈ ಮಾರ್ಗದಲ್ಲಿ ತನ್ನ ಪ್ರಾಣ ಸಹ ತ್ಯಾಗ ಮಾಡಲು ಸಿದ್ಧರಿದ್ದಾರೆ. ಆಗಿನಿಂದ ಇಲ್ಲಿಯವರೆಗೆ ಎರಡು ಲಕ್ಷಕ್ಕಿಂತ ಅಧಿಕ ಹಣ ಬಂದಿದೆ, ಅಷ್ಟೇ ಪ್ರಮಾಣದ ಎಲ್ಲೆಡೆಯಿಂದ ಉಡುಗೊರೆಗಳು ಬಂದಿವೆ. ಅವೆಲ್ಲಾ ಸಂಗ್ರಹಿಸಿದರೆ ಎಷ್ಟೋ ಕೊಠಡಿಗಳು ತುಂಬಬಹುದು. ವಿರೋಧಿಗಳು ನನ್ನ ಎದುರಿಗೆ ಮೊಕದ್ದೊಮೆಗಳನ್ನು ಹೂಡಿದ್ದಾರೆ. ನನಗೆ ಹತ್ಯೆ ಮಾಡಬಯಸಿದರು. ಆದರೆ ಎಲ್ಲರಿಗೂ ಮುಖಭಂಗವಾಯಿತು. ಎಲ್ಲಾ ಮೊಕದ್ದೊಮೆಗಳಲ್ಲಿ ಅಂತಿಮವಾಗಿ ನನಗೆ ಗೌರವ ದಕ್ಕಿತು ಮತ್ತು ಅವರ ಪಾಲಿಗೆ ಅಪಮಾನ. ಮುಬಾಹಲ ನಂತರ ನನಗೆ ಮೂರು ಮಕ್ಕಳಾದವು. ಮತ್ತು ಅಲ್ಲಾಹನು ನನಗೆ ಗೌರವದ ಜೊತೆಯಲಿ ಪ್ರಸಿದ್ಧಿಯು ನೀಡಿದನು. ಸಾವಿರಾರು ಆದಣಿಯ ವ್ಯಕ್ತಿಗಳು ನನ್ನ ಜಮಾಅತ್ ಸೇರಿದರು. ನಿಶ್ಚಯವಾಗಿಯೂ ನೆನಪಿಡಿರಿ. ಪ್ರತಿಯೊಬ್ಬ ಆ ವ್ಯಕ್ತಿ ನನ್ನ ಮೊದಲಿನ ಸ್ಥಿತಿ ತಿಳಿದವನು ತಿಳಿದುಕೊಳ್ಳಬಹುದು. ಮೊದಲು ನನ್ನ ಗೌರವ ಹೇಗಿತ್ತು. ಮತ್ತು ಎಷ್ಟು ನನ್ನ ಜಮಾಅತ್ ಆಗಿತ್ತು. ಮತ್ತು ಎಷ್ಟು ನನ್ನ ಆದಾಯವಿತ್ತು. ಮತ್ತು ಎಷ್ಟು ನನಗೆ ಮಕ್ಕಳಿದ್ದವು. ಆನಂತರ ನನಗೆ ಯಾವ ರೀತಿಯ ಅಭಿವೃದ್ಧಿ ಲಭಿಸಿದೆ. ಅವನು ಎಷ್ಟೇ ಕಡು ವೈರಿಯಾದ್ದರೂ ಒಪ್ಪದೇ ನಿರ್ವಾಹವಿರಲಿಕ್ಕಿಲ್ಲ. ನಂತರ ಅಲ್ಲಾಹನು ನನಗೆ ಅನುಗ್ರಹದ ಮೇಲೆ ಅನುಗ್ರಹ ನೀಡಿದ್ದಾನೆ. ನನ್ನ ಸತ್ಯತೆಗೆ ಸಾಕ್ಷ್ಯವನ್ನು ಒದಗಿಸಿದ್ದಾನೆ. ಈಗ ಅಬ್ದುಲ್ ಹಖ್ಖನಿಗೆ ಕೇಳಬೇಕಾಗಿದೆ. ಅವರಿಗೆ ಮುಬಾಹಲದ ನಂತರ ಯಾವ ರೀತಿಯ ಅನುಗ್ರಹ ದೊರೆತಿದೆ. ನಾನು ಸತ್ಯವಾಗಿ ಹೇಳುತ್ತೇನೆ. ಇದೊಂದು ಮುಕ್ತ ಪವಾಡವಾಗಿದೆ. ಈಗ ಒಬ್ಬ ಕುರುಡನು ಸಹ ಅದನ್ನು ಅನುಭವಿಸಬಹುದು. ಆದರೆ ಅಕಟಕಟಾ! ರಾತ್ರಿಯಂತೂ ಕಾಣುತ್ತಾರೆ. ಮತ್ತು ಹಗಲಲ್ಲಿ ಅಂಧರಾಗುತ್ತಾರೆ. ಮುಬಾಹಲ ದಿನದಿಂದ ಇಲ್ಲಿಯವರೆಗೂ ನನ್ನ ಮೇಲೆ ಅಲ್ಲಾಹನ ಅನುಗ್ರಹದ ಮಳೆಯೇ ಸುರಿಯುತ್ತಿದೆ. ಅಲ್ಲಾಹನು ನನಗೆ ಸಂಬೋಧಿಸಿ ಹೇಳಿದಂತೆ, ನೋಡು! ನಾನು ನಿನಗಾಗಿ ಆಕಾಶದಿಂದ ಮಳೆಯನ್ನು ಸುರಿಸುವೆನು ಮತ್ತು ಭೂಮಿಯಿಂದ ಬೆಳೆಸುವೆನು. ಅಂದ ಹಾಗೆ ಹಾಗೆಯೇ ನನ್ನೊಡೊನೆ ವ್ಯವಹಾರವಾಯಿತು ಮತ್ತು ಎಂತ ಅನುಗ್ರಹಗಳನ್ನು ಹಾಗೂ ದೃಷ್ಟಾಂತಗಳನ್ನು ದಯಪಾಲಿಸಿದ್ದಾನೆಂದರೆ ಅವು ಅಸಂಖ್ಯಾತವಾಗಿವೆ. ಲಕ್ಷಾಂತರ ಜನರು ನನ್ನ ಪಾದದ ಮೇಲೆ ಬೀಳುವಂತಹ ಗೌರವ ನನಗೆ ನೀಡಿರುವನು. (ಅದೇ ಪುಟ 253).

ಮುಂದಿನ ಸಂಚಿಕೆಯಲ್ಲಿ ಇನ್‌ಶಾಅಲ್ಲಹ್ ನಾವು ಅಬ್ದುಲ್ ಹಖ್ ಮೇಲೆ ಒಂದು ವಿಶೇಷ ರೀತಿಯು ಅಪಮಾನ ಉಂಟಾದ ಬಗ್ಗೆ ವಿವರಿಸುವೆವು.

**(ಮನ್ಸೂರ್ ಅಹ್ಮದ್ ಮಸ್ರೂರ್)**

**ಹುಝೂರ್(ಸ) ನುಡಿದರು: *ಉರೀತುನ್ನಾರ ಫಇಝಾ ಅಕ್ಸರು ಅಹ್ಲಿಹನ್ನಿಸಾಉ ಯಕ್ಫುರೂನ್***
**ಅಂದರೆ ನನಗೆ ನರಕದಲ್ಲಿ ತನ್ನ ಕರ್ಮಗಳಿಂದಾಗಿ ಮಹಿಳೆಯರೇ ಹೆಚ್ಚಾಗಿ ಕಂಡರು. ಅವರು ತನ್ನ ಪತಿಗೆ ಅವಿಧೇಯತೆ, ಕೃತಘ್ನತೆ ತೋರುವವರಾಗಿದ್ದರು.**

## ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್ (ಅಬಿಅ) ರೊಡನೆ ಕೇಳಲಾದ ಪ್ರಮುಖ ಪ್ರಶ್ನೆಗಳ ವಿವೇಕಪೂರ್ಣ ಉತ್ತರಗಳು

**ಸೂಚನೆ:–** ಸಯ್ಯದ್‌ನಾ ಹಝ್ರತ್ ಅಮೀರುಲ್ ಮುಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್(ಅಬಿಅ) ವಿವಿಧ ಸಂದರ್ಭಗಳಲ್ಲಿ ತನ್ನ ಪತ್ರಗಳಲ್ಲಿ ಮತ್ತು MTA ಯ ವಿವಿಧ ಕಾರ್ಯಕ್ರಮಗಳಲ್ಲಿ ಪ್ರಮುಕ ಸಮಸ್ಯೆಗಳ ಕುರಿತು ನೀಡಲಾದ ನಿರ್ದೇಶನಗಳು. ಅವುಗಳಲ್ಲಿ ಕೆಲವು ಓದುಗರ ಹಿತದೃಷ್ಟಿಯಿಂದ ಅಲ್–ಫಝ್ಲ್ International ನ ಕೃಪೆಯಿಂದ ಪ್ರಕಟಿಸಲಾಗುತ್ತದೆ.

*(ಬದರ್ ಸಂಚಿಕೆ–35ರ ಉಳಿದ ಭಾಗ ಮುಂದುವರಿಸಲಾಗಿದೆ)*

ಹಝ್ರತ್ ಖಲೀಫತುಲ್ ಮಸೀಹ್ ಪ್ರಥಮರು(ರ) ಹರಾಮ್ ಮತ್ತು ಹರಾಮಿನ ತತ್ವ ವಿವರಿಸುತ್ತಾ ಹೇಳುತ್ತಾರೆ:

"ಪವಿತ್ರ ಖುರ್‌ಆನ್‌ನಲ್ಲಿ ಬಂದಿದೆ. **ಲಾ ತಖೂಲೂ ಲಿಮಾ ತಸಿಫೂ ಅಲ್‌ಸಿನತುಕುಮುಲ್ ಕಝಿಬ ಹಾಝಾ ಹಲಾಲುನ್‌ವ್ವ ಹಾಝಾ ಹರಾಮಿಲ್ಲಿತಫ್ತರೂ ಅಲಲ್ಲಾಹಿಲ್ ಕಝಿಬ, ಇನ್ನಲ್ಲಝೀನ ಯಫ್ತರೂನ ಅಲಲ್ಲಾಹಿಲ್ ಕಝಿಬ ಲಾ ಯುಫ್ಲಿಹೂನ್.**

ಇದು ಅಲ್ಲಾಹನ ಮೇಲೆ ಅಪವಾದ ಹೇರಿದಂತೆ, ಅದನ್ನು ಹಲಾಲ್ ಅಥವಾ ಹರಾಮ್ ಎನ್ನುವುದು. ಅಲ್ಲಾಹನು ಹೇಳಿದನು. **ಹರ್ರಮ ಅಲೈಕುಮುಲ್ ಮೈತತ ವದ್ದಮ ವ ಲಹ್ಮಲ್ ಖಿನ್‌ಝೀರಿ ವಮಾಉಹಿಲ್ಲ ಬಿಹೀ ಲಿಗೈರಿಲ್ಲಾಹ್**

ಹದೀಸಿನಲ್ಲಿ ರಸೂಲುಲ್ಲಾಹ್(ಸ) ನುಡಿದರು. ಯಾವ ಪ್ರಾಣಿ ಬೇಟೆಯಾಡುತ್ತದೆಯೋ ಅದು ಹರಾಮಾಗಿದೆ. ಅದರಲ್ಲಿ ಕ್ರೂರ ಪ್ರಾಣಿಗಳು, ಬೇಟೆಯಾಡುವ ಪಕ್ಷಿಗಳೆಲ್ಲ ಸೇರಿವೆ. ಈಗ ಅದಕ್ಕಿಂತ ಹೆಚ್ಚು ಹಲಾಲ್ ಹರಾಮ್ ಎನ್ನುವ ಅಧಿಕಾರ ಯಾರಿಗೂ ಇಲ್ಲ. ಆದರೆ ಲೋಕದಲ್ಲಿ ಸಾವಿರಾರು ಪ್ರಾಣಿಗಳಿವೆ. ಅದರಲ್ಲಿ ಯಾವುದನ್ನು ತಿನ್ನಬೇಕು. ಯಾವುದನ್ನು ಬೇಡ ಕಂಡು ಹಿಡಿಯುವುದು ಕಷ್ಟಸಾಧ್ಯ. ಈ ಕಠಿಣನತೆಯನ್ನು ಅಲ್ಲಾಹನು ಸರಳವಾಗಿ ಪರಿಹರಿಸಿದ್ದಾನೆ.

**ಫಕುಲು ಮಿಮ್ಮಾ ರಝಖಕುಮುಲ್ಲಾಹು ಹಲಾಲನ್ ತಯ್ಯಿಬನ್ ವಶ್ಕುರೂ ನಿಮತಲ್ಲಾಹಿ ಇನ್ ಕುನ್ತುಮ್ ಇಯ್ಯಾಹು ತಬುದೂನ್** ಅಂದರೆ ಹಲಾಲ್ ಪರಿಶುದ್ಧವಾದುದನ್ನು ತಿನ್ನಿರಿ. ಇದೀಗ ನಿಚ್ಚಳಗೊಳಿಸಿದಂತಾಯಿತು. ಯಾವ ವಸ್ತು ಪರಿಶುದ್ಧವಾಗಿದೆಯೋ ಅವುಗಳನ್ನು ತಿನ್ನಿರಿ. ಅಂದ ಹಾಗೆ ಎಲ್ಲಾ ಕಡೆ ಎಲ್ಲಾ ಸಮುದಾಯಗಳಲ್ಲಿ ಯಾವ ವಸ್ತುಗಳು ಉತ್ತಮ ಮತ್ತು ಪರಿಶುದ್ಧವಾಗಿರುವುದೋ ಅದನ್ನು ಸಜ್ಜನರು ಮತ್ತು ಸುಸಂಸ್ಕೃತರು ತಿನ್ನುತ್ತಾರೆ. ಅದನ್ನು ತಿನ್ನಿರಿ. ಅದರಲ್ಲಿ ಮೊದಲು ವಿವರಿಸಲಾದ ಹೊರತಾದ ವಸ್ತುಗಳಿಂದ ಉಳಿದುಕೊಳ್ಳುವುದು ಅವಶ್ಯವಾಗಿರುತ್ತದೆ. ಗಿಳಿ ತಿನ್ನುವುದರಲ್ಲಿ ಅಡ್ಡಿಯಿಲ್ಲ. ಆದರೆ ನಾನು ತಿನ್ನಲಾರೆ. ಏಕೆಂದರೆ ನಮ್ಮ ದೇಶದ ಸಜ್ಜನರು ತಿನ್ನುವುದಿಲ್ಲ. ಒಂದು ಸಂದರ್ಭದಲ್ಲಿ ಒಬ್ಬರು ನನ್ನ ಮುಂದೆ ಝುಖ್ ಅಡುಗೆ ಮಾಡಿ ತಿಂದರು ಮತ್ತು ಊಟ ಮಾಡಲು ಹೇಳಿದರು. ನಾನು ಹೇಳಿದೆ. ಸಂತೋಷದಿಂದ ನನ್ನ ಬಳಿ ಕುಳಿತುಕೊಂಡು ಊಟ ಮಾಡಿರಿ. ಆದರೆ ನಾನು ತಿನ್ನುವುದಿಲ್ಲ. ಏಕೆಂದರೆ ಸಜ್ಜನರು ಅದನ್ನು ತಿನ್ನುವುದಿಲ್ಲ. (ಅಖ್ಬಾರ್ ಬದರ್ ಸಂಖ್ಯೆ–19 ಸಂಪುಟ–10, 09–03–1911, ಪುಟ–1)

**ಪ್ರಶ್ನೆ:** ಮಹಿಳೆಯೋರ್ವಳು ಇಸ್ಲಾಮಿನಲ್ಲಿ ಸ್ತ್ರೀ ಮತ್ತು ಪುರುಷರ ಸಮಾನತೆಯ ಕುರಿತು ತನ್ನ ಕೆಲ ಸಮಸ್ಯೆಗಳನ್ನು ವಿವರಿಸಿ ಇಸ್ಲಾಮಿನಲ್ಲಿರುವ ಕೆಲವು ಆಜ್ಞೆಗಳ ಕುರಿತು ಹುಝೂರ್ ಅನ್ವರ್ (ಅಬಿಅ) ರವರಲ್ಲಿ ಮಾರ್ಗದರ್ಶನ ಯಾಚಿಸಿದಳು. ಅದರ ಉತ್ತರವಾಗಿ ಹುಝೂರ್ ಅನ್ವರ್ ದಿನಾಂಕ: 11 ಏಪ್ರಿಲ್ 2016 ರ ತನ್ನ ಪತ್ರದಲ್ಲಿ ಈ ಕೆಳಗಿನ ಉತ್ತರವನ್ನು ನೀಡಿದರು.

**ಉತ್ತರ:** ನೀವು ಪತ್ರದಲ್ಲಿ ವಿವರಿಸಿದ ಆಕ್ಷೇಪಗಳು ಇಸ್ಲಾಂನ ಶಿಕ್ಷಣಗಳಿ ಮತ್ತು ಮಾನವ ಪ್ರಕೃತಿ ಮನವರಿಕೆಯಾಗದ ಕಾರಣದಿಂದಾಗಿ ಉದ್ಭವಿಸಿದೆ. ಇಸ್ಲಾಂ ಧರ್ಮವು ಎಲ್ಲಿಯೂ ಸಹ ಎಲ್ಲಾ ವಿಷಯಗಳಲ್ಲಿ ಸ್ತ್ರೀ ಪುರುಷರು ಸಮಾನರಾಗಿದ್ದಾರೆ ಎಂಬ ದಾವೆ ಮಾಡಲಿಲ್ಲ. ಇಸ್ಲಾಂ ಧರ್ಮವೇ ಏಕೆ ಮಾನವ ಪ್ರಕೃತಿ ಸಹ ಅದನ್ನು ಒಪ್ಪುವುದಿಲ್ಲ.

ಹೌದು ಇಸ್ಲಾಂ ಧರ್ಮವು ಅವಶ್ಯವಾಗಿ ಈ ಶಿಕ್ಷಣ ನೀಡಿದೆ. ಸತ್ಕರ್ಮಗಳ ವಿಷಯಗಳಲ್ಲಿ ಯಾವ ರೀತಿ ಅಲ್ಲಾಹನು ಪುರುಷರಿಗೆ ಅನುಗ್ರಹ ಮತ್ತು ತನ್ನ ಔದಾರ್ಯಗಳಿಂದ ದಯಪಾಲಿಸುತ್ತಾನೋ ಅದೇ ರೀತಿ ಸ್ತ್ರೀಯರಲ್ಲಿ ತನ್ನ ಅನುಗ್ರಹ ಔದಾರ್ಯಗಳಿಂದ ದಯಪಾಲಿಸುತ್ತಾನೆ. ಅಲಾಹನು ಹೇಳುತ್ತಾನೆ. **ಫಸ್ತಜಾಬಲಹುಮ್ ರಬ್ಬುಹುಮ್ ಅನ್ನಿ ಲಾ ಅಝೀಉ ಅಮಲ ಆಮಿಲಿನ್ ಮಿಂಕುಮ್ ಮಿನ್ ಝಕರಿನ್ ಔ ಉನ್ಸಾ ಬಝುಕುಮ್ ಮಿನ್ ಬಝಿನ್ ಫಲ್ಲಝೀನ ಹಾಜರೂ ವ ಅಖ್ರಿಜೂ ಮಿನ್ ದಿಯಾರಿಹಿಮ್ ವೂಝೂ ಫೀ ಸಬೀಲಿ ವಖಾತಿಲೂ ವ ಖುತಿಲೂ ಲುಕಫ್ಫಿರನ್ನ ಅನ್ಹುಮ್ ಸಯ್ಯಿಆತಿಹಿಮ್ ವಲಉದ್ಖಿಲನ್ನಹುಮ್ ಜನ್ನಾತಿನ್ ತಜ್ರೀ ಮಿನ್ ತಹ್ತಿಹಲ್ ಅನ್ಹಾರು ಸವಾಬಮ್ಮಿನ್ ಇಂದಿಲ್ಲಾಹಿ ವಲ್ಲಾಹು ಇಂದಹೂ ಹುಸ್ನುಸ್ಸವಾಬ್** (ಸೂರಃ ಅಲಿ ಇಮ್ರಾನ್: 196)

ಅನುವಾದ: ಹಾಗೆ ಅವರ ಪ್ರಭೂ ಅವರ ಪ್ರಾರ್ಥನೆಗೆ ಉತ್ತರವಿತ್ತನು. ಖಂಡಿತವಾಗಿಯೂ ನಿಮ್ಮ ಪೈಕಿ ಪುರುಷನಾಗಲಿ, ಸ್ತ್ರೀಯಾಗಲಿ, ಯಾರ ಕರ್ಮವನ್ನೂ ನಾನು ನಿಷ್ಫಲಗೊಳಿಸಲಾರೆ. ನಿಮ್ಮಲ್ಲಿ ಕೆಲವರಿಗೆ ಕೆಲವರೊಡನೆ, (ಪರಸ್ಪರ) ಸಂಬಂಧವಿದೆ. ಆದ್ದರಿಂದ (ಧರ್ಮ ಸಂರಕ್ಷಣೆಗಾಗಿ) ಸ್ವದೇಶವನ್ನು ತೊರೆದ, ತಮ್ಮ ಗೃಹಗಳಿಂದ ಹೊರಹಾಕಲ್ಪಟ್ಟ, ನನ್ನ ಮಾರ್ಗದಲ್ಲಿ ದೌರ್ಜನ್ಯಕ್ಕೆ ಗುರಿಯಾದ, ಧರ್ಮಯುದ್ಧ ಮಾಡಿದ, ವಧಿಸಲ್ಪಟ್ಟ ಜನರಿಗೆಲ್ಲ ನಿಶ್ಚಯವಾಗಿಯೂ ಅವರ ಕೆಡುಕುಗಳನ್ನು ನಾನು ತೊಡೆದು ಹಾಕುವೆನು. ಕೆಳಭಾಗದಲ್ಲಿ ಸರಿತ್ತುಗಳು ಹರಿಯುವ ಸ್ವರ್ಗೀಯ ತೋಟಗಳಲ್ಲಿ ಅವರಿಗೆ ಪ್ರವೇಶ ನೀಡುವೆನು. ಇದು ಅಲ್ಲಾಹನ ಕಡೆಯಿಂದ ಪ್ರತಿಫಲವಾಗಿದೆ. ಅತ್ಯುತ್ತಮವಾದ ಪ್ರತಿಫಲವಿರುವುದು ಅಲ್ಲಾಹನ ಬಳಿಯಲ್ಲಿದೆ.

ಸಾಕ್ಷ್ಯ ವಿಷಯಗಳಲ್ಲಿ ಪುರುಷರಿಗೆ ಸಂಬಂಧಿಸಿದ್ದರೆ ಮತ್ತು ಸ್ತ್ರೀಯರೊಡನೆ ನೇರ ಸಂಬಂಧವಿಲ್ಲದಿದ್ದರೆ ಸಾಕ್ಷ್ಯವಾಗಿ ನಿಗದಿಪಡಿಸಿದ ಪುರುಷರು ಲಭ್ಯವಾಗದಿದ್ದಲ್ಲಿ ಒಬ್ಬ ಪುರುಷನ ಜೊತೆಯಲ್ಲಿ ಇಬ್ಬರು ಸ್ತ್ರೀಯರನ್ನು ನೇಮಿಸಲಾಗಿದೆ. ಏಕೆಂದರೆ ಈ ವ್ಯವಹಾರದಲ್ಲಿ ಸ್ತ್ರೀಯರಿಗೆ ನೇರವಾದ ಸಂಬಂಧವಿಲ್ಲ. ಆದುದರಿಂದ ಸಾಕ್ಷಿ ನೀಡುವ ಸ್ತ್ರೀಯು ತನ್ನ ಸಾಕ್ಷಿ ಮರೆತರೆ ಇನ್ನೊಬ್ಬರು ಅವರನ್ನು ನೆನಪಿಸಬಹುದು. ಅಂದ ಹಾಗೆ ಇಲ್ಲಿಯೂ ಸಾಕ್ಷಿ ಒಬ್ಬ ಮಹಿಳೆಯದ್ದೇ ಆಗಿದೆ. ಕೇವಲ ಇಂತಹ ವ್ಯವಹಾರಗಳಲ್ಲಿ ಸಂಬಂಧವಿಲ್ಲದ ಕಾರಣ, ಆ ವಿಷಯ ಮರೆತು ಬಿಡುವ ಸಂಭವವಿರುವ ಕಾರಣ ಇನ್ನೊಬ್ಬ ಮಹಿಳೆಯೇ ಅವರ ಸಹಾಯಕ್ಕಾಗಿ, ಆ ಮಾತನ್ನು ನೆನಪಿಸಲು ಇಡಲಾಗಿದೆ. ಪವಿತ್ರ ಖುರ್‌ಆನ್‌ನ್ನೂ ಸಹ ಅದೇ ವಿಷಯಕ್ಕೆ ಇಂಬು ನೀಡುತ್ತಿದೆ. ಅಂದ ಹಾಗೆ ಹೇಳಿದನು. **ಯಾಅಯ್ಯುಹಲ್ಲಝೀನ ಆಮನೂ ಇಝಾ ತದಾಯನ್ತುಮ್ ಬಿದೈನಿನ್ ಇಲಾ ಅಜಲಿನ್ ಮುಸಮ್ಮಾ ಫಕ್ತಬೂಹೂ..... ವಸ್ತಶ್ಹಿದೈನಿ ಮಿರ್‍ರಿಜಾಲಿಕುಮ್, ಫಇಂಲ್ಲಮ್ ಯಕೂನ ರಜುಲೈನಿ ಫರಜುಲುವ್ವಮ್ರಅತಾನಿ ಮಿಮ್ಮನ್ ತರ್‌ಝೂನ ಮಿನಶ್ಶುಹದಾಇ ಇನ್ ತಝಿಲ್ಲ ಇಹ್ದಾಹುಮಾ ಫತುಝಕ್ಕಿರ ಇದ್ಹಾಹುಮಲ್ ಉಖ್ರಾ** (ಸೂರಃ ಅಲ್‌ಬಖರ–283).

ಅನುವಾದ : ಓ ವಿಶ್ವಾಸಿಗಳೇ, ನೀವು ಒಂದು ನಿರ್ಧಿಷ್ಟ ಅವಧಿಗೆ ಪರಸ್ಪರ ಸಾಲದ ವ್ಯವಹಾರ ಮಾಡುವಾಗ ಅದನ್ನು ಬರೆದಿಟ್ಟುಕೊಳ್ಳಿರಿ. ನಿಮ್ಮ ಮಧ್ಯೆ ಒಬ್ಬ ಬರಹಗಾರನು ನ್ಯಾಯೋಚಿತವಾಗಿ ಬರೆಯಲಿ. ಯಾವ ಬರಹಗಾರನು ಅದನ್ನು ಬರೆಯಲು ನಿರಾಕರಿಸಬಾರದು. ಕಾರಣವೇನೆಂದರೆ, ಅಲ್ಲಾಹನು ಆತನಿಗೆ ಬರೆಯಲು ಕಲಿಸಿದ್ದಾನೆ. ಆದ್ದರಿಂದ ಆತನು ಬರೆಯಲೇಬೇಕಾಗಿದೆ. ಬರೆಯಬೇಕಾದ ವಾಕ್ಯಗಳನ್ನು (ಸಾಲಕ್ಕೆ) ಬಾಧ್ಯನಾದವನು (ಸಾಲಗ್ರಾಹಿ) ಹೇಳಿಕೊಡಬೇಕು. ಆತನು ತನ್ನ ಪ್ರಭುವಾದ ಅಲ್ಲಾಹನ ಭಯವಿರಿಸಿಕೊಳ್ಳಿರಿ. ಹಾಗೂ ಅದರಿಂದ (ಸಾಲದ ಮೊತ್ತದಿಂದ) ಏನನ್ನೂ ಕಡಿಮೆಗೊಳಿಸದಿರಲಿ. ಆದರೆ (ಸಾಲಕ್ಕೆ) ಬಾಧ್ಯನಾದವನು ಅವಿವೇಕಿಯೋ ಬಲಹೀನನೋ ಹೇಳಿಕೊಟ್ಟು ಬರೆಯಿಸಲು ಅಸಮರ್ಥನೋ ಆಗಿದ್ದರೆ, ಆತನ ರಕ್ಷಕನು (ಆತನಿಗೋಸ್ಕರ) ನ್ಯಾಯಯುತವಾಗಿ ವಾಕ್ಯಗಳನ್ನು ಹೇಳಿ ಬರೆಯಿಸಬೇಕಾಗಿದೆ. ನಿಮ್ಮ ಪೈಕಿ ಇಬ್ಬರು ಪುರುಷರಿಲ್ಲವಾದರೆ ನೀವು ಇಷ್ಟಪಡುವ ಒಬ್ಬ ಪುರುಷ ಮತ್ತು ಇಬ್ಬರು ಸ್ತ್ರೀಯರು ಸಾಕ್ಷಿಗಳಾಗಲಿ, ಅವರೀರ್ವರಲ್ಲಿ ಒಬ್ಬಳು ಮರೆತರೆ ಇನ್ನೊಬ್ಬಳು ನೆನಪಿಸಿಕೊಳ್ಳಲಿಕ್ಕಾಗಿದೆ.

ಹದೀಸಿನಿಂದ ಸಾಬೀತಾಗಿದೆ. ಎಲ್ಲಿಯವರೆಗೆ ಮಹಿಳೆಯರ ಯಾವ ಸಮಸ್ಯೆಗೆ ನೇರವಾದ ಸಂಬಂಧವಿದೆಯೋ, ಅಲ್ಲಿ ಹುಝೂರ್(ಸ) ಮಹಿಳೆಯೊಬ್ಬಳು ವಿವಾಹಿತ ಹುಡುಗ ಮತ್ತು ಹುಡುಗಿಗೆ ಇಬ್ಬರಿಗೂ ಮೊಲೆಯುಣಿಸಿದ್ದಳು. ಅದು ಗೊತ್ತಾದ ತಕ್ಷಣ ಕೇವಲ ಒಬ್ಬ ಮಹಿಳೆಯ ಸಾಕ್ಷಿಯ ಮೇಲೆ, ಅವರನ್ನು ಪ್ರತ್ಯೇಕಗೊಳಿಸಲಾಯಿತು.

*(ಪುಟ 06 ರಲ್ಲಿ ಮುಂದುವರಿಸಲಾಗಿದೆ)*

EDITOR
TARIQ AHMED IDRIS.
Mobile : +91 8050330779
e-mail: kannadabadar@gmail.com
website:www.akhbarbadarqadian.in

REGISTERED WITH THE REGISTRAR OF THE NEWSPAPER FOR INDIA AT NO RN PUNKAN/2020/78613

Weekly **BADAR** Qadian

Distt: Gurdaspur (Pb.) INDIA Qadian - 143516

Postal Reg. No: 3000039689/2020-22 Vol No.02, Thursday, 09 September 2021, Issue No. 36

MANAGER
SHAIKH MUJAHID AHMAD.
Mobile : +91 99153 79255
e-mail:managerbadrqnd@gmail.com
www.alislam.org/badr

ANNUAL SUBSCRIPTION:Rs.575/- (Per Issue: 10/- ) (WEIGHT: 20-50, grms / issue)

## *ಸಯ್ಯದನಾ ಹಝ್ರತ್ ಅಮೀರುಲ್ ಮೂಮಿನೀನ್ ಖಲೀಫತುಲ್ ಮಸೀಹ್ ಖಾಮಿಸ್‌ರವರ ಜರ್ಮನಿಯ ಪ್ರವಾಸ (ಮೇ, ಜೂನ್ 2015)*

**(ಬದರ್ ಸಂಚಿಕೆ 35ರ ವರದಿಯ ಉಳಿದ ಭಾಗ)**

ಹುಝೂರ್ ಅನ್ವರ್ ನುಡಿದರು. ಯಾವ ಮೌಲ್ವಿಗೂ ಶಿಫಾಅತ್ ಮಾಡಲು ಸಾಧ್ಯವಿಲ್ಲ. ಖ್ವಾಜರಾಗಲಿ, ಸಯ್ಯದಾಗಲಿ, ಯಾರಿಗೂ ಶಿಫಾಅತ್ ಮಾಡಲು ಸಾಧ್ಯವಿಲ್ಲ. ಹಝ್ರತ್ ಖಲಿಫತುಲ್ ಮಸೀಹ್ ಪ್ರಥಮರು ಹೇಳುತ್ತಿದ್ದರು. ಒಬ್ಬ ಸಯ್ಯದ್ ಪೀರ್ (ಗುರು) ಆಗಿದ್ದ. ಅವನು ಮಹಿಳೆಯರಿಗೆ ಹೇಳಿದನು. ನೀವು ಪಾಪ ಎಸಗಿ ಬಂದಿರುವೆ, ನಾನು ಸಯ್ಯದ್ ಆಗಿದ್ದೇನೆ. ನಬಿ ಕರೀಂ(ಸ) ರವರ ವಂಶದವನಾಗಿದ್ದೇನೆ. ನಾನು ನಿನ್ನ ಶಿಫಾತ್ ಮಾಡುವೆನು. ನಿನಗೆ ಅಲ್ಲಾಹನು ಪ್ರಶ್ನೆ ಮಾಡಿದರೆ ಹೇಳಬೇಕು. ನಾನು ಓರ್ವ ಸಯ್ಯದ್ ಪೀರ್‌ನ ಶಿಷ್ಯನಾಗಿದ್ದೇನೆ. ನಬಿ ಕರೀಂ(ಸ) ಎಷ್ಟೊಂದು ಕಷ್ಟಗಳನ್ನು ಎದುರಿಸಿದ್ದಾರೆ. ಆಗ ಅಲ್ಲಾಹನು ನಿನಗೆ ಸ್ವರ್ಗಕ್ಕೆ ಪ್ರವೇಶ ನೀಡುವನು. ನಾನು ಬಂದು ಅಲ್ಲಾಹನಿಗೆ ಹೇಳುವೆನು. ನಾನು ಸಯ್ಯದ್ ಆಗಿದ್ದೇನೆ ಮತ್ತು ನಬಿ ಕರೀಂ(ಸ) ರವರ ವಂಶದವನಾಗಿದ್ದೇನೆ. ಆಗ ನನ್ನನ್ನು ಸಹ ಅಲ್ಲಾಹನು ಕಳುಹಿಸುವನು. ಇದಾಗಿದೆ ಅವರ ಮಾತುಗಳು.

ಹುಝೂರ್ ನುಡಿದರು. ಅಲ್ಲಾಹನು ಯಾವ ಪೀರನಿಗೂ, ಯಾವ ಖ್ವಾಜನಿಗೂ, ಯಾವ ಸಯ್ಯದನಿಗೂ, ಯಾವ ಮೌಲ್ವಿಗೂ ಶಿಫಾಅತ್ತಿನ ಹಕ್ಕು ನೀಡಲಿಲ್ಲ. ಮನುಷ್ಯನು ನಮ್ಮ ಕರ್ಮಗಳ ಬಗ್ಗೆ ಚಿಂತಿಸಬೇಕಾಗಿದೆ. ಸತ್ಕರ್ಮಗಳನ್ನು ಪಾಲಿಸಬೇಕಾಗಿದೆ, ಮತ್ತು ಅಲ್ಲಾಹನ ಅನುಗ್ರಹ ಬಯಸಬೇಕಾಗಿದೆ.

ಹುಝೂರ್ ಅನ್ವರ್ ನುಡಿದರು. ಸೂರ: ಅಲ್‌ಬಖರ ವಚನ 256 ರಲ್ಲಿ ಅಲ್ಲಾಹನು ಅದನ್ನೇ ಪ್ರಸ್ತಾಪಿಸಿದ್ದಾನೆ. ಅಲ್ಲಾಹನ ಇಚ್ಛೆ ಇಲ್ಲದೇ ಯಾರಿಗೂ ಶಿಫಾಅತ್ತಿನ ಹಕ್ಕಿಲ್ಲ. ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರ ಓರ್ವ ಹಿರಿಯ ನಿಷ್ಠಾವಂತ ಸಹಾಬಿಯರ ಪುತ್ರರು ಅಸ್ವಸ್ಥರಾದರು. ಮರಣಕ್ಕೆ ಸಮೀಪ ತಲುಪುವಂತಹ ಸ್ಥಿತಿ ಉಂಟಾಯಿತು. ಹಝ್ರತ್ ಮಸೀಹ್ ಮೌಊದ್(ಅ) ಅವರ ಆರೋಗ್ಯಕ್ಕಾಗಿ ಪ್ರಾರ್ಥಿಸಿದರು. ಅಲ್ಲಾಹನು ಅವರನ್ನು ಮೃತ್ಯುವಿನ ದವಡೆಯಿಂದ ಮರಳಿ ತರುವಂತಾಗಲಿ ಎಂದು. ಆ ಮೇಲೆ ಹಝ್ರತ್ ಮಸೀಹ್ ಮೌಊದ್(ಅ) ನುಡಿದರು. ಒಂದು ವೇಳೆ ನನ್ನ ದುಆ ಅಸ್ವೀಕಾರವಾದರೆ, ನನ್ನ ಶಿಫಾತ್ ಸ್ವೀಕರಿಸು. ಆಗ ಅಲ್ಲಾಹನಿಂದ ದಿವ್ಯವಾಣಿ ಆಯಿತು. ಅಲ್ಲಾಹನ ಅನುಮತಿ ಇಲ್ಲದೆ ನನ್ನ ಸನ್ನಿಧಿಯಲ್ಲಿ ಶಿಫಾರಸ್ಸು ಮಾಡುವವರು ಯಾರಿದ್ದಾರೆ.

ಹಝ್ರತ್ ಮಸೀಹ್ ಮೌಊದ್(ಅ) ಹೇಳುತ್ತಾರೆ. ಅದು ಎಷ್ಟೊಂದು ಪ್ರತಾಪಶಾಲಿ ದಿವ್ಯವಾಣಿ ಆಗಿತ್ತೆಂದರೆ ನಾನು ಕಂಪಿಸತೊಡಗಿದೆ ಮತ್ತು ಅಲ್ಲಾಹನಿಂದ ಕ್ಷಮೆ ಯಾಚಿಸಿದೆ. ಆಗ ಅಲ್ಲಾಹನಿಂದ ಮರು ದಿವ್ಯವಾಣಿಯಾಯಿತು. ನಿಮಗೆ ಅನುಮತಿ ನೀಡಲಾಗಿದೆ. ಆಗ ಅಲ್ಲಾಹನ ಅನುಮತಿಯಿಂದ ಅವರು ಶಿಫಾರಸ್ಸು ಮಾಡಿದರು ಮತ್ತು ಆ ಹುಡುಗನಿಗೆ ಆರೋಗ್ಯ ದೊರೆಯಿತು. ಮತ್ತು ಅವರು ಮೃತ್ಯುವಿನ ದವಡೆಯಿಂದ ಮರಳಿ ಬಂದರು.

ಹುಝೂರ್ ಅನ್ವರ್ ಹೇಳಿದರು. ಕೆಲವು ಸಂದರ್ಭಗಳಲ್ಲಿ ಅಲ್ಲಾಹನು ಅನುಮತಿ ನೀಡುವವನಾದರೆ ತನ್ನ ಇತರ ಪ್ರಿಯರಿಗೂ ಅನುಮತಿ ನೀಡುತ್ತಾನೆ. ಆಗ ಅವರು ಶಿಫಾರಸ್ಸು ಮಾಡಬಹುದು. ಅಂತೂ ಅಲ್ಲಾಹನ ಅನುಮತಿ ಅನಿವಾರ್ಯವಾಗಿರುತ್ತದೆ.

ಹುಝೂರ್ ಅನ್ವರ್ ನುಡಿದರು. ಅಲ್ಲಾಹನು ಶಿಫಾರಸ್ಸಿನ ನಿಜವಾದ ಹಕ್ಕು ಮತ್ತು ಅನುಮತಿ ಕೇವಲ ನಬಿ ಕರೀಂ(ಸ) ರವರಿಗೆ ನೀಡಿದ್ದಾನೆ. ಇನ್ಯಾರಿಗೂ ತಮ್ಮ ಸಮುದಾಯಕ್ಕಾಗಿ ಶಿಫಾರಸ್ಸು ಮಾಡುವ ಹಕ್ಕು ನೀಡಿಲ್ಲ. ಆದುದರಿಂದ ಅಂತ್ಯ ತೀರ್ಪಿನ ದಿನದಂದು ಹಝ್ರತ್ ರಸೂಲುಲ್ಲಾಹ್(ಸ) ಅವರಿಗೆ ಹೊರತು ಯಾರಿಗೂ ನೀಡಿಲ್ಲ.

ಅನಂತರ ಆ ಮಿತ್ರರು ಹೇಳಿದರು. ತಮ್ಮ ಮಾತುಗಳು ನೇರವಾಗಿ ನನ್ನ ಮನಸ್ಸಿನಲ್ಲಿ ಇಳಿಯುವಂತೆ ಭಾಸವಾಗುತ್ತದೆ. ನಾನು ಈಗ ಅತ್ತುಬಿಡುವೆನು ಎಂಬಂತೆ ಭಾಸವಾಗುತ್ತಿದೆ ಆಗ ಹುಝೂರ್ ಹೇಳಿದರು. ನೀವು ಹಝ್ರತ್ ಅಖದಸ್ ಮಸೀಹ್ ಮೌಊದ್(ಅ) ರವರ ಗ್ರಂಥಗಳನ್ನು ಅಧ್ಯಯನ ಮಾಡಿ, ಅವರು ಪವಿತ್ರ ಖುರ್‌ಆನ್ ಮತ್ತು ಹಝ್ರತ್ ರಸೂಲುಲ್ಲಾಹ್(ಸ) ರವರ ಅಧ್ಯಾಪನೆಗಳನ್ನು, ಅವರ ಶಿಕ್ಷಣ ಮತ್ತು ಅವರ ಪ್ರೀತಿಯ ವಿನಹ ಬೇರೆ ಮಾತುಗಳನ್ನು ಅಥವಾ, ಅದಕ್ಕಿಂತ ಹೆಚ್ಚಿನವುಗಳನ್ನು ಹೇಳಲಿಲ್ಲ. ಇದೇ ನಿಜವಾಗಿದೆ. ಅಲ್ಲಾಹನು ನಿಮ್ಮನ್ನು ನಿಷ್ಠೆ ಮತ್ತು ಸಂಬಂಧದಲ್ಲಿ ಇನ್ನೂ ಸ್ತಿರತೆ ನೀಡುವಂತಾಗಲಿ ಮತ್ತು ತನ್ನ ಅನುಗ್ರಹ ದಯಪಾಲಿಸಲಿ.

ಓರ್ವ ಅಹ್ಮದಿ ಬಾಲಕಿ ಸಬೀಲಾ ಸಾಹಿಬಾ ಜಲ್ಸ ಸಾಲಾನಕ್ಕಾಗಿ ಹಝ್ರತ್ ಮಸೀಹ್ ಮೌಊದ್(ಅ) ರವರ ಒಂದು ಕವಿತೆ ಸಿದ್ಧಪಡಿಸಿದಳು. ಹುಝೂರ್ ಅನ್ವರ್‌ರೊಡನೆ ಭೇಟಿಯ ಸಮಯದಲ್ಲಿ ಉರ್ದುವಿನಲ್ಲಿ ಮಧುರ ಕಂಠದಿಂದ ಆ ಕವಿತೆ ಪ್ರಸ್ತುತಪಡಿಸಿದರು. ಕವಿತೆಯ ಮೊದಲ ಸಾಲು ಹೀಗಿದೆ.

ಓ ದೇಖ್ತಾ ಹೈ ಗೈರೊಂಸೇ ಕ್ಯೂಂ ದಿಲ್ ಲಗಾತೆ ಹೋ
ಜೋ ಕುಚ್ ಬುತೊಂ ಮೇ ಪಾತೆ ಹೋ ಉಸ್ಮೆ ಓ ಕ್ಯಾ ನಹೀ

* ಮೆಸೆಡೋನಿಯಾದಿಂದ ಬಂದ ದಂಪತಿ Cikarski Jordan ಸಾಹಿಬ್ ಮತ್ತು Lidija ಸಾಹಿಬಾ ತಮ್ಮ ಭಾವನೆಗಳನ್ನು ಹೀಗೆ ಹಂಚಿಕೊಂಡರು.

ನಾವು ಮೂರನೆ ಸಲ ಜಲ್ಸದಲ್ಲಿ ಭಾಗವಹಿಸುತ್ತಿದ್ದೇವೆ. ಇದೀಗ ನಾವು ನಮ್ಮನ್ನು ಜಮಾಅತಿನ ಒಂದು ಭಾಗ ಎಂದು ಭಾವಿಸುತ್ತೇವೆ. ಜಲ್ಸದ ವಾತಾವರಣವು ನಮ್ಮನ್ನು ತುಂಬಾ ಪ್ರಭಾವಿತಗೊಳಿಸಿದೆ. ಇಲ್ಲಿ ಪ್ರೀತಿ ಮತ್ತು ಸಹೋದರತೆಯು ವಾತಾವರಣವಿದೆ. ನಾವು ತುಂಬ ಸಂತೋಷದಿಂದ ಮುಂದಿನ ಜಲ್ಸದಲ್ಲಿ ಭಾಗವಹಿಸ ಬಯುಸುವೆವು. ನಾವು ಖಲೀಫರ ಭಾಷಣಗಳನ್ನು ಕೇಳುವಾಗ ತುಂಬ ಪ್ರಭಾವಿತರಾಗಿದ್ದೆವು. ವಿಶೇಷವಾಗಿ ಅವರು ಮನದಟ್ಟು ಮಾಡಿಸುವ ವಿಧಾನ ತುಂಬಾ ಚೆನ್ನಾಗಿದೆ.

* ಅತಿಥಿಯೋರ್ವರಾದ ಗೋರಾನ್‌ಸಿತವ್ ಬೋಲೆಸ್ಕಿ ಸಾಹಿಬ್ ಹೇಳಿದರು. ಜಲ್ಸದ ವ್ಯವಸ್ಥೆ ಅತ್ಯುತ್ತಮವಾಗಿತ್ತು. ವಿಶೇಷವಾಗಿ ಜಲ್ಸದ ಮುಖ್ಯ ಸಭಾಂಗಣದಲ್ಲಿ ಆದ ಕಾರ್ಯಕ್ರಮಗಳು ನಮ್ಮನ್ನು ತುಂಬಾ ಪ್ರಭಾವಿತಗೊಳಿಸಿದೆ. ಎಲ್ಲಾ ಏರ್ಪಾಡುಗಳು ತುಂಬಾ ಅಚ್ಚುಕಟ್ಟಾಗಿದ್ದವು. ಜಮಾಅತಿನ ಜನರ ವರ್ತನೆ ನೋಡಿ ಅವರಿಗೆ ತಮ್ಮ ಖಲೀಫರೊಡನೆ ಎಷ್ಟೊಂದು ಪ್ರೀತಿಯಿದೆ ಎಂದು ತಿಳಿದುಬರುತಿತ್ತು. ಅವರ ಈ ಪ್ರೀತಿ ಆದರ ನೋಡಿ ಅಚ್ಚರಿಯಾಯಿತು. ಇವೆಲ್ಲ ಮಾತುಗಳು ನಾವು ಹೋಗಿ ಮೆಸೆಡೋನಿಯಾದ ಜನರಿಗೆ ತಿಳಿಸುವೆವು.

**(ಮುಂದುವರಿಯುವುದು)**

### *126 ನೇ ಜಲ್ಸಾ ಸಾಲಾನ ಖಾದಿಯಾನ್*

ಸಯ್ಯದನಾ ಹುಝೂರ್ ಅನ್ವರ್ ಅಯ್ಯದಹುಲ್ಲಾಹು ತಆಲಾ ಬಿನಸ್ರಿಹಿಲ್ ಅಝೀಝ್‌ರವರು 126ನೇ (ವಾರ್ಷಿಕ ಸಮ್ಮೇಳನ) ಜಲ್ಸಾ ಸಾಲನ ಖಾದಿಯಾನಿಗೆ 24, 25 ಮತ್ತು 26ನೇ ಡಿಸೆಂಬರ್ 2021 (ಶುಕ್ರವಾರ, ಶನಿವಾರ ಮತ್ತು ಭಾನುವಾರ) ದ ದಿನಾಂಕಗಳ ಅನುಮತಿ ನೀಡಿದ್ದಾರೆ. ಎಲ್ಲಾ ಸದಸ್ಯರು ಇಂದಿನಿಂದಲೇ ದುಆ ಮಾಡಬೇಕಾಗಿ ಹಾಗೂ ಈ ಸಮ್ಮೇಳನದಲ್ಲಿ ಭಾಗವಹಿಸಲು ವಿನಂತಿ. ಅಲ್ಲಾಹನು ನಮಗೆಲ್ಲ ಈ ಸಮ್ಮೇಳನದಲ್ಲ ಭಾಗಿಯಾಗಲು ತೌಫೀಕ್ ನೀಡಲೀ. ಜಲ್ಸಾ ಸಾಲಾನ ಪ್ರತಿಯೊಂದು ವಿಷಯದಲ್ಲೂ ಅನುಗ್ರಹದಾಯಕವಾಗಲಿ ಅದೇ ರೀತಿ ಶುದ್ಧ ಆತ್ಮಗಳ ಮಾರ್ಗದರ್ಶನಕ್ಕೆ ಕಾರಣವಾಗಲಿ ಎಂದು ದುಆ ಮಾಡುತ್ತಾಯಿರಿ. **ಜಝಾಕುಮಲ್ಲಾಹ್.**

**(ನಾಝಿರ್ ಇಸ್ಲಾಹ್-ವ-ಇರ್‌ಶಾದ್ ಖಾದಿಯಾನ್)**

**ಇಸ್ಲಾಮ್ ಮತ್ತು ಅಹ್ಮದಿಯ್ಯತ್‌ನ ಮಾಹಿತಿಗಾಗಿ ನಮ್ಮನ್ನು ಸಂಪರ್ಕಿಸಿ:**

**NATIONAL TOLL FREE**

**1800–103–2131**

Printed & Published by: Jameel Ahmed Nasir on behalf of Nigran Board of Badar. Name of Owner: Nigran Board of Badar. And printed at Fazle-Umar Printing Press. Harchowal Road, Qadian, Distt. Gurdaspur-143516, Punjab. And published at office of the Weekly Badar Mohallah - Ahmadiyya, Qadian Distt. Gsp-143516, Punjab. India. Editor: Tariq Ahmed Idris.